ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಡಿಸೆಂಬರ್ 6 ಶುಕ್ರವಾರ 2024

₹4

ಸಂಪುಟ: 45 | ಸಂಚಿಕೆ: 229 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನನ್ನ ಜೀವನದ ಕೊನೆಯ ಹಂತದಲ್ಲಿ ಪ್ರಾರ್ಥಿಸುತ್ತೇನೆ

ಹಾಸನ ವಿಮಾನ ನಿಲ್ದಾಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

● ರಾಜ್ಯಸಭೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರ ವಿನಮ್ರ ಮನವಿ ● ಸಭಾಪತಿ ಜಗದೀಪ್ ಧನಕರ್ ಭಾವ ಸ್ಪಂದನೆ

ನವದೆಹಲಿ: ಪ್ರಸಿದ್ಧ ಬೇಲೂರು-ಹಳೇಬೀಡು-ಶ್ರವಣಬೆಳಗೊಳ ತಾಣಗಳ ಪ್ರವಾಸೋದ್ಯಮ ಅಭಿವೃದ್ಧಿ ಜೊತೆಗೆ ಜಿಲ್ಲೆಯ ರೈತರ ಅನುಕೂಲಕ್ಕಾಗಿ ಹಾಸನ ವಿಮಾನ ನಿಲ್ದಾಣ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕೇಂದ್ರಕ್ಕೆ ಮನವಿ ಮಾಡಿದರು.



ಜಗದೀಪ್ ಧನಕರ್



ಹೆಚ್.ಡಿ.ದೇವೇಗೌಡರು

ರಾಜ್ಯಸಭೆಯಲ್ಲಿ ಗುರುವಾರ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯಾಗಿರುವ ಹಾಸನ ಜಿಲ್ಲೆಯ ಪ್ರವಾಸಿ ತಾಣಗಳಿಗೆ ದೇಶ-ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಆದ್ದರಿಂದ ವಿಮಾನ ನಿಲ್ದಾಣ ಕಾರ್ಯಾರಂಭಿಸಿದರೆ ಇನ್ನೂ ಹೆಚ್ಚು ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಾರೆ. ಆರ್ಥಿಕ ಹಾಗೂ ವ್ಯೂಹಾತ್ಮಕ ಉದ್ದೇಶದಿಂದ ಹಾಸನ ವಿಮಾನ ನಿಲ್ದಾಣ ಬಹಳ ಮಹತ್ವದ್ದಾಗಿದೆ ಎಂದರು.

ಹಾಸನದಲ್ಲಿ ಮೂಲಭೂತ ಸೌಕರ್ಯಗಳಿಗೆ ಕೊರತೆ ಇಲ್ಲ. ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು ಕಾಲೇಜುಗಳಿವೆ. ಅಲ್ಲದೆ, ಭಾರತೀಯ ಬಾಹ್ಯಾಕಾಶ ಸಂಸ್ಥೆ(ಇಸ್ರೋ) ಉಪಗ್ರಹ ನಿಯಂತ್ರಣ ಕೇಂದ್ರವೂ ಇದೆ. ಕಾಫಿ, ಚಹಾ ರಫ್ತಿನಲ್ಲಿ ಮುಂಚೂಣಿಯಲ್ಲಿದೆ. ಇದು ವಿದೇಶಿ ವಿನಿಮಯ ಗಳಿಕೆಗೆ ಹೆಚ್ಚು ಪೂರಕವಾಗಿದೆ. ಪ್ರತೀ ತಿಂಗಳು ಹಾಸನ ಜಿಲ್ಲೆಯ ರೈತರು ಹಾಲು ಉತ್ಪಾದನೆ ಮೂಲಕ 900 ಕೋಟಿ ದುಡಿಮೆ ಮಾಡುತ್ತಿದ್ದಾರೆ. ವಿಮಾನ ನಿಲ್ದಾಣ ನಿರ್ಮಾಣವಾದರೆ ಹಾಲು, ಹಾಲಿನ ಉತ್ಪನ್ನಗಳು ಜೊತೆಗೆ ಕಾಫಿ, ಚಹಾ ಇನ್ನಿತರೆ ಕೃಷಿ ಉತ್ಪನ್ನಗಳ ರಫ್ತಿಗೆ ಅನುಕೂಲವಾಗುವುದರ ಜೊತೆಗೆ ವಿಜ್ಞಾನ, ತಂತ್ರಜ್ಞಾನ, ಪ್ರವಾಸೋದ್ಯಮ ಕ್ಷೇತ್ರಗಳ ಅಭಿವೃದ್ಧಿಗೆ ಸಹಕಾರಿ ಆಗುತ್ತದೆ ಪ್ರತಿಪಾದಿಸಿದರು.

ಹಾಸನವು ಮಂಗಳೂರು ಮತ್ತು ಚೆನ್ನೈ ಬಂದರುಗಳ ನಡುವೆ ಆಯಕಟ್ಟಿನ ಸ್ಥಳವಾಗಿದ್ದು, ಉತ್ತಮ ಸಂಪರ್ಕದಿಂದ ಅತೀದೊಡ್ಡ ವಾಣಿಜ್ಯ ಕೇಂದ್ರವಾಗಿದೆ. ಬೆಂಗಳೂರು-ಹಾಸನ ಹೆದ್ದಾರಿಯ ಭಾಗಗಳನ್ನು ಈಗಾಗಲೇ ಕೈಗಾರಿಕಾ ಕಾರಿಡಾರ್ ಎಂದು ಘೋಷಿಸಲಾಗಿದ್ದು, ಹೈದರಾಬಾದ್-ಬೆಂಗಳೂರು ಕಾರಿಡಾರ್ ಇದಕ್ಕೆ ಪೂರಕವಾಗಿದೆ. ಹಾಸನದಲ್ಲಿನ ವಿಮಾನ ನಿಲ್ದಾಣ ಬೆಂಗಳೂರು, ಮಂಗಳೂರು ಮತ್ತು ಚೆನ್ನೈ ಅನ್ನು ಉತ್ತಮವಾಗಿ ಸಂಪರ್ಕಿಸುತ್ತದೆ. ಇದು ಆರ್ಥಿಕವಾಗಿ ಲಾಭದಾಯಕ ಮತ್ತು ಕಾರ್ಯತಂತ್ರದ ಭಾಗವಾಗಿರುತ್ತದೆ ಎಂದರು.

ಈವರೆಗೆ ಹಲವು ಸರ್ಕಾರಗಳು ಬಂದು ಹೋಗಿವೆ. ದುರದೃಷ್ಟವಶಾತ್ ಹಾಸನ ವಿಮಾನ ನಿಲ್ದಾಣ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ. ಇದರಲ್ಲಿ ಕರ್ನಾಟಕದ ಐವರು ಮುಖ್ಯಮಂತ್ರಿಗಳು ರಾಜಕೀಯ ಮಾಡಿದ್ದಾರೆ. ನನ್ನ ಜೀವನದ ಕೊನೆಯ ಹಂತದಲ್ಲಿ ನಾನು ಈ ಸದನದಲ್ಲಿ ಕುಳಿತು ಯೋಜನೆಯು ಪೂರ್ಣಗೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ರೈತರಿಗಾಗಿ, ಹಾಸನ ಜಿಲ್ಲೆಯ ಅಭಿವೃದ್ಧಿಗಾಗಿ, ಕರ್ನಾಟಕಕ್ಕಾಗಿ, ಭಾರತದ ಪ್ರಗತಿಗಾಗಿ ಈ ವಿಮಾನ ನಿಲ್ದಾಣ ಆದಷ್ಟು ಬೇಗ ನಿರ್ಮಾಣ ಆಗಬೇಕಿದೆ ಎಂದು ಒತ್ತಾಯಿಸಿದರು.

ಲೋಕಸಭೆ ಮತ್ತು ವಿಧಾನಸಭೆ ಎರಡಕ್ಕೂ ಏಳು ಬಾರಿ ಆಯ್ಕೆಯಾಗಿರುವ ರೈತ ನಾನು. ನನ್ನ ಜೀವನದ 66 ವರ್ಷಗಳನ್ನು ಸಾರ್ವಜನಿಕ ಸೇವೆಗೆ ಮೀಸಲಿಟ್ಟಿದ್ದೇನೆ. ಹಾಸನ ವಿಮಾನ ನಿಲ್ದಾಣ ಪೂರ್ಣಗೊಳಿಸಬೇಕು. ಇದು ರೈತರನ್ನು ಉನ್ನತಿಗೆ ತರುತ್ತದೆ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಇದು ಕೇವಲ ಬೇಡಿಕೆಯಲ್ಲ. ತುರ್ತು ಅಗತ್ಯವಾಗಿದೆ ಎಂದು ಸಭಾಪತಿಗಳಲ್ಲಿ ದೇವೇಗೌಡರು ಮನವಿ ಮಾಡಿದರು.

ಮಾಜಿ ಪ್ರಧಾನಿಗಳ ಮಾತು ಆಲಿಸಿದ ನಂತರ ಸದನ ಉದ್ದೇಶಿಸಿ ಮಾತನಾಡಿದ ಸಭಾಪತಿ ಜಗದೀಪ್ ಧನಕರ್, ರೈತರು ಮತ್ತು ಅವರ ಸಮಸ್ಯೆಗಳ ಬಗ್ಗೆ ದೇವೇ ಗೌಡರು ಮಂಡಿಸಿದ ಎಲ್ಲಾ ವಿಚಾರಗಳು ನಮ್ಮೆಲ್ಲರ ಮುಂದಿವೆ. ಅವರ ಉಪಸ್ಥಿತಿಯನ್ನು ನಾವು ಆಶೀರ್ವಾದವೆಂದು ಪರಿಗಣಿಸುತ್ತೇವೆ. ಅವರ ಭಾವನೆಗಳು ನಮ್ಮ ಪಾಲಿಗೆ ಹೆಚ್ಚಿನ ಮೌಲ್ಯಯುತವಾಗಿವೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಆದ ಉದ್ಯಮಿ ಎಸ್.ಮಾದೇಗೌಡ ಅವರ ಹುಟ್ಟುಹಬ್ಬ ಆಚರಣೆ...



ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಆದ ಉದ್ಯಮಿ ಎಸ್. ಮಾದೇಗೌಡ ಅವರ ಹುಟ್ಟುಹಬ್ಬವನ್ನು ಎಸ್. ಮಾದೇಗೌಡ ಅಭಿಮಾನಿ ಬಳಗದ ವತಿಯಿಂದ ಆಚರಿಸಲಾಯಿತು. ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಆರ್‌ಎಂಸಿ ಬಸವರಾಜು, ಗೋವಿಂದರಾಜು, ರಾಮಚಂದ್ರು, ಶಂಕರೇಗೌಡ ಹಾಗೂ ಬಳಗದ ಸದಸ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮುಡಾ ಮಾಜಿ ಆಯುಕ್ತರು ಇಡೀ ಸರ್ಕಾರವನ್ನೇ ಅಲ್ಲಾಡಿಸುತ್ತಿದ್ದಾರೆ!

ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿದವರ ಮೇಲೆ ಕ್ರಮ ಏಕಿಲ್ಲ: ಶಾಸಕ ಶ್ರೀವತ್ಸ

ಮೈಸೂರು, ಡಿ.5(ಜಿಎ)-ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಮಾಜಿ ಆಯುಕ್ತರು ಇಡೀ ಸರ್ಕಾರವನ್ನೇ ಅಲ್ಲಾಡಿಸುತ್ತಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಡಾದ ಹಗರಣಕ್ಕೆ ಕಾರಣಕರ್ತರಾದ ಮಾಜಿ ಆಯುಕ್ತರಾದ ನಟೇಶ್, ದಿನೇಶ್ ಅವರುಗಳನ್ನು ಇನ್ನೂ ಬಂಧಿಸಿಲ್ಲ ಅಂದರೆ ಏನು ಅರ್ಥ. 48 ನಿವೇಶನ ಹಂಚಿಕೆಯಲ್ಲಿ ದಿನೇಶ್ ಕುಮಾರ್ ನೇರ ಪಾತ್ರ ಇದೆ. ಆಗಿದ್ದರೂ ಕೂಡ ಅವರಿಬ್ಬರ ಮೇಲೆ ಕ್ರಮ ತೆಗೆದುಕೊಳ್ಳದೆ ಮೀನಾ-ಮೇಷ ಎಣಿಸುತ್ತಿದ್ದಾರೆ. ಇಬ್ಬರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ಆಗ್ರಹಿಸಿದರು.

ಇಬ್ಬರ ಮೇಲೆ ಕ್ರಮ ವಹಿಸಲು ಸರ್ಕಾರವೇ ಅಸಡ್ಡೆ ತೋರುತ್ತಿದ್ದು, ಇವರಿಬ್ಬರು ಸಿಎಂ ಮತ್ತು ಸಚಿವ ಭೈರತಿ ಸುರೇಶ್ ಮೇಲೆ ಅಷ್ಟೊಂದು ಪ್ರಭಾವ ಬೀರಿದ್ದಾರೆ. ನಮ್ಮನ್ನ ಮುಟ್ಟಿದರೆ ಬೇರೆ ಎಲ್ಲಾ ಬಯಲಿಗೆ ಬರುತ್ತದೆ ಎಂದು ಎದುರಿಸುತ್ತಿರಬೇಕು. ಅದಕ್ಕೆ ಅವರನ್ನು ಬಂಧಿಸಲು ಹೆದರುತ್ತಿದ್ದಾರೆ. ಈಗಾಗಲೇ ಇವರ ಮೇಲೆ ಕಾನೂನು ಕ್ರಮ ಜರುಗಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ಕೂಡ ಪತ್ರ ಬರೆದಿದ್ದೇನೆ. ಹಿಂದೆ ಸಿಎಂ ಸಿದ್ದರಾಮಯ್ಯ ಅವರನ್ನು ಕಂಡರೆ ಅಧಿಕಾರಿಗಳು ಗಡಗಡ ನಡುಗುತ್ತಿದ್ದರು. ಆದರೆ ನಟೇಶ್ ಮತ್ತು ದಿನೇಶ್ ಇಬ್ಬರೂ ಸೇರಿ ಸಿಎಂ ಅವರನ್ನೇ ನಡುಗಿಸುತ್ತಿದ್ದಾರೆ ಎಂದರು.

ಇಡಿ ಎಲ್ಲಾ ಆಯಾಮಗಳಲ್ಲೂ ತನಿಖೆ ಮಾಡಿ ಮುಗಿಸಿದೆ. ಇನ್ನು ವೈಯಕ್ತಿಕವಾಗಿ ಒಬ್ಬೊಬ್ಬರನ್ನು ಕರೆದು ತನಿಖೆ ಮಾಡಬೇಕು ಅಷ್ಟೇ. ಆದರೆ, ಇಡಿ ಬಗ್ಗೆ ಎರಡು ವಿಚಾರದಲ್ಲಿ ನನಗೆ ಅಸಮಾಧಾನವಿದೆ. ಮುಡಾದಲ್ಲಿದ್ದ ಫೈಲ್‌ಗಳು ಎಲ್ಲಿಗೋದವು.? ಯಾಕೆ ಭೈರತಿ ಸುರೇಶ್ ಕಚೇರಿ ರೈಡ್ ಮಾಡಲಿಲ್ಲ.? 140 ಫೈಲ್‌ಗಳು ಅಲ್ಲಿಗೆ ಹೋಗಿವೆ ಎಂದು ಲೋಕಾಯುಕ್ತ ಟಿಪ್ಪಣಿ ಹಾಕಿದೆ. ದೂರುದಾರ ಸ್ನೇಹಮಯಿ ಕೃಷ್ಣ ಅವರ ಆರೋಪದಂತೆ ದಿನೇಶ್‌ಕುಮಾರ್ ಮತ್ತು ನಟೇಶ್ ಬೇರೆ ಕಡೆ ತಮ್ಮ ಸಂಬಂಧಿಕ ಹೆಸರಿನಲ್ಲಿ ಹೂಡಿಕೆ ಮಾಡಿದ್ದಾರೆ. ವಕ್ರತುಂಡ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ದಿನೇಶ್ ಕುಮಾರ್ ಕುಟುಂಬದ ಸದಸ್ಯರು ಇದ್ದಾರೆ ಅಂತಾರೆ. ಅಲ್ಲಿಗೆ ಯಾಕೆ ನೀವು ರೈಡ್ ಮಾಡಿಲ್ಲ ಎಂದು ಪ್ರಶ್ನಿಸಿದರು.

ಕೋರ್ಟ್ ಹೇಳಿದ ಕೆಲಸವನ್ನು ಮಾತ್ರ ನಾವು ಮಾಡುತ್ತೇವೆ ಎಂದು ಇಡಿ ಅಧಿಕಾರಿಗಳು ಹೇಳುತ್ತಾರೆ. ಮುಡಾ ಅಕ್ರಮದಲ್ಲಿ ಯಾರೇ ಆದರೂ ಸರಿ ಜೆಡಿಎಸ್ ಇರಲಿ, ಕಾಂಗ್ರೆಸ್ ಇರಲಿ, ಬಿಜೆಪಿ ಇರಲಿ, ಯಾರೇ ಅಕ್ರಮದಲ್ಲಿ ಭಾಗಿಯಾಗಿದ್ದರೂ ಅವರ ಮೇಲೆ ಕ್ರಮ ಆಗಲಿ, ಯಾರು ಬೇಡ ಎಂದು ಹೇಳುತ್ತಾರೆ ಎಂದರು.

ಮುಡಾದಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿಎಂ ಪತ್ನಿಗೆ 14 ನಿವೇಶನಗಳ ಕೊಟ್ಟ ಮಹಾಪುರುಷ ಯಾರು? 848 ಸೈಟುಗಳನ್ನು ಕಬಳಿಸಿದವರು ಯಾರು.? ಹಾಗಾದರೆ ನಮ್ಮ ಟೈಮಲ್ಲಿ ಏನೂ ನಡೆದಿಲ್ಲ ಅಂತ ಒಂದು ಬರವಣಿಗೆ ಮೂಲಕ ಪತ್ರ ನೀಡಲಿ ಎಂದು ತಿಳಿಸಿದರು.

ಹಾಸನ ಸಮಾವೇಶದ ಕುರಿತು ಮಾತನಾಡಿದ ಶಾಸಕರು, ಗೆದ್ದಿರುವ ಕ್ಷೇತ್ರಗಳಲ್ಲಿ ಅಲ್ಲಿನ ಜನರಿಗೆ ಕೃತಜ್ಞತೆ ಹೇಳುವ ಬದಲು ಹಾಸನದಲ್ಲಿ ಸಮಾವೇಶ ಯಾವ ಪುರುಷಾರ್ಥಕ್ಕೆ ಮಾಡುತ್ತಿದ್ದಾರೋ ಗೊತ್ತಿಲ್ಲ. ಶಿಗ್ಗಾಂವಿಯಲ್ಲಿ ಎಂದೂ ಗೆದ್ದಿರಲಿಲ್ಲ. ಅಲ್ಲಿ ಜನರಿಗೆ ಹೋಗಿ ಕೃತಜ್ಞತೆ ಹೇಳಬೇಕಿತ್ತು. ಚನ್ನಪಟ್ಟಣ ಬೋನಸ್ ಇತ್ತು. ಅಲ್ಲಿ ಗೆದ್ದಿದ್ದೀರಿ. ಅಲ್ಲಿ ಹೋಗಿ ಕೃತಜ್ಞತೆ ಹೇಳಬೇಕಿತ್ತು ಎಂದರು. ಹಾಸನದಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ತಮ್ಮ ಶಕ್ತಿ ಪ್ರದರ್ಶನ ಮಾಡಲು ಹೋಗಿದ್ದರು. ಆದರೆ, ಡಿಸಿಎಂ ಡಿ.ಕೆ.ಶಿವಕುಮಾರ್ ಚೆಕ್ ಮೇಟ್ ಕೊಟ್ಟಿದ್ದು, ಸ್ವಾಭಿಮಾನಿ ಸಮಾವೇಶದ ಬದಲು ಜನ ಕಲ್ಯಾಣ ಸಮಾವೇಶ ಎಂದು ಬದಲಿಸಿದ್ದಾರೆ. ಅವರಲ್ಲೇ ಗದ್ದುಗೆ ಗುದ್ದಾಟ ನಡೆಯುತ್ತಿದೆ ಎಂದು ಶ್ರೀವತ್ಸ ವ್ಯಂಗ್ಯವಾಡಿದರು.



ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುರುವಾರ ಗುದ್ದಲಿಪೂಜೆ ನೆರವೇರಿಸಿದರು.

2.30 ಕೋಟಿ ರೂ. ಕಾಮಗಾರಿಗೆ ಗುದ್ದಲಿಪೂಜೆ

ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ 2.30 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್. ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. 10 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ.51 ವೀರ ಮಡಿವಾಳ ದೋಬೀ ಘಾಟ್, ಚಾಮುಂಡಿ ಬೆಟ್ಟದ ರಸ್ತೆಯ ಅಭಿವೃದ್ಧಿ, 50 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ.61ರ ವಿದ್ಯಾರಣ್ಯಪುರಂನ 2ನೇ, 4ನೇ ಅಡ್ಡ ರಸ್ತೆಗಳ ಕಾಮಗಾರಿ, 1.50 ಕೋಟಿ ರೂ. ವೆಚ್ಚದಲ್ಲಿ ವಾರ್ಡ್ ನಂ.51ರ ರಾಮಾನುಜ 9ನೇ, 10ನೇ ಅಡ್ಡರಸ್ತೆ ಹಾಗೂ ಬಿ.ಬಿ.ಗಾರ್ಡನ್ ರಸ್ತೆ ಅಭಿವೃದ್ಧಿ ಮತ್ತು ರಾಮಾನುಜ ಮುಖ್ಯರಸ್ತೆ ಮರು ಡಾಂಬರೀಕರಣ, 02.10 ಲಕ್ಷ ರೂ ವೆಚ್ಚದಲ್ಲಿ ವಸಂತಮಹಲ್ ಆವರಣದಲ್ಲಿರುವ ಡಯಟ್ ಸಂಸ್ಥೆಯ ಹಾಲಿ ಇರುವ ಮೇಲ್ಮಟ್ಟ ಜಲಸಂಗ್ರಹಾಗಾರದಿಂದ ಕೊಳವೆ ಮಾರ್ಗದ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿ ಮತ್ತು ವಾರ್ಡ್ ನಂ.49 ಮತ್ತು 50ರ ಅಡ್ಡರಸ್ತೆಗಳನ್ನು 18.10 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಮಾಡಲು ಚಾಲನೆ ನೀಡಿದರು.

ಕೃಷ್ಣಪ್ಪ ಅವರ ಮಾತು ನಿಜವಾಗಿದೆ!!



ಹಾಸನ, ಡಿ.5- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ನುಡಿದಿದ್ದ ಭವಿಷ್ಯವಾಣಿಯನ್ನು ಹಾಸನ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸ್ತಾಪಿಸಿ, ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಜನ ಕಲ್ಯಾಣೋತ್ಸವ ಸಮಾವೇಶದಲ್ಲಿ ಅಬ್ಬರದ ಭಾಷಣ ಮೂಲಕ ದೇವೇಗೌಡರ ವಿರುದ್ಧ ವಾಕ್ ಪ್ರಹಾರ ನಡೆಸಿದ ಸಿದ್ದರಾಮಯ್ಯ, ಉಪಚುನಾವಣೆ ಸಮರದಲ್ಲಿ ದೇವೇಗೌಡರು ಆಡಿದ್ದ ಒಂದೊಂದು ಮಾತನ್ನೂ ಪ್ರಸ್ತಾಪಿಸಿ ತಿರುಗೇಟು ನೀಡಿದರು. ಈ ಮಧ್ಯೆ ಕೃಷ್ಣಪ್ಪ ನುಡಿದಿದ್ದ ಭವಿಷ್ಯ ವಾಣಿಯನ್ನೂ ಪ್ರಸ್ತಾಪಿಸಿ ಟಾಂಗ್ ಕೊಟ್ಟರು.

ದೇವೇಗೌಡರು ಯಾರನ್ನೂ ಬೆಳೆಯಲು ಬಿಡುವುದಿಲ್ಲ. ಬೇರೆಯವರಿರಲಿ ಒಕ್ಕಲಿಗರನ್ನೇ ಬೆಳೆಸಲಿಲ್ಲ. ಬಚ್ಚೇಗೌಡರು, ವೈ.ಕೆ.ರಾಮಯ್ಯ, ಬೈರೇಗೌಡರು, ಕೃಷ್ಣಪ್ಪ, ಚಲುವರಾಯಸ್ವಾಮಿ ಹೀಗೆ ಹಲವರನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ಮಾಡಿದರು. ಅಪ್ಪಟ ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ಅವರು ಆಗಲೇ ದೇವೇಗೌಡರಿಗೆ ಹೇಳಿದ್ದರು. ಈ **ಪಾಪದ ಹೊರೆಯನ್ನು ಮುಂದೆ ನೀವೇ ಹೊರಬೇಕಾಗುತ್ತದೆ ದೇವೇಗೌಡರೇ...** ಎಂದಿದ್ದರು. ಕೃಷ್ಣಪ್ಪ ಅವರ ಮಾತು ನಿಜವಾಗಿದೆ ಎಂದು ಸಿದ್ದರಾಮಯ್ಯ ಕಿಡಿಕಾರಿದರು. ನಾಗಮಂಗಲ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿದ್ದ ಹೆಚ್.ಟಿ.ಕೃಷ್ಣಪ್ಪ, ಎರಡು ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅತ್ಯಂತ ಶಿಸ್ತು ಪ್ರಾಮಾಣಿಕ ರಾಜಕಾರಣಿ ಎನಿಸಿಕೊಂಡಿದ್ದ ಅವರು ರಾಜಕೀಯ, ಸಾಹಿತ್ಯ, ರಂಗಭೂಮಿ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. 2021ರಲ್ಲಿ ಅವರು ಕಾಲವಾದರು.

ಸಿದ್ದರಾಮಯ್ಯನವರೆ, ಅಹಿಂದ ನಿಮಗೆ ಒಂದು ರಕ್ಷಾ ಕವಚವಷ್ಟೇ...!

ಬೆಂಗಳೂರು, ಡಿ.5- ಹಾಸನದಲ್ಲಿ ನಡೆದ ಜನ ಕಲ್ಯಾಣ ಸಮಾವೇಶದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಜೆಡಿಎಸ್ ಎಕ್ಸ್ (ಟ್ವೀಟ್) ಮೂಲಕ ತೀಕ್ಷ್ಣ ತಿರುಗೇಟು ನೀಡಿದೆ.

ದಲಿತ ಸಮಾಜಕ್ಕೆ ಸೇರಿದ ನಿಂಗನಿಗೆ ಸಿಗಬೇಕಿದ್ದ ಬದಲಿ ನಿವೇಶನಗಳನ್ನು ಅಕ್ರಮವಾಗಿ 'ರಾಜಕೀಯ' ಅಧಿಕಾರ ದುರ್ಬಳಕೆ ಮಾಡಿ ಕಬಳಿಸಿದಾಗ ಅಹಿಂದ ನೆನಪಾಗಲಿಲ್ಲವೇ ಸಿದ್ದಹಸ್ತ ಸಿದ್ದರಾಮಯ್ಯನವರೇ? ಮುಡಾ ಹಗರಣ ಬುಡಕ್ಕೆ ಬಂದಿರುವಾಗ ನಿಮಗೆ ಅಹಿಂದ ನೆನಪಾಗುತ್ತಿದೆ. ಮೆತ್ತಿಕೊಂಡಿರುವ ಕಪ್ಪುಮಸಿ ಅರ್ಥಾತ್ ವೈಟ್ನರ್ ಮರೆಮಾಚಲು ಸ್ವರಕ್ಷಣೆಗಾಗಿ ಹಾಸನದಲ್ಲಿ ಸಮಾವೇಶ ಮಾಡಿಕೊಂಡ ಡೋಂಗಿವಾದಿ ಎಂದು ಜೆಡಿಎಸ್ ವ್ಯಂಗ್ಯವಾಡಿದೆ.

ಅಂದು ಜೆಡಿಎಸ್ ವೇದಿಕೆಯಲ್ಲಿಯೇ ಅಹಿಂದ ಸಮಾವೇಶ ಮಾಡಿದ್ದರೆ ಹೆಚ್.ಡಿ. ದೇವೇಗೌಡರು ನಿಮ್ಮನ್ನು ಯಾಕೆ ಉಚ್ಚಾಟಿಸುತ್ತಿದ್ದರು? ನಾನು ಎಂಬ ಅಹಂನಿಂದ ಪಕ್ಷ ವಿರೋಧಿ ಚಟುವಟಿಕೆ, ಪಿತೂರಿ ನಡೆಸಿದ್ದಕ್ಕೆ ನಿಮ್ಮನ್ನು ಉಚ್ಚಾಟಿಸಲಾಯಿತು. ನಿವೃತ್ತಿಯಾಗಿದ್ದ ಸ್ವಜಾತಿ ಐಪಿಎಸ್ ಅಧಿಕಾರಿಯೊಬ್ಬರನ್ನು ಗೃಹ ಇಲಾಖೆ ಸಲಹೆಗಾರಾಗಿ ನೇಮಿಸಿಕೊಂಡು, ಆ ಇಲಾಖೆ ನಿರ್ವಹಿಸುತ್ತಿದ್ದ ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ಹತ್ತಿಕ್ಕಿದಾಗ ಅಹಿಂದ ನೆನಪಾಗಲಿಲ್ಲವೇ ಸಿದ್ದರಾಮಯ್ಯನವರೇ?. ದಲಿತ ಸಮಾಜದ ಜಿಲ್ಲಾಧಿಕಾರಿಯಾಗಿದ್ದ ಶಿಖಾ ಅವರ ಮೇಲೆ ನಿಮ್ಮ ಆಪ್ತ ಮರೀಗೌಡ ಹಲ್ಲೆ ನಡೆಸಿದರೂ ಸ್ವಜಾತಿ ವ್ಯಾಮೋಹಕ್ಕೆ ಒಳಗಾಗಿ ಮರೀಗೌಡನ ರಕ್ಷಣೆ ಮಾಡಿದಾಗ ಅಹಿಂದ ನೆನಪಾಗಲಿಲ್ಲವೇ? ಕನಿಷ್ಠ ನಾಚಿಕೆಯೂ ಆಗಲಿಲ್ಲವೇ ಸಿದ್ದರಾಮಯ್ಯ ಅವರೇ?. ಮುಡಾದಲ್ಲಿ ಮುಕ್ಕಿ ತಿಂದಿರುವ ಬೊಗಳೆ ಭಾಷಣಕಾರ ಜಾತಿವಾದಿ ಭ್ರಷ್ಟಾರಾಮಯ್ಯಗೆ 'ಅಹಿಂದ' ಎಂಬುದು ಒಂದು ರಕ್ಷಾ ಕವಚವಷ್ಟೇ. ಅಹಿಂದ ಎನ್ನುವ ಟ್ಯಾಗ್ ಇಟ್ಟುಕೊಂಡು ಇಷ್ಟೆಲ್ಲಾ ಅಸಹ್ಯ ಮಾಡಿಕೊಳ್ಳುತ್ತಿರುವ ನಿಮಗೆ ಆತ್ಮಸಾಕ್ಷಿ ಎನ್ನುವುದು ಇದೆಯಾ? ಎಂದು ಪ್ರಶ್ನಿಸಿದೆ.

ರಂಗ ತರಬೇತಿ ಶಿಬಿರ

ಮೈಸೂರು,ಡಿ.5-ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಡಿ.12ರಿಂದ ಜ.5ರವರೆಗೆ 25 ದಿನಗಳ ರಂಗ ತರಬೇತಿ ಶಿಬಿರವನ್ನು ಕಲಾಮಂದಿರದ ರಂಗ ತಾಲೀಮು ಕೊಠಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರವು ಪ್ರತಿದಿನ ಸಂಜೆ 5ರಿಂದ 6.30ರವರೆಗೆ ನಡೆಯಲಿದೆ. ಶಿಬಿರದಲ್ಲಿ ನಟನೆ, ಮೂಕಾಭಿನಯ, ಸನ್ನೆಗಳು, ಭಾವ-ಭಾವನೆಗಳು, ನಾಟಕ ರಚನಾ ತಂತ್ರ, ನಾಟಕದ ಓದು, ಅಭಿನಯ ಕೌಶಲ, ಸಂಭಾಷಣೆಯ ಏರಿಳಿತಗಳು, ನಟನೆಯಲ್ಲಿ ದೇಹ ರಚನೆ, ಮುಖವರ್ಣಿಕೆ ಬಗ್ಗೆ ಹೇಳಿಕೊಡಲಾಗುವುದು. ಮೊ. 7019441509.

ನಿಧನ



ಪುಟ್ಟಯ್ಯ

ಮೈಸೂರು, ಡಿ.5-ಮೈಸೂರಿನ ಹಿನಕಲ್ ನಿವಾಸಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯರವರ ದೊಡ್ಡಪ್ಪ ಪುಟ್ಟಯ್ಯ(96) ಗುರುವಾರ ನಿಧನರಾದರು. ಮೃತರು ಪತ್ನಿ, ಕಮಲಮ್ಮ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಡಿ.6) ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.12.2024 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನುನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೆನ್ನುನೋವಿನ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ 21ನೇ ಸಂಗೀತ ಸಮ್ಮೇಳನ-2024, ಸಂಜೆ 5.30 ರಿಂದ ಸಂಗೀತ ಕಾರ್ಯಕ್ರಮ, ವಿದುಷಿ ಭಾರ್ಗವಿ ವೆಂಕಟರಾಂ ಅವರಿಂದ ಗಾಯನ, ವಿದ್ವಾನ್ ವೈಭವ್ ರಮಣಿ-ವಯೋಲಿನ್, ವಿದ್ವಾನ್ ಬಿ.ಎಸ್. ಪ್ರಶಾಂತ್-ಮೃದಂಗ, ಸಂಜೆ 7.30ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರೋಪ ಭಾಷಣ : ಸಂಗೀತ ವಿದುಷಿ ಡಾ. ಟಿ.ಎಸ್. ಸತ್ಯವತಿ, ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ : ಸಮ್ಮೇಳನಾಧ್ಯಕ್ಷ ವೈಣಿಕ ವಿದ್ವಾನ್ ಡಾ. ರಾ. ವಿಶ್ವೇಶ್ವರನ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಎಂ. ಕೃಷ್ಣಪ್ಪ, ಅಧ್ಯಕ್ಷತೆ : ಕೇನ್ಸ್ ಟೆಕ್ನಾಲಜಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಅಧ್ಯಕ್ಷರಾದ ರಮೇಶ್ ಕಣ್ಣನ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ :** ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಸ್ಥಳ: ಉನ್ನತಿನಗರ ಬಡಾವಣೆ, ಬೆಳಗ್ಗೆ 10 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಸರ್ಕಾರಿ ಪದವಿಪೂರ್ವ ಕಾಲೇಜು:** ಪರಿನಿಬ್ಬಾಣ ದಿನದ ಅಂಗವಾಗಿ ಭಾರತ ಭಾಗ್ಯವಿಧಾತ ರೂಪಕ ಪ್ರದರ್ಶನ ಹಾಗೂ ಸಂವಾದ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ವಿದ್ಯಾರ್ಥಿಗಳೊಂದಿಗೆ ಸಂವಾದ: ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಎಸ್.ನರೇಂದ್ರಕುಮಾರ್, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಜಯರಾಮು, ಸ್ಥಳ: ಸರ್ಕಾರಿ ಪದವಿಪೂರ್ವ ಕಾಲೇಜು, ಒಂಟಿಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೈಲಚಿತ್ರ ಅನಾವರಣ ಕಾರ್ಯಕ್ರಮ, ತೈಲಚಿತ್ರ ಅನಾವರಣ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಮಂದಿರ, ಜಯಲಕ್ಷ್ಮಿಪುರಂ, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಮಹಾಪರಿನಿಬ್ಬಾಣ ದಿನ ಆಚರಣೆ, ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ ಅವರಿಂದ ವಿಷಯ ಮಂಡನೆ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 12ಕ್ಕೆ.

■ **ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ :** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಪರಿನಿಬ್ಬಾಣ ಅಂಗವಾಗಿ ಅಂಬೇಡ್ಕರ್ ತತ್ವ ಸಿದ್ಧಾಂತ ಮತ್ತು ಸಂವಿಧಾನದ ಮಹತ್ವ ಕುರಿತು ವಿಚಾರ ಸಂಕಿರಣ, ವಿಶ್ವಜ್ಞಾನ ಅವಲೋಕನ ಮಹಾಸಂಚಿಕೆ ಬಿಡುಗಡೆ, ಸಾಧಕರಿಗೆ ಮೈಸೂರು ರತ್ನ ಪುರಸ್ಕಾರ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಂಚಿಕೆ ಬಿಡುಗಡೆ : ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರಾದ ವೆಂಕಟರಮಣಸ್ವಾಮಿ, ಉಪಸ್ಥಿತರು : ಓಲೆ ಮಹದೇವ್, ಡಾ. ಡಿ. ಜಗನ್ನಾಥ್, ಡಾ. ಎಂ. ರೇವಣ್ಣ, ಹರಿಹರ ಆನಂದಸ್ವಾಮಿ, ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಕಲಾಸೌರಭ :** ವಿದ್ವಾನ್ ಸಾಯಿಶಿವು ಲಕ್ಷ್ಮಿಕೇಶವ್ ಅವರಿಂದ ಅಧ್ಯಯನ ಶಿಬಿರ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಚಂದ್ರಮೌಳೇಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ, ಸಂಜೆ 5ಕ್ಕೆ.

■ **ಅಂಬೇಡ್ಕರ್ ಹಿತರಕ್ಷಣಾ ಸಮಿತಿ ಹಾಗೂ ಪಡುವಾರಹಳ್ಳಿ ಗ್ರಾಮಸ್ಥರು:** ಡಾ. ಬಿ.ಆರ್. ಅಂಬೇಡ್ಕರ್‌ರವರ 68ನೇ ಪರಿನಿಬ್ಬಾಣದ ಅಂಗವಾಗಿ ಭೀಮಜ್ಯೋತಿ ಮೆರವಣಿಗೆ, ಮನೆ ಮನೆ ಧಮ್ಮ ದೀಪೋತ್ಸವ ಕಾರ್ಯಕ್ರಮ, ಸಂಜೆ 7.30 ಗಂಟೆಗೆ ಮಾತೃಮಂಡಳಿ ಶಾಲೆಯ ಹತ್ತಿರದ ಡಾ. ಬಿ.ಆರ್. ಅಂಬೇಡ್ಕರ್ ಆಟೋ ನಿಲ್ದಾಣ ವೃತ್ತದಿಂದ ಭೀಮಜ್ಯೋತಿ ಮೆರವಣಿಗೆ.

■ **ಪ್ರಮತಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ :** ಬೆಳಗ್ಗೆ 9.30ಕ್ಕೆ ಪ್ರಮತಿ ಉತ್ಸವ-2024, ಮುಖ್ಯ ಅತಿಥಿಗಳು : ಆರ್.ಎಸ್. ಅನಿರುದ್ಧ್, ಸುಹಾಸ್ ಅಶೋಕ್, ಶ್ಯಾಮ್ ಸಿಂಗ್ ಭಟ್; ಸಂಜೆ 4.30ಕ್ಕೆ ಪ್ರದರ್ಶನಗಳು, ಸಾಧನೆಗಳು ಮತ್ತು ಪಾಲಿಸಬೇಕಾದ ಕ್ಷಣಗಳು, ಮುಖ್ಯ ಅತಿಥಿಗಳು : ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ.

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ :** ಶುಭ ರಾಘವೇಂದ್ರ ಅವರಿಂದ ವಾಚನ, ಕೃ.ಪಾ. ಮಂಜುನಾಥ್ ಅವರಿಂದ ವ್ಯಾಖ್ಯಾನ, ಸ್ಥಳ: ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಕರ್ನಾಟಕ ಬುದ್ಧ ಧಮ್ಮ ಸಮಿತಿ:** ಬಾಬಾಸಾಹೇಬ್ ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ ಮತ್ತು ಕ್ಯಾಲೆಂಡರ್ ಬಿಡುಗಡೆ, ಸಾನ್ನಿಧ್ಯ: ಕೊಳ್ಳೇಗಾಲ ತಾಲೂಕಿನ ಚೆನ್ನಾಲಿಂಗನಹಳ್ಳಿ ಜೇತವನ ಬುದ್ಧವಿಹಾರ ಮನೋರಖ್ಖಿತ ಭಂತೇಜಿ, ಮುಖ್ಯ ಅತಿಥಿಗಳು: ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ, ಅಧ್ಯಕ್ಷತೆ: ಸಮಿತಿಯ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಸ್ಥಳ: ಬುದ್ಧ ವಿಹಾರ, ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.


■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ವಿದುಷಿ ಡಾ. ಕೃಪಾ ಫಡ್ಕೆಯವರ ಶಿಷ್ಯೆ ಕು. ಸ್ತುತಿ ಹೆಗಡೆ ಅವರ ಭರತನಾಟ್ಯ ರಂಗ ಪ್ರವೇಶ, ಅಧ್ಯಕ್ಷತೆ : ಭಾರತೀಯ ವಾಯುಪಡೆ ನಿವೃತ್ತ ಸೇನಾನಿ ಮಹಾಬಲೇಶ್ವರ ಹೆಗಡೆ, ಮುಖ್ಯ ಅತಿಥಿಗಳು : ಡಾ. ನಾರಾಯಣ ಹೆಗಡೆ, ಅನನ್ಯ ಕಲಾನಿಕೇತನ ನಿರ್ದೇಶಕರಾದ ಶ್ರೀಮತಿ ಬೃಂದಾ ಅಯ್ಯಂಗಾರ್, ಗುರುವಂದನೆ : ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ನಿರ್ದೇಶಕರಾದ ವಿದುಷಿ ಡಾ. ಕೃಪಾ ಫಡ್ಕೆ ಅವರಿಗೆ, ಕು. ಪೂಜಾ ಸುಗಮ್-ನಟುವಾಂಗ, ವಿದ್ವಾನ್ ದೀಪು ಕರುಣಾಕರನ್-ಹಾಡುಗಾರಿಕೆ, ವಿದ್ವಾನ್ ಶಿವಪ್ರಸಾದ್-ಮೃದಂಗ, ವಿದ್ವಾನ್ ಎ.ಪಿ. ಕೃಷ್ಣಕುಮಾರ್-ಕೊಳಲು, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಗಾನಭಾರತೀ, ಸಂಜೆ 6 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ಎಸ್. ವೈದ್ಯ, ಉದ್ಘಾಟನೆ: ಶಾಲಾ ಶಿಕ್ಷಣ, ಸಾಕ್ಷರತಾ ಮತ್ತು ಸಕಾಲ ಸಚಿವ ಮಧು ಬಂಗಾರಪ್ಪ, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ವೇಟ್ ಲಿಫ್ಟರ್ ಪುಷ್ಪರಾಜ್ ಹೆಗಡೆ, ಸಮಾಜ ಸೇವಕರಾದ ಶ್ರೀಮತಿ ಪುಷ್ಪಲತಾ ಮಂಕಾಳ ಎಸ್. ವೈದ್ಯ, ಸ್ಥಳ: ಸುತ್ತೂರು ಕ್ಷೇತ್ರ, ಸಂಜೆ 4ಕ್ಕೆ.

■ **ಸುತ್ತೂರು ಶ್ರೀ ಕ್ಷೇತ್ರ :** ಬೆಳಗ್ಗೆ 9.30ಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 38ನೇ ಪುಣ್ಯಾರಾಧನೆ ಹಾಗೂ ಜಾತ್ರಾ ಮಹೋತ್ಸವದ ಸಮಾಲೋಚನಾ ಸಭೆ, ಸಮ್ಮುಖ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ; ಬೆಳಗ್ಗೆ 10ಕ್ಕೆ ಜಾತ್ರಾ ಮಹೋತ್ಸವ ಸಭೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಡಾ.ಹೆಚ್.ಎಂ.ಕಲಾಶ್ರೀ, 6.15 ಗೀತಾ ರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು-ಬಾನುಲಿ ಸರಣಿ, ರಚನೆ: ಡಾ.ಕಲೀಂವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ-ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರದೀಪ್‌ಗಿರಿ ಎಸ್., ಸಹಾಯಕ ಕುಲಸಚಿವರು, ವಿದ್ಯಾರ್ಥಿವೇತನ ಘಟಕ ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ-ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ-'ಚಳಿಗಾಲದಲ್ಲಿ ಕಂಡುಬರುವ ಶ್ವಾಸಕೋಶದ ಸಾಮಾನ್ಯ ತೊಂದರೆಗಳು ಮತ್ತು ಚಿಕಿತ್ಸೆ' ಕುರಿತು ಶ್ವಾಸಕೋಶ ತಜ್ಞರಾದ ಡಾ. ಆರ್.ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ. ನಂತರ 'ಚಳಿಗಾಲದಲ್ಲಿ ಕಂಡುಬರುವ ಚರ್ಮದ ಸಾಮಾನ್ಯ ಸಮಸ್ಯೆಗಳು ಮತ್ತು ಆರೈಕೆ' ಕುರಿತು ಚರ್ಮರೋಗ ತಜ್ಞರಾದ ಡಾ.ಎಂ.ಸಂದೀಪ್ ಅವರೊಂದಿಗೆ ಮತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಸ್ವಾತಿ ತಿರುನಾಳ್ ಅವರ ರಚನೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ: ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ -ಎಂ.ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ, 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ನಾರಾಯಣ ಮತ್ತು ಎಂ.ಎಸ್.ಗೌತಮ್-ಯುಗಳ ನಾಗಸ್ವರ, 4.00 ಮಹಿಳಾ ರಂಗ, 4.30 ವೃತ್ತಿ ಮಾರ್ಗದರ್ಶನ 'ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ' ಕುರಿತು ಮಂಡ್ಯದ ಮಹಿಳಾ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಹಾಗೂ ಕ್ರಿಯಾ ಮೈಸೂರು ನಿರ್ದೇಶಕ ಪ್ರಸನ್ನಕುಮಾರ್ ಕೆರಗೋಡು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು: ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, 7.20 ಕೃಷಿ ಹಾಡುಗಳು, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ-ಆಹಾರ ಮತ್ತು ಅರೋಗ್ಯ ಕುರಿತು ಮಾತನಾಡುತ್ತಾರೆ ಡಾ. ರಾಘವೇಂದ್ರ ಎಂ.ಪಿ., ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಕುರಿತು ಮಾತನಾಡುತ್ತಾರೆ ಶಶಿಧರ ಡೋಂಗ್ರೆ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಿ.ವಿ.ರಮಣ್ ಮತ್ತು ಬಿ.ವಿ.ಲಕ್ಷ್ಮಣ್-ಯುಗಳ ಹಾಡುಗಾರಿಕೆ, 10.00 ತತ್ವ ಸಂಚಾರ-ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ-ಡಾ.ಮೈಸೂರು ಉಮೇಶ್, 10.30 ಸವಿನೆನಪು

ನಕ್ಕರೆ ಅದೇ ಸ್ವರ್ಗ

ಪತ್ನಿ : ಇವತ್ತಿನಿಂದ ನನ್ನನ್ನು 'ಚಿನ್ನ' ಅಂತ ಕರೀಬೇಡಿ...?
ಗಂಡ : ಯಾಕೆ?
ಪತ್ನಿ : ಐಟಿಯೋರು ಬಂದು ತೂಕ ಮಾಡಿ 100 ಗ್ರಾಂಗಿಂತ ಜಾಸ್ತಿಯಿದೆ ಎಂದು ತಗೊಂಡು ಹೋಗ್ತಾರೆ.

ಮೈಸೂರು ಮಿತ್ರ
ಶುಕ್ರವಾರ, 6 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........
ನಕಾರಾತ್ಮಕ ಆಲೋಚನೆಗಳು ಮನುಷ್ಯನನ್ನು ಬಲಹೀನಗೊಳಿಸುತ್ತದೆ.
–ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರಹಾಕು.

ನಿಮ್ಮ ಪತ್ರಗಳು

ಶಿಥಿಲಗೊಂಡಿರುವ ಶೌಚಾಲಯ ನವೀಕರಣಗೊಳಿಸಿ

ಮಾನ್ಯರೆ,
ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ನಂಜುಮಳಿಗೆ ವೃತ್ತದಲ್ಲಿರುವ ಪಾವತಿಸಿ ಉಪಯೋಗಿಸುವ ಸಾರ್ವಜನಿಕ ಶೌಚಾಲಯದ ವ್ಯವಸ್ಥೆ ಶೋಚನೀಯ ಸ್ಥಿತಿಯಲ್ಲಿದೆ. ಶೌಚಾಲಯ ಬಾಗಿಲುಗಳಿಗೆ ಸರಿಯಾದ ಚಿಲಕಗಳು ಇಲ್ಲ. ಬಾಗಿಲುಗಳು ಒಡೆದು ಹೋಗಿವೆ. ಶೌಚಾಲಯ ಬಳಸಿದರೆ ಹಣವನ್ನು ಸಂಗ್ರಹಿಸುತ್ತಾರೆ. ಆದರೆ ಸಾರ್ವಜನಿಕರ ಬಳಕೆಗೆ ಸೂಕ್ತವಾಗಿರುವಂತೆ ಸ್ವಚ್ಛತೆ ಹಾಗೂ ಸೂಕ್ತ ನಿರ್ವಹಣೆ ಮಾಡುತ್ತಿಲ್ಲ. ಸಾರ್ವಜನಿಕ ಶೌಚಾಲಯದ ಅವ್ಯವಸ್ಥೆ ಇಲ್ಲಿ ಮಾತ್ರ ಅಲ್ಲ. ಕೆ.ಆರ್.ಆಸ್ಪತ್ರೆಯ ಹತ್ತಿರ ಇರುವ ಸಾರ್ವಜನಿಕ ಶೌಚಾಲಯದ್ದು ಕೂಡ ಇದೆ ಸ್ಥಿತಿ. ದಯಮಾಡಿ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಪಾವತಿಸಿ ಬಳಸುವ ಸಾರ್ವಜನಿಕ ಶೌಚಾಲಯಗಳನ್ನು ಇನ್ನಾದರೂ ಸೂಕ್ತ ನಿರ್ವಹಣೆ ಮಾಡಿ, ಶಿಥಿಲ ಕಟ್ಟಡಗಳ ನವೀಕರಣ ಮಾಡುವ ಮೂಲಕ ಸಾರ್ವಜನಿಕರ ಬಳಕೆಗೆ ಯೋಗ್ಯವಾಗುವಂತೆ ನಿರ್ವಹಣೆ ಮಾಡಬೇಕಾಗಿ ವಿನಂತಿ.
–ಮಂಚೇಶ್ ದೇವಗಳ್ಳಿ, ಮೈಸೂರು

ರಸ್ತೆಗಳು 50 ಲಕ್ಷ ವಾಹನಗಳ ಓಡಾಟಕ್ಕಷ್ಟೇ ಯೋಗ್ಯ

ಮಾನ್ಯರೆ,
ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿರ್ವಹಣೆ ಭಾರಿ ಕಷ್ಟಕರವಾಗಲಿದೆ ಎಂದು ಬಿಬಿಎಂಪಿ, ಸಾರಿಗೆ ಇಲಾಖೆ, ಸಂಚಾರ ಪೊಲೀಸ್, ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ. ಹಾಲಿ ಬೆಂಗಳೂರಿನ ರಸ್ತೆಗಳು ಕೇವಲ 50 ಲಕ್ಷ ವಾಹನಗಳ ಓಡಾಟಕ್ಕೆ ಯೋಗ್ಯವಾಗಿವೆ. ಆದರೆ ರಾಜಧಾನಿಯಲ್ಲಿ ವಾಹನಗಳ ಸಂಖ್ಯೆ ಮಿತಿ ಮೀರಿದೆ. ಬೆಂಗಳೂರಿನ ರಸ್ತೆಗೆ ಪ್ರತಿದಿನ 2000 ಹೊಸ ವಾಹನಗಳು ಇಳಿಯುತ್ತಿವೆ. ಮುಂದಿನ ನಾಲ್ಕು ತಿಂಗಳಲ್ಲಿ 2 ಲಕ್ಷ ಹೊಸ ವಾಹನಗಳು ನಗರಕ್ಕೆ ಸೇರ್ಪಡೆಯಾಗಲಿವೆ. 2024ರ ಅಂತ್ಯಕ್ಕೆ 1.21 ಕೋಟಿ ವಾಹನಗಳು ನಗರದಲ್ಲಿ ನೋಂದಣಿಯಾಗಿವೆ. ನಿತ್ಯ ಹೊರ ರಾಜ್ಯದಿಂದ, ಜಿಲ್ಲೆಯಿಂದ ಬೆಂಗಳೂರಿಗೆ ಬಂದು ಹೋಗುವ ವಾಹನಗಳ ಸಂಖ್ಯೆ 1 ಲಕ್ಷ ಮೀರಬಹುದು ಎಂದು ಅಂದಾಜಿಸಲಾಗಿದೆ. ರಾಜಧಾನಿಯ ಹಿತರಕ್ಷಣೆಗಾಗಿ ವಾಹನಗಳ ಸಂಖ್ಯೆ ಕಡಿಮೆಯಾಗಬೇಕಿದೆ.
–ಎನ್.ಆರ್.ಚೇತನ್, ನಗರ್ಲೆ, ನಂಜನಗೂಡು.

ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ನಿಷೇಧಿಸಿ

ಮಾನ್ಯರೆ,
ಇಂದು ಸಮಾಜವು ಇಂಟರ್ನೆಟ್ ಸಂಪರ್ಕದಿಂದ ಅನೇಕ ಸಾಮಾಜಿಕ ಜಾಲತಾಣಗಳು ಬಳಕೆಯಲ್ಲಿವೆ. ಅಲ್ಲದೆ ಒಂದೆ ಕಡೆ ಉಪಯೋಗ ಪಡೆಯುತ್ತಿದ್ದರೂ ಮತ್ತೊಂದೆಡೆ ಇಂದಿನ ಜನ ಸಮೂಹ ಹೆಚ್ಚು ಹಣವನ್ನು ಗಳಿಸಬಹುದು ಎಂದು ಅನೇಕ ಬಗೆಯಲ್ಲಿ ಕೆಲವು ಸಿನಿಮಾ ತಾರೆಯರು ಮತ್ತು ಕೆಲ ಕ್ರೀಡಾಪಟುಗಳನ್ನು ಬಳಸಿಕೊಂಡು ಜಾಹೀರಾತು ನೀಡಿ ಇಂದು ಯುವ ಸಮೂಹವನ್ನು ತಮ್ಮತ್ತ ಸೆಳೆದು ಆನ್‌ಲೈನ್‌ನಲ್ಲಿ ಹಣವನ್ನು ಹೂಡಿಕೆ ಮಾಡಲು ಅನೇಕ app ಗಳನ್ನು ತೆರೆದಿವೆ.

ಇದನ್ನು ಬಳಸುವ ಕೆಲವರು ಪೋಷಕರ ಹಣ, ಸ್ನೇಹಿತರ ಬಳಿ ಸಾಲ ಹಾಗೂ ಇನ್ನಿತರ ಮೂಲದಿಂದ ಹಣ ಪಡೆದು ಹಿಂದಿರುಗಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಲಾಭ ಪಡೆದು ಸಂತೋಷ ಪಡೆದರೆ, ಕೆಲವರು ನಷ್ಟವಾಗಿ ಕುಟುಂಬದ ಜವಾಬ್ದಾರಿಗಳನ್ನು ಮರೆತು ಜಗಳ ಮಾಡಿಕೊಂಡು ಕೌಟುಂಬಿಕ ಕಲಹದಲ್ಲಿ ಗಂಡ ಹೆಂಡತಿಯರು ಬೇರೆ ಬೇರೆಯಾಗುತ್ತಿದ್ದು, ತಮ್ಮ ತಮ್ಮ ಮಕ್ಕಳನ್ನು ಅನಾಥರನ್ನಾಗಿ ಮಾಡುತ್ತಿದ್ದಾರೆ. ಇಂದಿನ ಸಮಾಜದಲ್ಲಿ ಯುವ ಸಮೂಹ ಆನ್‌ಲೈನ್‌ನಲ್ಲಿ ಹಣ ಹೂಡಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಗಳು ಈ ಅನಧಿಕೃತವಾಗಿ ಆನ್‌ಲೈನ್ ಹಣ ಹೂಡಿಕೆ ಮಾಡಿ ಆಟವಾಡಲು ತೆರೆದಿರುವ appಗಳನ್ನು ನಿಷೇಧಿಸಬೇಕೆಂದು ಈ ಮೂಲಕ ಮನವಿ.
–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಿಪಿಎಲ್ ಕಾರ್ಡ್ ಪಡೆದಿರುವ ಸರ್ಕಾರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳಲಿ

ಮಾನ್ಯರೆ,
ರಾಜ್ಯದಲ್ಲಿ ಅಕ್ರಮವಾಗಿ ಪಡೆದಿದ್ದ 13.87 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿರುವುದಾಗಿ ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಅವರು ಇತ್ತೀಚೆಗೆ ವಿಕಾಸಸೌಧದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ.

ಇದರಲ್ಲಿ ಸುಮಾರು 4,036 ಜನರು ಸರ್ಕಾರಿ ನೌಕರರು ಇದ್ದಾರೆ ಎಂದು ಹೇಳಿದ್ದಾರೆ. ಕಾನೂನುಬಾಹಿರವಾಗಿ ಮತ್ತು ನಿಯಮ ಉಲ್ಲಂಘಿಸಿ ಬಡ ಜನರ ಪಾಲಿನ ಈ ಬಿಪಿಎಲ್ ಕಾರ್ಡ್ ಪಡೆದಿರುವ ಸರ್ಕಾರಿ ನೌಕರರ ಮೇಲೇಕೆ, ಸರ್ಕಾರ ಕ್ರಮ ಕೈಗೊಳ್ಳಬಾರದು. ಇನ್ನು ಉಳಿದಂತೆ ಆದಾಯ ತೆರಿಗೆ ಪಾವತಿಸುವವರು, ಆದಾಯ ಹೆಚ್ಚು ಇರುವವರು ಬಿಪಿಎಲ್ ಕಾರ್ಡ್ ಪಡೆದಿರುವುದಾಗಿ ಹೇಳಿದ್ದಾರೆ. ಇಷ್ಟು ವರ್ಷಗಳ ಕಾಲ ಇದರ ಉಪಯೋಗ ಪಡೆದಿರುವವರು ಇದನ್ನು ಸರ್ಕಾರಕ್ಕೆ ವಾಪಸ್ ನೀಡುವಂತೆ ಸರ್ಕಾರವೇಕೆ ಕಾನೂನು ರೂಪಿಸಬಾರದು. ನನಗೆ ತಿಳಿದಿರುವಂತೆ ಈಗಲೂ ಗ್ರಾಮೀಣ ಪ್ರದೇಶದಲ್ಲಿ 10–15 ಎಕರೆ ಜಮೀನು ಹೊಂದಿರುವ ಶ್ರೀಮಂತ ವರ್ಗದ ರೈತರು ಸಹ ಈ ಬಿಪಿಎಲ್ ಕಾರ್ಡ್‌ನ ಉಪಯೋಗ ಪಡೆಯುತ್ತಿದ್ದಾರೆ. ಇಂತಹವರನ್ನು ಸಹ ಸರ್ಕಾರ ಗುರುತಿಸುವ ಕೆಲಸವಾಗಬೇಕು.
–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ವಿಮಾ ಕಂತಿನ ಮೇಲೆ ಜಿಎಸ್‌ಟಿ ಇಳಿಕೆ, ವಿಳಂಬವೇಕೆ?

ಮಾನ್ಯರೆ,
ನಿತಿನ್ ಗಡ್ಕರಿಯವರು ವಿಮಾ ಮೇಲಿನ ಜಿಎಸ್‌ಟಿ ರದ್ದು ಪಡಿಸುವಂತೆ ಪತ್ರ ಬರೆದ ಕಾರಣ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ವಿಮಾ ಮತ್ತು ಆರೋಗ್ಯ ವಿಮಾ ಮೇಲಿನ ಜಿಎಸ್‌ಟಿ ಬಗ್ಗೆ ಪರಾಮರ್ಶಿಸಲು ಸೆಪ್ಟೆಂಬರ್ 9 ರಂದು ಸಮಿತಿಯೊಂದನ್ನು ರಚಿಸಿ, ಅದು ಅಕ್ಟೋಬರ್ 30 ರಂದು ವರದಿ ನೀಡಲು ಸೂಚಿಸಲಾಯಿತು. ಆದರೆ ಮತ್ತೆ ಎರಡು ಸಭೆಗಳು ನಡೆದರೂ ಈ ಬಗ್ಗೆ ಸಮಿತಿ ವರದಿ ನೀಡದಿರುವುದು, ಈ ಬಗ್ಗೆ ಜಿಎಸ್‌ಟಿ ಮಂಡಳಿ ನಿರ್ಧರಿಸದಿರುವುದು ಬೇಸರದ ಸಂಗತಿ. ಈಗ ಲೋಕಸಭೆಯಲ್ಲಿ ಉತ್ತರ ನೀಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಮಿತಿ ಪರಿಶೀಲಿಸಲಿದೆ ಎಂದು ಉತ್ತರ ನೀಡಿದ್ದಾರೆ. ಇದು ಕೇವಲ ಜನರ ಕಣ್ಣೊರೆಸುವ ತಂತ್ರ. ಡಿ.21 ರಂದು ನಡೆಯುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ವರದಿ ಪಡೆದು ಅನುಷ್ಠಾನಕ್ಕೆ ತರುವ ಕೆಲಸವನ್ನು ಹಣಕಾಸು ಸಚಿವರು ಮಾಡಲಿ. ಜನರ ಆರೋಗ್ಯದ ಬಗ್ಗೆ ಸಚಿವರಿಗೆ, ಸರ್ಕಾರಕ್ಕೆ ಇಷ್ಟೊಂದು ಅಸಡ್ಡೆ ಏಕೆ?
–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಮಾಡುವಂತಹ ದಾನದಷ್ಟೆ ವಿಧಾನವೂ ಮುಖ್ಯ!

ನಾವೆಲ್ಲಾ ನಮ್ಮ ಜೀವನದ ಬಹಳಷ್ಟು ಸಮಯವನ್ನು ಲೆಕ್ಕಾಚಾರದಲ್ಲಿಯೇ ಕಳೆಯುತ್ತೇವೆ. ಅದು ಮಾಡಿದರೆ ಹೇಗೆ, ಇದು ಮಾಡಿದರೆ ಹೇಗೆ, ಅದನ್ನು ಮಾಡುವುದರಿಂದ ನನಗೆ ಎಷ್ಟು ಲಾಭವಾಗುತ್ತದೆ. ಇಂತಹ ಲೆಕ್ಕಾಚಾರ ನಮ್ಮಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ನಾನು ಕೊಡಬೇಕಾದ ಲೆಕ್ಕಕ್ಕಿಂತ ನನಗೆ ಬರಬೇಕಾದ ಲೆಕ್ಕದ ಬಗ್ಗೆ ನಮ್ಮ ನೆನಪಿನ ಶಕ್ತಿ ಜಾಸ್ತಿ. ಕೊಡಬೇಕಾದ್ದು ಮರೆಯಬಹುದು ಆದರೆ ಬರಬೇಕಾದ್ದು ನಮ್ಮ ನೆನಪಿನಿಂದ ಮಾಸಿ ಹೋಗುವುದಿಲ್ಲ. ನಾನು ಯಾರಿಗೆ ಕೊಡಬೇಕು ಎಂಬುದಕ್ಕಿಂತ ನನಗೆ ಬರಬೇಕಾದದ್ದರ ಲೆಕ್ಕಾಚಾರದಲ್ಲಿ ಬಹಳ ಪ್ರವೀಣರಿದ್ದಾರೆ.

ನಮ್ಮಲ್ಲಿ ಆಗಾಗ್ಗೆ ಹೇಳುವ ಒಂದು ಮಾತಿದೆ, ನನಗೆ ಬರಬೇಕು ಎಂದಾದರೆ ನಾನು ಕೊಡಬೇಕು ಎಂದು. ಸಾಮಾನ್ಯವಾಗಿ ಈ ಸಮಾಜ, ಈ ರಾಜ್ಯ, ಈ ದೇಶ ನನಗೇನು ಮಹಾ ಮಾಡಿದೆ ಎಂದು ಟೀಕೆ ಮಾಡುವವರಿಗೆ, ನೀನು ಈ ಸಮಾಜಕ್ಕೆ, ಈ ರಾಜ್ಯಕ್ಕೆ, ಈ ದೇಶಕ್ಕೆ ಏನು ಮಾಡಿದ್ದೀಯಾ ಎಂದು ಕೇಳಬೇಕಾಗುತ್ತದೆ. ಬ್ಯಾಂಕಿನ ಖಾತೆಯಿಂದ ಹಣವನ್ನು ಬರೀ ತೆಗೆಯುತ್ತಲೇ ಇರಲಾಗದು. ನಾವೂ ಸ್ವಲ್ಪಸ್ವಲ್ಪವಾದರೂ ಹಣ ಜಮಾ ಮಾಡುತ್ತಿರಬೇಕು. ಹಾಗಾದಾಗ ಹಣ ತೆಗೆಯಲು ನಮಗೆ ಅರ್ಹತೆ ಬರುತ್ತದೆ. ಇದು ಈ ಸಮಾಜಕ್ಕೂ ಅನ್ವಯವಾಗುತ್ತದೆ. ನಾವು ಭೋಗಿಗಳಾಗಬಾರದು, ಒಂದಷ್ಟು ತ್ಯಾಗಿಗಳೂ ಆಗಬೇಕು. ಆಗ ವ್ಯವಸ್ಥೆ ಸಮಸ್ಥಿತಿಯಲ್ಲಿ ಇರುತ್ತದೆ.

ನಾವು ಶಾಲಾ ಗಣಿತದಲ್ಲಿ ದುರ್ಬಲರಾದರೂ, ಇಂತಹ ಲೆಕ್ಕಾಚಾರದಲ್ಲಿ ಪ್ರವೀಣರೇ. ಯಾರೂ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ನಾವು ಏನು ಮಾಡಿದರೂ ನಮಗೆ ಲಾಭವಾಗಬೇಕು ಎಂಬ ಮನಸ್ಥಿತಿ ಹೆಚ್ಚಾಗಿ ಕಂಡುಬರುತ್ತದೆ. ನಾವೊಂದು ಕಾರ್ಯಕ್ರಮ ಮಾಡುತ್ತಿದ್ದೇವೆ, ಬನ್ನಿ ಎಂದರೆ, ಹಾಗೆ ಬರುವುದರಿಂದ ನನಗೆ ಏನು ಲಾಭವಾಗುತ್ತದೆ ಎಂದು ಕೇಳುವವರೇ ಹೆಚ್ಚಾಗಿ ಕಂಡುಬರುತ್ತಾರೆ. ಅಂದರೆ ನಾನು ಒಂದು ಕಾರ್ಯಕ್ರಮಕ್ಕೆ ಹೋದರೂ ನನಗೆ ಲಾಭವಾಗಬೇಕು ಎಂದುಕೊಳ್ಳುವವರು ಇದ್ದಾರೆ. ಅದನ್ನು ಅವರು ಹಣದ ರೂಪದಲ್ಲಿ ಲೆಕ್ಕ ಹಾಕುತ್ತಾರೆ. ಆದರೆ ಹಾಗೆ ಹೋದರೆ ನನ್ನ ಜ್ಞಾನ ವೃದ್ಧಿಯಾಗಬಹುದು ಎಂದು ಯೋಚಿಸುವುದಿಲ್ಲ. ಇಂತಹ ಲೆಕ್ಕಾಚಾರ ನಮ್ಮ ಮಕ್ಕಳ ವಿಷಯದಲ್ಲೂ ಆಗುತ್ತದೆ. ಮಕ್ಕಳನ್ನು ಬೆಳೆಸುವುದು ಮುಂದೆ ತಮ್ಮನ್ನು ಮಕ್ಕಳು ನೋಡಿಕೊಳ್ಳಲಿ ಎಂಬ ಉದ್ದೇಶದಿಂದ ಎಂಬ ಲೆಕ್ಕಾಚಾರ ಕಾಣುತ್ತೇವೆ. ಇದರಿಂದ ನನ್ನ ಸಂಬಂಧಗಳು ಶಿಥಿಲವಾಗುತ್ತವೆ. ಮಕ್ಕಳು ಮುಂದೆ ನನ್ನನ್ನು ವೃದ್ಧಾಶ್ರಮಕ್ಕೆ ಸೇರಿಸಿದಾಗ ಅಥವಾ ನಮ್ಮನ್ನು ಕಡೆಗಣಿಸಿದಾಗ ನಮ್ಮ ಈವರೆಗಿನ ಲೆಕ್ಕ ತಪ್ಪಿನಿಂದ ಕೂಡಿತ್ತು ಎಂದು ಪರಿತಪಿಸುವವರು ಇದ್ದಾರೆ. ನಾವು ಎಲ್ಲವನ್ನೂ ಇಂತಹ ಲೆಕ್ಕಾಚಾರಗಳಿಂದ ನೋಡಬಾರದು. ಕೆಲವು ಸಲ ನಮ್ಮ ಲೆಕ್ಕಾಚಾರ ತಪ್ಪುವುದು ನಮ್ಮ ಲಾಭ–ನಷ್ಟದ ಲೆಕ್ಕದಿಂದಲೇ ಎಂಬುದನ್ನು ಅರಿಯಬೇಕು. ತಂದೆ–ತಾಯಿಯರು ಮಕ್ಕಳನ್ನು ಅಕ್ಕರೆಯಿಂದ ನೋಡುವಾಗ ಇಂತಹ ಲೆಕ್ಕಾಚಾರ ಇರಬಾರದು. ಎಲ್ಲಿ ಲೆಕ್ಕವನ್ನೂ ಮೀರಿದ ಪ್ರೀತಿ ವಿಶ್ವಾಸ ಇರುತ್ತದೋ ಅಂತಹ ಕಡೆ ಜೀವನದಲ್ಲಿ ಆನಂದ ಕಂಡುಬರುತ್ತದೆ. ಮನೆಯವರು ಹೇಳುವುದು ಕನಿಷ್ಠ ಮನೆಯವರ ವಿಷಯದಲ್ಲಾದರೂ ಇಂತಹ ಲೆಕ್ಕಾಚಾರ ಮಾಡಬಾರದು, ಅಲ್ಲಿನ ಪ್ರೀತಿಯನ್ನು ಲೆಕ್ಕದಂತೆ ಪರಿಗಣಿಸಬಾರದು ಎಂದು.

ನಮ್ಮ ಅನೇಕ ಲೆಕ್ಕಾಚಾರಗಳು ನಮ್ಮ ದುರಾಸೆಯಿಂದ ತಪ್ಪಾಗುವ ಸಂದರ್ಭಗಳನ್ನು ನಾವೆಲ್ಲಾ ಒಂದಲ್ಲಾ ಒಂದು ಸಲ ಅನುಭವಿಸಿಯೇ ಇರುತ್ತೇವೆ. ಪ್ರತಿ ಸೋಲಿನಲ್ಲೂ ಗೆಲುವಿನ ಕಡೆಯ ಒಂದು ಹೆಜ್ಜೆ ಇರುತ್ತದೆ ಎಂಬುದನ್ನು ಮರೆಯದಿದ್ದರೆ ಸೋಲು–ಗೆಲುವಿನ ಮಾರ್ಗಸೂಚಿಯಾಗಿರುತ್ತದೆ. ಈ ಚಿಂತನೆಗೆ ಕಾರಣವಾದದ್ದು ಹಿಂದೆ ಓದಿದ್ದ ಹಾಗೂ ಆಗಾಗ್ಗೆ ನೆನಪಾಗುವ ಒಂದು ಲೆಕ್ಕಾಚಾರದ ಕಥೆಯಿಂದ. ದುರಾಸೆಯ ಲೆಕ್ಕಾಚಾರ ಹೇಗೆ ನಮಗೆ ಬರಬೇಕಾದ್ದನ್ನೂ ಬರದಂತೆ ತಡೆಯುತ್ತದೆ ಎಂಬುದು ಇದರ ಸಾರಾಂಶ.

ಕಥೆ ಹೀಗಿದೆ. ಒಂದು ಊರಿನ ದೇವಸ್ಥಾನದ ಬಳಿ ಇಬ್ಬರು ಹರಟೆ ಹೊಡೆಯುತ್ತಾ ಕುಳಿತಿರುತ್ತಾರೆ. ಮಾತಿನ ಭರದಲ್ಲಿ ಕತ್ತಲೆಯಾಗಿದ್ದೂ ಅವರಿಗೆ ತಿಳಿಯಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಮತ್ತೊಬ್ಬ ಅಪರಿಚಿತ ಬಂದ. ನಾನು ಇಲ್ಲಿ ಕುಳಿತುಕೊಳ್ಳಬಹುದೇ ಎಂದು ಕೇಳಿದ. ಅದು ಊರ ಮುಂದಿನ ದೇವಸ್ಥಾನದ ಜಾಗ. ಅದಕ್ಕೆ ಅವರಿಬ್ಬರೂ ಧಾರಾಳವಾಗಿ ಕುಳಿತುಕೊಳ್ಳಿ ಎಂದರು. ಮೂವರು ಒಂದಷ್ಟು ಹೊತ್ತು ಮಾತನಾಡಿದರು. ಅಷ್ಟರಲ್ಲಿ ಗಾಳಿ–ಮಳೆ ಶುರುವಾಯಿತು. ಹಾಗಾಗಿ ಅವರಿಗೆ ಅಲ್ಲಿಂದ ಹೊರಡಲಾಗಲಿಲ್ಲ. ಅಷ್ಟರಲ್ಲಿ ಮೂರನೆಯವನಿಗೆ ಹಸಿವಾಯಿತು. ಉಳಿದಿಬ್ಬರೂ ತಮಗೂ ಹಸಿವಾಗುತ್ತಿದೆ ಎಂದು ಹೇಳಿದರು. ಮೊದಲನೆಯವನು ನನ್ನ ಬಳಿ ಮೂರು ರೊಟ್ಟಿ ಇದೆ. ಅದನ್ನು ಹಂಚಿಕೊಂಡು ತಿನ್ನಬಹುದು ಎಂದನು. ಆಗ ಎರಡನೇ ವ್ಯಕ್ತಿ ನನ್ನ ಬಳಿ ಐದು ರೊಟ್ಟಿ ಇದೆ. ನಾವೆಲ್ಲರೂ ಸಮಾನವಾಗಿ ಹಂಚಿಕೊಂಡು ತಿನ್ನೋಣ ಎಂದ. ಮೂರನೆಯವನಲ್ಲಿ ರೊಟ್ಟಿ ಇರಲಿಲ್ಲ. ಅಂದರೆ ಮೂರರ ಜೊತೆಗೆ ಐದು ಸೇರಿ ಎಂಟಾಯಿತು. ಇದನ್ನು ಮೂವರು ಹೇಗೆ ಸಮಾನವಾಗಿ ಹಂಚಿಕೊಳ್ಳಬಹುದು ಎಂಬುದು ಸಮಸ್ಯೆಯಾಯಿತು. ಆಗ ಮೂರನೇ ವ್ಯಕ್ತಿ ಒಂದು ಉಪಾಯ ಹೇಳಿದ. ನಮ್ಮಲ್ಲಿರುವ ಒಟ್ಟು ಎಂಟು ರೊಟ್ಟಿಗಳನ್ನು ಮೂರು ತುಂಡು ಮಾಡೋಣ. ಆಗ 24 ತುಂಡುಗಳಾಗುತ್ತವೆ. ನಾವೆಲ್ಲಾ ಸಮಾನವಾಗಿ ಎಂಟು ತುಂಡು ತಿನ್ನಬಹುದು ಎಂದ. ಹಾಗೆಯೇ ತುಂಡು ಮಾಡಿ ಸಮಾನವಾಗಿ ತಿಂದು ಮಲಗಿದರು.



> **66** ನಾವು ದಾನ ಮಾಡಬೇಕು ಎಂದಾದಾಗ ಅದು ನಮ್ಮ ಶಕ್ತಿ ಮೀರಿದ್ದಾದರೆ ಅದಕ್ಕೆ ಮಹತ್ವ ಇರುತ್ತದೆ. ಮತ್ತೊಂದು ವಿಷಯ ಎಂದರೆ ನಾವು ದಾನ ಮಾಡುವುದು ಲಾಭದ ಉದ್ದೇಶಕ್ಕಾಗಿ ಇರಬಾರದು. ನನಗೆ ಶಕ್ತಿ ಇದೆ ಎಂದು ಕೊಡುವುದಕ್ಕಿಂತ ಕೊಡುವ ಗುಣ ಮುಖ್ಯವಾಗುತ್ತದೆ.

ಬೆಳಗಾದ ನಂತರ ಮೂರನೇ ವ್ಯಕ್ತಿ ಹೊರಡಲು ಅನುವಾಗಿ ನಾನು ನಿನ್ನೆ ನಿಮ್ಮೊಂದಿಗೆ ಕಾಲ ಕಳೆದೆ. ನಿಮ್ಮ ರೊಟ್ಟಿಯನ್ನೂ ನನಗೆ ನೀಡಿ ನನ್ನ ಹಸಿವು ನೀಗಿಸಿದ್ದೀರಿ. ನಿಮ್ಮಿಬ್ಬರಿಗೂ ಧನ್ಯವಾದಗಳು. ನನ್ನ ಬಳಿ ಎಂಟು ಚಿನ್ನದ ನಾಣ್ಯಗಳಿವೆ. ಅದನ್ನು ನಿಮ್ಮಿಬ್ಬರಿಗೂ ಕೊಡುತ್ತೇನೆ. ನೀವಿಬ್ಬರೂ ಅದನ್ನು ತೆಗೆದುಕೊಳ್ಳಿ ಎಂದು ಹೇಳಿ ಚಿನ್ನದ ನಾಣ್ಯ ನೀಡಿ ಹೊರಟುಹೋಗುತ್ತಾನೆ. ಇಂತಹ ಸಂದರ್ಭದಲ್ಲಿ ನಾವು ಸಾಮಾನ್ಯವಾಗಿ ಲೆಕ್ಕ ಹಾಕುವುದು ಅವರಿಬ್ಬರೂ ತಲಾ ನಾಲ್ಕು ನಾಣ್ಯ ಹಂಚಿಕೊಳ್ಳುತ್ತಾರೆ ಎಂದು. ಅದರಂತೆ ಮೊದಲ ವ್ಯಕ್ತಿ ನನ್ನ ನಾಲ್ಕು ಚಿನ್ನದ ನಾಣ್ಯ ನೀಡಿದರೆ ನಾನು ಹೋಗುತ್ತೇನೆ ಎಂದ. ಆದರೆ ಎರಡನೇ ವ್ಯಕ್ತಿ ಮತ್ತೊಂದು ರೀತಿಯಲ್ಲಿ ಲೆಕ್ಕ ಮಾಡುವವನು. ನಿನ್ನ ಬಳಿ ಮೂರು ರೊಟ್ಟಿ ಇತ್ತು. ನನ್ನ ಬಳಿ ಐದು ರೊಟ್ಟಿ ಇತ್ತು. ಆದ್ದರಿಂದ ಲೆಕ್ಕಾಚಾರದ ಪ್ರಕಾರ ನನಗೆ ಐದು ಚಿನ್ನದ ನಾಣ್ಯ ಸೇರಬೇಕು, ನಿನಗೆ ಮೂರು ಎಂದ. ಇದು ವಿವಾದಕ್ಕೆಡೆಯಾಗಿ ಇಬ್ಬರ ನಡುವೆ ಜಗಳವೇ ಆರಂಭವಾಯಿತು, ಕೊನೆಗೆ ಈ ಸಮಸ್ಯೆಯನ್ನು ಗ್ರಾಮದ ಮುಖ್ಯಸ್ಥನ ಬಳಿ ತೆಗೆದುಕೊಂಡು ಹೋದರು. ತಮ್ಮ ವಿವಾದದ ಕಥೆಯನ್ನು ಹೇಳಿ ನ್ಯಾಯ ನೀಡುವಂತೆ ಕೋರುತ್ತಾರೆ.

ಮುಖ್ಯಸ್ಥನಿಗೆ ಸಂದಿಗ್ಧ ಪರಿಸ್ಥಿತಿ. ಅವನಿಗೆ ಎರಡನೆಯವನು ಹೇಳಿದ್ದು ಸರಿ ಎನ್ನಿಸುತ್ತದೆ. ನಂತರ ಬಹಳ ಯೋಚಿಸಿ ಅವನು ತೀರ್ಪು ನೀಡುತ್ತಾನೆ. ಅದರಂತೆ ಮೊದಲನೆಯವನಿಗೆ ಒಂದು ನಾಣ್ಯ ಮಾತ್ರ ಸಿಗಬೇಕು. ಏಳು ಎರಡನೆಯವನಿಗೆ ಎಂಬುದು ಅವನ ತೀರ್ಪು. ಇದನ್ನು ಒಪ್ಪದ ಮೊದಲನೆಯವನು, ಮೊದಲೇ ಎರಡನೆಯವನು ತಾನಾಗೇ 3 ನಾಣ್ಯ ಕೊಡುವುದಾಗಿ ಹೇಳಿದ್ದಾನೆ. ನೀವು ಬರೀ ಒಂದು ನಾಣ್ಯ ಎಂದು ಹೇಳುವುದು ಸರಿಯಲ್ಲ ಎನ್ನುತ್ತಾನೆ. ಆಗ ಮುಖ್ಯಸ್ಥ ಹೇಳಿದ ಮಾತು ಗಮನಾರ್ಹವಾದುದು. ನಿನ್ನಲ್ಲಿದ್ದ ಮೂರು ರೊಟ್ಟಿಗಳಿಂದ 9 ತುಂಡುಗಳಾದವು. ಎರಡನೇ ವ್ಯಕ್ತಿ ಬಳಿ ಇದ್ದ ಐದು ರೊಟ್ಟಿ ಗಳಿಂದ 15 ತುಂಡುಗಳಾದವು. ಮೊದಲ ವ್ಯಕ್ತಿಯಾದ ನೀನು 9 ತುಂಡುಗಳಲ್ಲಿ 8 ಅನ್ನು ನೀನೇ ತಿಂದಿದ್ದೀಯಾ. ಆದರೆ ಎರಡನೆಯವನು ಹದಿನೈದು ತುಂಡುಗಳ ಪೈಕಿ ಏಳನ್ನು ಮೂರನೆಯವನಿಗೆ ಕೊಟ್ಟಿದ್ದಾನೆ. ನಿನ್ನ ಪಾಲಿನ ಒಂದು ತುಂಡು ಮಾತ್ರ ಮೂರನೆಯವನಿಗೆ ಸೇರಿದೆ. ಹಾಗಾಗಿ ಏಳು ನಾಣ್ಯ ಎರಡನೇ ವ್ಯಕ್ತಿಗೂ, ಒಂದು ನಾಣ್ಯ ಮೊದಲ ವ್ಯಕ್ತಿಗೂ ಸೇರಬೇಕು. ಅದು ನ್ಯಾಯ ಎನ್ನುತ್ತಾನೆ. ಆಗ ಮೊದಲನೆಯವನು ಇನ್ನು ಜಗಳ ಕಾಯದೆ ಮೊದಲು ಒಪ್ಪಿದ್ದಂತೆ ಮೂರು ನಾಣ್ಯ ತೆಗೆದುಕೊಳ್ಳಬೇಕಾಗಿತ್ತು. ನನ್ನ ಲೆಕ್ಕಾಚಾರವೇ ಬೇರೆಯಾಯಿತು ಎಂದು ಪಶ್ಚಾತ್ತಾಪಪಡುತ್ತಾನೆ.

ಇದೊಂದು ಕಥೆ ಇರಬಹುದು. ಆದರೆ ಅನೇಕ ವೇಳೆ ನಮ್ಮ ಲೆಕ್ಕಾಚಾರವೇ ಬೇರೆ, ನ್ಯಾಯದ ಲೆಕ್ಕಾಚಾರವೇ ಬೇರೆಯಾಗಿರುತ್ತದೆ. ನಾವು ನಮ್ಮ ಸುತ್ತಮುತ್ತಲಿನವರೊಂದಿಗೆ ಎಷ್ಟು ಹಾಗೂ ಹೇಗೆ ಹಂಚಿಕೊಳ್ಳುತ್ತೇವೆ ಎಂಬುದರ ಮೇಲೆ ಲೆಕ್ಕ ಮಾಡಬೇಕಾಗಿರುತ್ತದೆ. ಆದರೆ ನಾವು ನಮಗೆ ಅನುಕೂಲವಾಗುವಂತಹ ಲೆಕ್ಕ ಹಾಕುತ್ತೇವೆ. ಇದು ಸರಿಯಲ್ಲ ಎಂಬುದು ಮೇಲಿನ ಕಥೆಯ ಸಾರಾಂಶ.

ಇಂತಹ ಲೆಕ್ಕ ಹಾಕುವಾಗ ನಾವು ಮತ್ತೊಂದು ವಿಷಯವನ್ನೂ ಗಮನಿಸಬೇಕು. ಒಬ್ಬ ಮೂರು ಕೋಟಿ ರೂಪಾಯಿ ದಾನ ಮಾಡುತ್ತಾನೆ, ಮತ್ತೊಬ್ಬ ಮೂರು ನೂರು ರೂಪಾಯಿ ದಾನ ಮಾಡುತ್ತಾನೆ. ಇವರಲ್ಲಿ ಯಾರ ದಾನ ಶ್ರೇಷ್ಠ ಎಂದಾಗ ತಕ್ಷಣ ನಾವು ಮೂರು ಕೋಟಿ ದಾನವೇ ಶ್ರೇಷ್ಠ ಎಂದು ಹೇಳಿಬಿಡುತ್ತೇವೆ. ಆದರೆ ಮೂರು ಕೋಟಿ ಕೊಟ್ಟವ ಎಷ್ಟು ಶ್ರೀಮಂತ ಹಾಗೂ ಮೂರು ನೂರು ಕೊಟ್ಟವನ ಆರ್ಥಿಕ ಸ್ಥಿತಿ ಏನು ಎಂಬುದನ್ನು ಗಮನಿಸುವುದಿಲ್ಲ. ಮೂರು ಕೋಟಿ ಕೊಟ್ಟವ ಮೂವತ್ತು ಕೋಟಿಯ ಮಾಲೀಕ. ಅವನು ಮೂರು ಕೋಟಿ ನೀಡಿದ್ದು ಶೇಕಡಾ ಪ್ರಮಾಣ ಒಂದೂ ಆಗುವುದಿಲ್ಲ. ಆದರೆ ಮತ್ತೊಬ್ಬ ಮೂರು ಸಾವಿರ ಇರುವವನು 300 ಕೋಟಿ ನೀಡಿದ್ದಾನೆ ಎಂದರೆ ಅದರ ಶೇಕಡಾ ಪ್ರಮಾಣ 10ಕ್ಕಿಂತ ಹೆಚ್ಚು. ಹಾಗಾಗಿ ಎರಡನೆಯವನ ದಾನವೇ ಶ್ರೇಷ್ಠ ಎಂದು ಪರಿಗಣಿಸಬೇಕಾಗುತ್ತದೆ. ಅಂದರೆ ನಮ್ಮ ತಕ್ಷಣದ ಲೆಕ್ಕಾಚಾರ ಸರಿಯಾಗಿರುವುದಿಲ್ಲ. ಲೆಕ್ಕಾಚಾರ ಆಂತರ್ಯದ ವಿಧಾನವನ್ನೂ ಅನುಸರಿಸಬೇಕಾಗುತ್ತದೆ.

ನಾವು ಕೆಲವೊಮ್ಮೆ ದೇವಸ್ಥಾನಗಳಲ್ಲಿ ಲಕ್ಷಾಂತರ ಹಣ ನೀಡಿದವನಿಗಿಂತ ಸಾವಿರ ನೀಡಿದವನು ಹೆಚ್ಚು ಪ್ರಚಾರ ತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಕೆಲವೇ ನೂರು ನೀಡಿ ಖರೀದಿಸಿ ನೀಡಿದ ಟ್ಯೂಬ್‌ಲೈಟ್ ಮೇಲೆ ತನ್ನ ಹಾಗೂ ತನ್ನ ಮನೆತನದ ಹೆಸರು ಹಾಕಿಸಿ ಪ್ರಚಾರ ಪಡೆಯುವವರೂ ನಮ್ಮ ನಡುವೆ ಇದ್ದಾರೆ. ನಿಜವಾಗಿಯೂ ಲಕ್ಷಾಂತರ ದಾನ ಮಾಡಿದವರು ತಾನು ಹಾಗೆ ಮಾಡಿದೆ ಎಂದು ಯಾರ ಬಳಿಯೂ ಹೇಳಿಕೊಳ್ಳುವುದಿಲ್ಲ. ನಾವು ದಾನ ಮಾಡ ಬೇಕು ಎಂದಾದಾಗ ಅದು ನಮ್ಮ ಶಕ್ತಿ ಮೀರಿದ್ದಾದರೆ ಅದಕ್ಕೆ ಮಹತ್ವ ಇರುತ್ತದೆ. ಮತ್ತೊಂದು ವಿಷಯ ಎಂದರೆ ನಾವು ದಾನ ಮಾಡುವುದು ಲಾಭದ ಉದ್ದೇಶಕ್ಕಾಗಿ ಇರಬಾರದು. ನನಗೆ ಶಕ್ತಿ ಇದೆ ಎಂದು ಕೊಡುವುದಕ್ಕಿಂತ ಕೊಡುವ ಗುಣ ಮುಖ್ಯವಾಗುತ್ತದೆ.

ಇಂತಹವರಲ್ಲಿ ನಾವು ಯಾರನ್ನು ಮೆಚ್ಚುತ್ತೇವೆ ಎಂಬುದರ ಮೇಲೆ ನಮ್ಮ ಲೆಕ್ಕಾಚಾರದ ವಿಧಾನ ಅರಿವಾಗುತ್ತದೆ. ಕನಿಷ್ಠ ದೇವಸ್ಥಾನದಲ್ಲಿಯಾದರೂ ದೇವರಿಗೆ ಅರಿವಾಗಬಹುದು ಎಂಬುದನ್ನೂ ಯೋಚಿಸದಿರುವುದು ಸೋಜಿಗವೆನಿಸುತ್ತದೆ. ದೇಶವಿದ್ದರೆ ನಾನು, ದೇವರಿದ್ದರೆ ನಾನು ಎಂಬ ಮನೋಭಾವ ಅವಶ್ಯ ಎನಿಸುತ್ತದೆ.

ನಾಳೆ ಷಷ್ಠಿ; ಸಿದ್ದಲಿಂಗಪುರ ಬಳಿಯ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಅದ್ಧೂರಿ ರಥೋತ್ಸವ

● ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆ ● ಹೊಸದಾಗಿ ನಿರ್ಮಿಸಿರುವ ದೇವಸ್ಥಾನದಲ್ಲಿ ಸುರಕ್ಷತೆಗೆ ಆದ್ಯತೆ





ಸಿದ್ದಲಿಂಗಪುರದ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ಜೀರ್ಣೋದ್ಧಾರಗೊಂಡ ದೇವಾಲಯದ ಗರ್ಭಗುಡಿಗೆ ಅರ್ಚಕ ಎಂ.ವಿ.ಸುಬ್ರಹ್ಮಣ್ಯ ಪೂಜೆ ಸಲ್ಲಿಸುತ್ತಿರುವುದು. ಬಲಚಿತ್ರದಲ್ಲಿ ಷಷ್ಠಿ ಜಾತ್ರೆಗೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿರುವುದು.

ಮೈಸೂರು, ಡಿ.5(ಎಂಟಿವೈ)– ಮೈಸೂರು–ಬೆಂಗಳೂರು ಮುಖ್ಯರಸ್ತೆಯ ಸಿದ್ದಲಿಂಗಪುರದಲ್ಲಿರುವ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಾಲಯದಲ್ಲಿ ಡಿ.7ರಂದು ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿ ಜಾತ್ರೆ ಹಾಗೂ ರಥೋತ್ಸವ ವಿಜೃಂಭಣೆಯಿಂದ ಜರುಗಲಿದ್ದು, ಭಕ್ತರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲು ಸಿದ್ಧತೆ ನಡೆಸಲಾಗುತ್ತಿದೆ.

ಮೈಸೂರು ಭಾಗದ ಷಷ್ಠಿ ಜಾತ್ರೆಯೆಂದೇ ಮನೆಮಾತಾಗಿರುವ ಸಿದ್ಧಲಿಂಗಪುರದ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಸಂಪ್ರದಾಯದಂತೆ ಮಾರ್ಗಶಿರ ಮಾಸದ ಶುದ್ಧ ಷಷ್ಠಿಯ ದಿನ ಜಾತ್ರಾ ಮಹೋತ್ಸವ ನಡೆಯಲಿದ್ದು, ಈ ಜಾತ್ರೆಯಲ್ಲಿ ಸ್ಥಳೀಯ ಗ್ರಾಮಗಳ ಗ್ರಾಮಸ್ಥರು ಮಾತ್ರವಲ್ಲದೆ ವಿವಿಧ ಜಿಲ್ಲೆಗಳಿಂದಲೂ ಭಕ್ತರು ಆಗಮಿಸಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸುವ ವಾಡಿಕೆ ಇದೆ.

ಈ ಹಿನ್ನೆಲೆಯಲ್ಲಿ ಡಿ.7ರಂದು ನಡೆಯುವ ಜಾತ್ರೆಗೆ ಸೂಕ್ತ ಬಂದೋಬಸ್ತ್ ಮಾಡಿಕೊಳ್ಳಲಾಗುತ್ತಿದ್ದು, ಸಿದ್ದಲಿಂಗಪುರ ಜಾತ್ರೆಗೆ ಸಜ್ಜಾಗಿದೆ. ದೇವಾಲಯದ ಪುನರ್ ನಿರ್ಮಾಣದ ಹಿನ್ನೆಲೆಯಲ್ಲಿ ಕಳೆದ ವರ್ಷ ಷಷ್ಠಿದಿನ ಕೇವಲ ಸಾಂಪ್ರದಾಯಿಕ ಪೂಜೆಯಷ್ಟೇ ನೆರವೇರಿತ್ತು. ಈ ಬಾರಿ ದೇವಾಲಯ ನಿರ್ಮಾಣ ಕಾರ್ಯ ಪೂರ್ಣಗೊಂಡಿರುವುದರಿಂದ ಜಾತ್ರೆಯನ್ನು ಸಂಭ್ರಮದಿಂದ ನಡೆಸಲು ತೀರ್ಮಾನಿಸಲಾಗಿದ್ದು, ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆಯಿದೆ.

ಮುಂಜಾನೆ 3.30ರಿಂದಲೇ ದರ್ಶನ ಭಾಗ್ಯ: ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ಅರ್ಚಕ ಎಂ.ವಿ.ಸುಬ್ರಹ್ಮಣ್ಯ ಮಾತನಾಡಿ, ಮಾರ್ಗಶಿರ ಮಾಸದ ಶುದ್ಧ ಷಷ್ಠಿಯ ದಿನವಾದ ಡಿ.7ರಂದು ವಿಶೇಷ ಪೂಜೆ ಮತ್ತು ಜಾತ್ರೆ ನಡೆಯಲಿದೆ. ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿಯ ಮೂರ್ತಿಗೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪುರುಷ ಸೂಕ್ತ, ಶ್ರೀ ಸೂಕ್ತ, ಸಹಸ್ರನಾಮಾರ್ಚನೆ, ಅಷ್ಟಾವಧಾನ ಸೇವೆ ನೆರವೇರಿದ ಬಳಿಕ, 6 ಅಡಿ ಎತ್ತರದ ಬೆಳ್ಳಿಯ ನಾಗಾಭರಣ ಧರಿಸಿ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಮುಂಜಾನೆ 3ರಿಂದ ಭಕ್ತರಿಗೆ ಸ್ವಾಮಿ ದರ್ಶನ ಪಡೆಯಲು ಅವಕಾಶ ಮಾಡಿಕೊಡಲಾಗುತ್ತದೆ. ರಾತ್ರಿ 9.30ರವರೆಗೂ ದೇವಾಲಯ ಭಕ್ತರ ದರ್ಶನಕ್ಕಾಗಿ ತೆರೆದಿರುತ್ತದೆ. 10 ಗಂಟೆಗೆ ದೇವಾಲಯ ಬಂದ್ ಮಾಡಿ, ನಾಗಾಭರಣ ಬಿಚ್ಚಿ ಅರಮನೆಗೆ ಕೊಂಡೊಯ್ಯಲಾಗುತ್ತದೆ ಎಂದು ತಿಳಿಸಿದರು.

ಈ ಬಾರಿ ದೇವಾಲಯದ ಗರ್ಭಗುಡಿ ಮುಂದೆ ಕೇವಲ ದರ್ಶನ ಹಾಗೂ ಮಂಗಳಾರತಿಗೆ ಮಾತ್ರ ಅವಕಾಶವಿದ್ದು, ದೇವಾಲಯದ ಹಿಂಭಾಗವಿರುವ ಅರಳಿಕಟ್ಟೆ ಬಳಿ ಭಕ್ತರು ತಂದ ಹಾಲನ್ನು ಸಂಗ್ರಹಿಸಲಾಗುತ್ತದೆ. ಅಲ್ಲದೆ, ಹೂವು, ಪ್ರಸಾದ, ತೀರ್ಥವನ್ನು ಅಲ್ಲಿಯೇ ನೀಡಲಾಗುತ್ತದೆ. ಗರ್ಭಗುಡಿ ಮುಂದೆ ಹೊಸದಾಗಿ ಟೈಲ್ಸ್ ಹಾಕಿರುವುದರಿಂದ ತೀರ್ಥ ಟೈಲ್ಸ್ ಮೇಲೆ ಬೀಳುವುದರಿಂದ ಭಕ್ತರು ಜಾರಿ ಬೀಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅರಳಿಕಟ್ಟೆ ಬಳಿಯೇ ತೀರ್ಥ ವಿನಿಯೋಗಿಸಲಾಗುತ್ತದೆ ಎಂದರು.

ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ಎಂದಿನಂತೆ ಧರ್ಮದರ್ಶನ ಹಾಗೂ ಟಿಕೆಟ್ ಪಡೆದು ವಿಶೇಷ ದರ್ಶನ ಪಡೆಯಲೆಂದು ಎರಡು ಸಾಲಿನ ವ್ಯವಸ್ಥೆ ಮಾಡಲಾಗಿದೆ. ದೇವಾಲಯದ ಪಕ್ಕದ ಮೈದಾನದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ.

ಸರ್ವಿಸ್ ರಸ್ತೆ ಬಂದ್: ದೇವಾಲಯದ ಮುಂಭಾಗವಿರುವ ಬೆಂಗಳೂರು–ಮೈಸೂರು ರಸ್ತೆಯ ಸರ್ವಿಸ್ ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದ್ದು, ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸಂಚಾರ ಎಂದಿನಂತೆ ಇರುತ್ತದೆ. ನಾಗನಹಳ್ಳಿ ತಿರುವಿನವರೆಗೂ ಭಕ್ತರು ವಾಹನಗಳಲ್ಲಿ ಹೋಗಬಹುದಾಗಿದ್ದು, ಆ ನಂತರ ಕಾಲ್ನಡಿಗೆಯಲ್ಲಿ ತೆರಳಬಹುದು.

ತಲೆ ಎತ್ತಿವೆ ಅಂಗಡಿಗಳು: ಸಿದ್ಧಲಿಂಗಪುರದ ಷಷ್ಠಿ ಸುಬ್ರಹ್ಮಣ್ಯೇಶ್ವರ ಜಾತ್ರಾ ಮಹೋತ್ಸದ ಅಂಗವಾಗಿ ಸರ್ವಿಸ್ ರಸ್ತೆಯಲ್ಲಿ ವಿವಿಧ ತಿನಿಸು, ಆಟಿಕೆ ಸೇರಿದಂತೆ ವಿವಿಧ ವಸ್ತುಗಳ ಮಾರಾಟಕ್ಕೆ ಅಂಗಡಿಗಳು ತಲೆ ಎತ್ತಿವೆ.

ಅನುಮತಿ ಕಡ್ಡಾಯ: ಷಷ್ಠಿ ಅಂಗವಾಗಿ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಉಚಿತ ಪ್ರಸಾದ ವಿನಿಯೋಗಿಸುವವರು ಕಡ್ಡಾಯವಾಗಿ ಮೈಸೂರು ತಹಶೀಲ್ದಾರರಿಂದ ಅನುಮತಿ ಪಡೆಯಬೇಕಾಗಿದೆ. ಈ ಸಂಬಂಧ ಕಂದಾಯ ಇಲಾಖೆ ಸಿಬ್ಬಂದಿಯನ್ನು ದೇವಾಲಯದಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಲಾಗಿದೆ.

ನಂಬಿಕೆ: ಈ ದೇವಾಲಯದಲ್ಲಿ ಪೂಜೆ ಸಲ್ಲಿಸಿದರೆ ಒಳಿತಾಗುತ್ತದೆ ಎಂಬ ಪ್ರತೀತಿ ಇದೆ, ನಾಗರ ಸಿಕ್ಕು, ಚರ್ಮರೋಗ, ವಿವಾಹ ತಡವಾಗುವುದು, ಸಂತಾನ ಹೀನತೆ ಸೇರಿದಂತೆ ವಿವಿಧ ಸಮಸ್ಯೆಗಳಿಂದ ಬಳಲುತ್ತಿರುವವರು ಈ ದೇವಾಲಯದಲ್ಲಿ ಪೂಜೆ ಸಲ್ಲಿಸುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 6 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 229 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೇವೇಗೌಡರು ಯಾವ ಒಕ್ಕಲಿಗರನ್ನೂ ಬೆಳೆಯಲು ಬಿಟ್ಟಿಲ್ಲ...

ಜೆಡಿಎಸ್ ಕಟ್ಟಿದ್ದೇ ನಾವು; ದೇವೇಗೌಡರೇನು ನನ್ನ ಬೆಳೆಸಿಲ್ಲ; ನಾವಿಲ್ಲದಿದ್ದರೆ ಅವರು ಸಿಎಂ ಕೂಡ ಆಗುತ್ತಿರಲಿಲ್ಲ; ಅಹಿಂದ ಸಮಾವೇಶ ಮಾಡಿದ್ದಕ್ಕೆ ನನ್ನ ಪಕ್ಷದಿಂದಲೇ ಉಚ್ಚಾಟಿಸಿದರು; ಮೊಮ್ಮಗನ ಗೆಲ್ಲಿಸಲು ಚನ್ನಪಟ್ಟಣದಲ್ಲಿ ವಾರ ಕಾಲ ಠಿಕಾಣಿ ಹೂಡಿದರು; ಅಲ್ಲಿ ಕಣ್ಣೀರು ಹಾಕಿದವರು ಹಾಸನದಲ್ಲಿ ಕಣ್ಣೀರು ಹಾಕಿದ ಮಹಿಳೆಯರ ಕಂಡು ಎಂದಾದರೂ ಕಣ್ಣೀರು ಹಾಕಿದ್ದಾರಾ?

ಜನಕಲ್ಯಾಣ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಹಾಸನ, ಡಿ.5– ದೇವೇಗೌಡರು ಯಾರನ್ನೂ ಬೆಳೆಸಲು ಇಷ್ಟಪಡುವುದಿಲ್ಲ. ಅದರಲ್ಲೂ ಒಕ್ಕಲಿಗರನ್ನೇ ಬೆಳೆಯಲು ಬಿಟ್ಟಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಹಾಗೂ ಸ್ವಾಭಿಮಾನಿ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ಹಾಸನದ ಎಸ್.ಎಂ.ಕೃಷ್ಣ ನಗರದಲ್ಲಿರುವ ಕ್ರೀಡಾಂಗಣದಲ್ಲಿ ಇಂದು ನಡೆದ ಜನಕಲ್ಯಾಣ ಸಮಾವೇಶದಲ್ಲಿ ಅವರು ಮಾತನಾಡಿದರು.

ನಾವಿಲ್ಲದಿದ್ದರೆ ಗೌಡರು ಸಿಎಂ ಆಗ್ತಿರಲಿಲ್ಲ: ದೇವೇಗೌಡರ ಮನೆ ಮಗನಂತಿದ್ದ ಬಿ.ಎಲ್. ಶಂಕರ್, ವೈ.ಕೆ.ರಾಮಯ್ಯ ಅಲ್ಲದೆ ಬಚ್ಚೇಗೌಡ, ಕೃಷ್ಣಪ್ಪ, ಭೈರೇಗೌಡ ಅವರನ್ನೂ ಬೆಳೆಸಲಿಲ್ಲ. ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವನನ್ನಾಗಿ ಮಾಡಿದೆ ಹಾಗಾಗಿ ಅವರು ಬೆಳೆದರು ಎಂದು ದೇವೇಗೌಡರು ಹೇಳಿದ್ದಾರೆ. ನಾನು, ಜಾಲಪ್ಪ ಇಲ್ಲದೇ ಹೋಗಿದ್ದರೆ, 1994ರಲ್ಲಿ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ ಎಂದು ತಿರುಗೇಟು ನೀಡಿದರು.

ನಾವು ಜೆಡಿಎಸ್ ಕಟ್ಟಿದೆವು: ನಾನು, ಹೆಚ್.ಸಿ.ಮಹದೇವಪ್ಪ, ವೆಂಕಟೇಶ, ಸತೀಶ್ ಜಾರಕಿಹೊಳಿ, ನಾವೆಲ್ಲ ಜೆಡಿಎಸ್ ಪಕ್ಷವನ್ನು ಕಟ್ಟಿದೆವು. ಆದರೆ, ಅಹಿಂದ ಸಮಾವೇಶ ಮಾಡಿದೆ ಎನ್ನುವ ಒಂದೇ ಕಾರಣಕ್ಕೆ ನನ್ನನ್ನು ಪಕ್ಷದಿಂದ ಉಚ್ಚಾಟಿಸಿದರು. ದೇವೇಗೌಡರು ನನ್ನನ್ನು ಬೆಳೆಸಿಲ್ಲ. ಬದಲಾಗಿ ಅವರು ಮುಖ್ಯಮಂತ್ರಿ ಆಗಲು ನಾವು ಅವರ ಬೆಂಬಲಕ್ಕೆ ನಿಂತಿದ್ದೆವು ಎಂದು ಹೇಳಿದರು. ದೇವೇಗೌಡರು ವಯಸ್ಸಿಗೆ ತಕ್ಕಂತೆ ■6ನೇ ಪುಟಕ್ಕೆ





ಹಾಸನದಲ್ಲಿ ಗುರುವಾರ ನಡೆದ ಕಾಂಗ್ರೆಸ್‌ನ ಜನಕಲ್ಯಾಣ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಬಲಚಿತ್ರದಲ್ಲಿ ಸಮಾವೇಶದಲ್ಲಿ ನೆರೆದಿದ್ದ ಜನಸಮೂಹವನ್ನು ಕಾಣಬಹುದು.

ಡಾ.ರಾಜ್‌ಕುಮಾರ್ ನೆನೆದ ಸಿದ್ದರಾಮಯ್ಯ

ವರನಟ ರಾಜ್‌ಕುಮಾರ್ ಅವರು 'ಅಭಿಮಾನಿ ದೇವರು' ಎಂದು ಹೇಳುತ್ತಿದ್ದರು. ನಮಗೆ 'ಮತದಾರರೇ ದೇವರು'. ಮೂರು ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಚನ್ನಪಟ್ಟಣದಲ್ಲಿ ಈ ಜಿಲ್ಲೆಗೆ ಸೇರಿದ ಮಹಾನಾಯಕರ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಮಾಡಿದ್ದರು. ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ ಅವರ ಪುತ್ರ ಸ್ಪರ್ಧೆ ಮಾಡಿದ್ದರು. ಈ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿರಲಿಲ್ಲ. ಆದರೆ, ಕಾರ್ಯಕರ್ತರು, ಮತದಾರರ ಆಶೀರ್ವಾದದಿಂದ ಈ ಎರಡೂ ಕ್ಷೇತ್ರಗಳಲ್ಲಿ ಈಗ ಕಾಂಗ್ರೆಸ್ ಜಯಗಳಿಸಿದೆ ಎಂದರು.

ನೀವೆಲ್ಲ ನನ್ನ ಗರ್ವಭಂಗ ಮಾಡೋಕೆ ಬಿಡ್ತೀರಾ?

ಚನ್ನಪಟ್ಟಣದಲ್ಲಿ ದೇವೇಗೌಡರು ಸಿದ್ದರಾಮಯ್ಯನ ಗರ್ವಭಂಗ ಮಾಡ್ತೀನಿ ಅಂದ್ರು. ಹಲ್ಲುಮುರಿ ಕಚ್ಚಿಕೊಂಡು ಕಾಂಗ್ರೆಸ್ ಪಕ್ಷವನ್ನು ಕಿತ್ತೊಗೆಯಿರಿ ಅಂತ ಹೇಳಿದ್ದರು. ನೀವೆಲ್ಲ ನನ್ನ ಗರ್ವಭಂಗ ಮಾಡೋಕೆ ಬಿಡ್ತೀರಾ? ನೆರೆದಿದ್ದ ಸಾವಿರಾರು ಅಭಿಮಾನಿಗಳಿಗೆ ಸಿಎಂ ಸಿದ್ದರಾಮಯ್ಯ ಪ್ರಶ್ನೆ ಇದು. ದೇವೇಗೌಡರು ಯಾವಾಗಲೂ ನಮ್ಮದು ಜಾತ್ಯಾತೀತ ಪಕ್ಷ ಅನ್ನುತ್ತಿದ್ದರು. 2019ರ ಚುನಾವಣೆಯಲ್ಲಿ ಬಿಜೆಪಿ ಈ ದೇಶದಲ್ಲಿ ಮತ್ತೆ ಅಧಿಕಾರಕ್ಕೆ ಬರಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ, ಮೋದಿ ಪ್ರಧಾನಿ ಆದರೆ ದೇಶ ಬಿಡುತ್ತೇನೆ ಅಂದರು. ಮಿಸ್ಟರ್ ದೇವೇಗೌಡರೇ ದೇಶ ಬಿಡಬೇಡಿ. ಪಾಪ ನನಗಿಂತ 15 ವರ್ಷ ದೊಡ್ಡವರು, ಅವರ ವಯಸ್ಸಿಗೆ ತಕ್ಕಂತೆ ಮಾತನಾಡಬೇಕು. ಚನ್ನಪಟ್ಟಣದಲ್ಲಿ ಸಿದ್ದರಾಮಯ್ಯನ ಗರ್ವಭಂಗ ಮಾಡುತ್ತೀನಿ ಅಂದರು. ಹಲ್ಲುಮುರಿ ಕಚ್ಚಿಕೊಂಡು ಕಾಂಗ್ರೆಸ್ ಪಕ್ಷವನ್ನು ಕಿತ್ತೊಗೆಯಿರಿ ಅಂದರು. ನೀವೆಲ್ಲ ನನ್ನ ಗರ್ವಭಂಗ ಮಾಡೋಕೆ ಬಿಡುತ್ತೀರಾ? ಎಂದು ಅಭಿಮಾನಿಗಳನ್ನು ಸಿದ್ದರಾಮಯ್ಯ ಮತ್ತೆ ಕೇಳಿದರು.

ಸಾಯೋವರೆಗೂ ಸಿದ್ದರಾಮಯ್ಯ ಜೊತೆಗೆ ಬಂಡೆಯಾಗಿ ಇರ್ತೀನಿ

ಡಿಸಿಎಂ ಡಿ.ಕೆ.ಶಿವಕುಮಾರ್ ಘಂಟಾಘೋಷ!

ನಾನು ಸಿದ್ದರಾಮಯ್ಯನವರ ಜೊತೆ ಸಾಯೋವರೆಗೆ ಬಂಡೆಯಾಗಿ ಇರುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘಂಟಾಘೋಷಣೆ ಮಾಡಿದ್ದಾರೆ. ಜನಕಲ್ಯಾಣ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಇದು ಕೇವಲ ಜನಕಲ್ಯಾಣ ಸಮಾವೇಶ ಮಾತ್ರ ಅಲ್ಲ. ಇದು ಗ್ಯಾರಂಟಿಗಳ, ಗೆಲುವಿನ, ನಂಬಿಕೆಯ ಸಮಾವೇಶ. ಬಿಜೆಪಿಯ ಕುತಂತ್ರಕ್ಕೆ ಮೂರು ಉಪ ಚುನಾವಣೆಯಲ್ಲಿ ಜನರು ಉತ್ತರ ಕೊಟ್ಟಿದ್ದಾರೆ. ನಾವು ಯಾವತ್ತೂ ಭಾವನೆ, ಧರ್ಮದ ಮೇಲೆ ರಾಜಕಾರಣ ಮಾಡಲ್ಲ. ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ. ನಾವು ಮಾಡುತ್ತಿರುವ ಈ ಅಧಿಕಾರ ನಶ್ವರ, ಕಾಂಗ್ರೆಸ್ ಪಕ್ಷದ ಸಾಧನೆ, ನಮ್ಮ ಸಾಧನೆ ಎಂದಿಗೂ ಅಜರಾಮರ ಎಂದು ■6ನೇ ಪುಟಕ್ಕೆ

ಜನಕಲ್ಯಾಣೋತ್ಸವ ನನಗೆ ಆನೆಬಲ

ಹಾಸನದಲ್ಲಿ ಇಂದು ನಡೆದ ಜನಕಲ್ಯಾಣೋತ್ಸವದ ಅಭೂತಪೂರ್ವ ಯಶಸ್ಸು ನನಗೆ ಆನೆಬಲ ನೀಡಿದೆ. ನನ್ನ ಮತ್ತು ಪಕ್ಷದ ಮೇಲಿನ ಪ್ರೀತಿಯಿಂದ ದೂರದೂರದ ಊರುಗಳಿಂದ ಆಗಮಿಸಿ, ಅನ್ಯಾಯ, ಅಪಪ್ರಚಾರ, ದ್ವೇಷರಾಜಕಾರಣದ ವಿರುದ್ಧದ ನನ್ನ ದನಿಗೆ ದನಿಗೂಡಿಸಿದ ನನ್ನ ಎಲ್ಲಾ ಅಭಿಮಾನಿಗಳು ಮತ್ತು ಪಕ್ಷದ ಕಾರ್ಯಕರ್ತರಿಗೆ ನಾನು ಋಣಿ. ಈ ಕಾರ್ಯಕ್ರಮದ ಆಯೋಜನೆಗೆ ಶ್ರಮಿಸಿದ ಶೋಷಿತ ಸಮುದಾಯಗಳ ಸಂಘಟನೆಗಳು ಮತ್ತು ಪಕ್ಷದ ನಾಯಕರಿಗೆ ಅನಂತ ಧನ್ಯವಾದಗಳು. ಜನತೆಯ ಸೇವೆಯೇ ಜನಾರ್ಧನನ ಸೇವೆ. ಅಧಿಕಾರವೆಂಬುದು ಜನಸೇವೆ ಮಾಡಲು ಒದಗಿಬಂದ ಅವಕಾಶ ಎಂದು ಪ್ರಾಮಾಣಿಕವಾಗಿ ನಂಬಿದವನು ನಾನು. ಸತ್ಯ, ಧರ್ಮ ಮತ್ತು ನ್ಯಾಯದ ನಡಿಗೆಯಲ್ಲಿ ನನ್ನ ಜೊತೆ ಈ ನಾಡಿನ ಪ್ರಜ್ಞಾವಂತರು, ಶೋಷಿತ ಜನರು ಇದ್ದಾರೆ ಎಂಬುದಕ್ಕೆ ಇಂದು ಸೇರಿದ್ದ ಜನಸಾಗರವೇ ಸಾಕ್ಷಿ. ನಿಮ್ಮೆಲ್ಲರ ಪ್ರೀತಿ, ಆಶೀರ್ವಾದ ಇರುವವರೆಗೆ ರಾಜಕೀಯ ವಿರೋಧಿಗಳ ಯಾವ ಷಡ್ಯಂತ್ರ, ■6ನೇ ಪುಟಕ್ಕೆ

ಮುಡಾ ಹಗರಣ; ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ನಿರಾಕರಣೆ

ಸಿಎಂ ಅರ್ಜಿ ವಿಚಾರಣೆ ಜ.25ಕ್ಕೆ ಮುಂದೂಡಿಕೆ

- ಲೋಕಾಯುಕ್ತ ತನಿಖೆ ಪ್ರಶ್ನಿಸಿ; ಸಿಬಿಐ ತನಿಖೆಗೆ ಒಪ್ಪಿಸಬಾರದೆಂಬ ದೇವರಾಜ್ ಕೋರಿಕೆಯೂ ಅಂದೇ ವಿಚಾರಣೆ
- ಸಿದ್ದರಾಮಯ್ಯ ಪರ ಘಟಾನುಘಟಿ ನ್ಯಾಯವಾದಿಗಳ ವಾದ ಮಂಡನೆ



ಬೆಂಗಳೂರು, ಡಿ.5(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯಪಾಲರು ನೀಡಿದ್ದ ಅನುಮತಿ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಜನವರಿ 25ಕ್ಕೆ ಮುಂದೂಡಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ.ಅರವಿಂದ್ ನೇತೃತ್ವದ ವಿಭಾಗೀಯ ಪೀಠ, ಹೈಕೋರ್ಟ್ ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ಸಾಧ್ಯವಿಲ್ಲ. ಸಿಬಿಐ ತನಿಖೆ ಕೋರಿರುವ ಅರ್ಜಿಯಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ. ಸಂಬಂಧಪಟ್ಟ ಏಕಸದಸ್ಯ ಪೀಠಕ್ಕೆ ಮನವಿ ಸಲ್ಲಿಸಬಹುದು ಎಂದು ಸಲಹೆ ನೀಡಿದೆ.

ಸಿದ್ದರಾಮಯ್ಯ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠ, ವಾದ–ಪ್ರತಿವಾದ ಆಲಿಸಿ, ರಾಜ್ಯಪಾಲರು, ಸಿಬಿಐ ಹಾಗೂ ಲೋಕಾಯುಕ್ತಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಇದೇ ವೇಳೆ ಭೂ ಮಾಲೀಕ ■10ನೇ ಪುಟಕ್ಕೆ

ಮೈಸೂರಿನ ವಿಜಯನಗರ ಬಡಾವಣೆ; ಭೂಮಿಗೆ ಮಾರುಕಟ್ಟೆ ದರದನ್ವಯ ಪರಿಹಾರ ನೀಡಿ

ರಾಜ್ಯ ಸರ್ಕಾರಕ್ಕೆ ಸುಪ್ರೀಂ ಆದೇಶ

ನವದೆಹಲಿ, ಡಿ.5– ಮೈಸೂರು ಜಿಲ್ಲೆಯ ಹಿನಕಲ್ ಗ್ರಾಮದಲ್ಲಿ ವಿಜಯನಗರ ಬಡಾವಣೆ ನಿರ್ಮಾಣಕ್ಕಾಗಿ 1986ರಲ್ಲಿ ಸ್ವಾಧೀನಪಡಿಸಿಕೊಂಡ ಎರಡು ಎಕರೆ ಜಾಗದ ಮಾರುಕಟ್ಟೆ ಮೌಲ್ಯವನ್ನು ಪರಿಹಾರವಾಗಿ ಅದರ ಮಾಲೀಕರಿಗೆ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಕರ್ನಾಟಕ ಸರ್ಕಾರಕ್ಕೆ ಆದೇಶ ನೀಡಿದೆ.

ಭೂಸ್ವಾಧೀನದ ಪರಿಹಾರ ಮೊತ್ತವನ್ನು ಇಷ್ಟು ದೀರ್ಘ ಅವಧಿಯವರೆಗೆ ತಡೆಹಿಡಿಯುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾಂ ಅವರಿದ್ದ ಪೀಠವು ■10ನೇ ಪುಟಕ್ಕೆ

ಮೈಸೂರು ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿ ನೀರಿನ ಹಣ 1.25 ಕೋಟಿ ಗುಳುಂ

2023ರ ಏಪ್ರಿಲ್‌ನಿಂದ 2024ರ ಡಿಸೆಂಬರ್ 5ರವರೆಗೆ 490 ಗ್ರಾಹಕರಿಂದ ಸಂಗ್ರಹಿಸಿದ್ದ ನೀರಿನ ಶುಲ್ಕ ವಾಟರ್ ಇನ್ಸ್‌ಪೆಕ್ಟರ್ಸ್, ಮೀಟರ್ ರೀಡರ್ಸ್, ಬಿಲ್ಲಿಂಗ್ ಸಿಬ್ಬಂದಿ ಜೇಬಿಗೆ!; ಇಂದು ಕೆಲಸದಿಂದ ವಜಾ?

ಎಸ್.ಟಿ.ರವಿಕುಮಾರ್

ಮೈಸೂರು, ಡಿ.5–ಮುಖ್ಯಮಂತ್ರಿ ಸಿದ್ದರಾಮಯ್ಯರ ತವರು ಮೈಸೂರಲ್ಲಿ ಇತ್ತೀಚಿನ ದಿನಗಳಲ್ಲಿ ಒಂದರ ಹಿಂದೆ ಒಂದು ಅಕ್ರಮ, ಹಗರಣ ಬಯಲಾಗುತ್ತಲೇ ಇದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಅಕ್ರಮವಾಗಿ ಸಾವಿರಾರು ನಿವೇಶನಗಳನ್ನು ಮಂಜೂರು ಮಾಡಿ ಸಾವಿರಾರು ಕೋಟಿ ರೂ. ಹಣ ಲೂಟಿ ಮಾಡಿದ ಬೆನ್ನಲ್ಲೇ ಇದೀಗ ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್ಸ್ ಸಿಬ್ಬಂದಿ ಗ್ರಾಹಕರಿಂದ ಸಂಗ್ರಹಿಸಿದ್ದ ನೀರಿನ ಬಾಕಿ ಬಿಲ್ ಹಣವನ್ನು ಗುಳುಂ ಮಾಡಿರುವುದು ಬೆಳಕಿಗೆ ಬಂದಿದೆ.



2024ರ ಅಕ್ಟೋಬರ್‌ನಲ್ಲಿ ನೀರಿನ ಬಿಲ್ ಬಾಕಿ ವಸೂಲಾತಿ ಸಂಬಂಧ ಪ್ರಗತಿ ಪರಿಶೀಲನಾ ವೇಳೆ ಈ ಅಕ್ರಮ ಬೆಳಕಿಗೆ ಬಂದಿದ್ದು, ತನಿಖೆ ನಡೆಸಲು ಪಾಲಿಕೆಯ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು ನೇತೃತ್ವದಲ್ಲಿ ಸಮಿತಿ ರಚಿಸಿರುವ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಿ ಅವರನ್ನು ಕೆಲಸದಿಂದ ವಜಾಗೊಳಿಸಲು ಮುಂದಾಗಿದ್ದಾರೆ. ವಾರ್ಡ್ ನಂ. 17 ಮತ್ತು 25ರ ಮೀಟರ್ ರೀಡರ್ ಹೆಚ್.ಬಿ.ಗಿರೀಶ್, 35ನೇ ವಾರ್ಡ್‌ನ ಸೈಫುಲ್ಲಾ, 3 ಮತ್ತು 4, 5ನೇ ವಾರ್ಡಿನ ಪಿ.ವಿವೇಕ್, 45 ಮತ್ತು 46ನೇ ವಾರ್ಡಿನ ಎ.ವಿ.ಅಶೋಕ್‌ಕುಮಾರ್, 20ನೇ ವಾರ್ಡಿನ ಎಂ.ಪ್ರದೀಪ್‌ಕುಮಾರ್, 1 ಮತ್ತು 20ನೇ ವಾರ್ಡಿನ ಪಿ.ಜಯಶಂಕರ, 1 ಮತ್ತು 4ನೇ ವಾರ್ಡಿನ ಎಸ್.ಸಿ.ಮಧುಕುಮಾರ್, 1ನೇ ವಾರ್ಡಿನ ಸಿ.ಪಿ.ರಘು, 23ನೇ ವಾರ್ಡಿನ ಟಿ.ಎಂ.ಸಿದ್ದೇಶ, 20 ಮತ್ತು 21, 44ನೇ ವಾರ್ಡಿನ ಎಂ. ಮಲ್ಲೇಶ್, 9 ಮತ್ತು 10ನೇ ವಾರ್ಡಿನ ಸಿ.ಕುಮಾರ್, ಭಾರತ್‌ನಗರ ಮತ್ತು ಸಾತಗಳ್ಳಿಯ ಆರ್.ಎಸ್.ದೇವೇಗೌಡ, 11, 12 ಮತ್ತು 13ನೇ ವಾರ್ಡಿನ ರಜೀಕ್ ಅಹಮದ್, 13 ಮತ್ತು 14ನೇ ವಾರ್ಡಿನ ಸಿ.ಎಂ.ಸಾಗರ್, ■10ನೇ ಪುಟಕ್ಕೆ

ಮೈಸೂರು ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪುನರ್ ನಿರ್ಮಾಣ

ಪಾಲಿಕೆ ಪ್ರಸ್ತಾವನೆಗೆ ಸಚಿವ ಸಂಪುಟದಲ್ಲಿ ಅನುಮೋದನೆ ಭರವಸೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮಹದೇವಪ್ಪ

ಮೈಸೂರು, ಡಿ.5(ಆರ್‌ಕೆ)– ಹಲವು ವರ್ಷಗಳಿಂದ ಶಿಥಿಲಗೊಂಡು ಅಪಾಯದ ಅಂಚಿನಲ್ಲಿರುವ ಮೈಸೂರಿನ ಹೃದಯ ಭಾಗದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳನ್ನು ನೆಲಸಮ ಮಾಡಿ, ಪುನರ್ ನಿರ್ಮಾಣ ಮಾಡುವ ಪಾಲಿಕೆಯ ಪ್ರಸ್ತಾವನೆಯನ್ನು ಮುಂಬರುವ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಿ, ಅನುಮೋದನೆ ಪಡೆದುಕೊಳ್ಳುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸಭೆ ನಡೆಸಿದ ಅವರಿಗೆ ಮೈಸೂರು ಮಹಾನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧು, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಕಟ್ಟಡಗಳನ್ನು ಪಾರಂಪರಿಕ ಶೈಲಿಯಲ್ಲೇ ಪುನರ್ ನಿರ್ಮಾಣ ಮಾಡುವ ಕುರಿತು ಎಸ್ಟಿಮೇಟ್‌ನೊಂದಿಗೆ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ದೇವರಾಜ ಮಾರುಕಟ್ಟೆ ನಿರ್ಮಾಣಕ್ಕೆ 91.6 ಕೋಟಿ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಕ್ಕೆ 36.95 ಕೋಟಿ ಖರ್ಚಾಗಲಿದ್ದು, ನೀಲಿನಕ್ಷೆಯೊಂದಿಗೆ ನಗರಾಭಿವೃದ್ಧಿ ಇಲಾಖೆಗೆ ಮಾಹಿತಿ ನೀಡಲಾಗಿದೆ ಎಂದರು. ಈ ನಡುವೆ ದೇವರಾಜ ಮಾರುಕಟ್ಟೆಯ ಕೆಲ ಅಂಗಡಿಗಳ ಬಾಡಿಗೆದಾರರು ಕಟ್ಟಡ ನೆಲಸಮಗೊಳಿಸದಂತೆ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ನ್ಯಾಯಾಲಯವು ಪಾಲಿಕೆ ಪರವಾಗಿ ತೀರ್ಪು ನೀಡಿದ್ದು, ಬಾಡಿಗೆದಾರರು ಅದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಈವರೆವಿಗೂ ಸುಪ್ರೀಂಕೋರ್ಟ್ ನಿಂದ ಯಾವುದೇ ನಿರ್ದೇಶನ ಬಂದಿಲ್ಲದಿರುವ ಕಾರಣ ನಾವು ಸರ್ಕಾರಕ್ಕೆ ಡಿಪಿಆರ್‌ನೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಆದರೆ ಲ್ಯಾನ್ಸ್‌ಡೌನ್ ಕಟ್ಟಡದ ಮರುನಿರ್ಮಾಣಕ್ಕೆ ಯಾವುದೇ ನಿರ್ಬಂಧವಿಲ್ಲ ಎಂಬುದನ್ನು ಸಿಂಧು ಅವರು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ಅದಕ್ಕೆ ಪ್ರತಿಕ್ರಿಯಿಸಿದ ಡಾ.ಹೆಚ್.ಸಿ. ಮಹದೇವಪ್ಪ, ಈ ಸಂಬಂಧ ತಾವು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿ, ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಈ ಯೋಜನೆಗೆ ಹಣ ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು. ಈಗಾಗಲೇ ಈ ಎರಡೂ ಕಟ್ಟಡಗಳ ಸಂಬಂಧ ಪಾರಂಪರಿಕ ತಜ್ಞರ ಸಮಿತಿ ಸದಸ್ಯರು ■10ನೇ ಪುಟಕ್ಕೆ



ದೇವರಾಜ ಮಾರುಕಟ್ಟೆ

ದೇವರಾಜ ಮಾರುಕಟ್ಟೆ ಕಟ್ಟಡಕ್ಕೆ ಆರ್‌ಸಿಸಿ ರೂಫಿಂಗ್ ಬದಲು ಮದ್ರಾಸ್ ತಾರಸಿ ಹಾಕುವುದು, 1.10 ಕೋಟಿ ರೂ. ವೆಚ್ಚದಲ್ಲಿ ಸುಟ್ಟ ಇಟ್ಟಿಗೆ ಮತ್ತು ಲೈಮ್ ಕಾಂಕ್ರೀಟ್ ಅಳವಡಿಸುವುದು, ಆರ್‌ಸಿಸಿ ಕಾಲಂ ಬದಲು ಬ್ರಿಕ್ ಬಳಕೆ, ಎಲ್ಲಾ ಕಿಟಕಿ ಬಾಗಿಲುಗಳಿಗೆ ತೇಗದ ಮರ ಬಳಕೆ, ಲೈಮ್ ಪ್ಲಾಸ್ಟರಿಂಗ್, ಪ್ರಸ್ತುತ ಇರುವ ಪಾರಂಪರಿಕ ಶೈಲಿಯ ವಿನ್ಯಾಸ ಸೇರಿದಂತೆ ಗುಣಮಟ್ಟದ ಕಟ್ಟಡವನ್ನು ನಿರ್ಮಿಸಲು ಪಾಲಿಕೆ ಅಧಿಕಾರಿಗಳು 91.6 ಕೋಟಿಯ ಎಸ್ಟಿಮೇಟ್ ತಯಾರಿಸಿದ್ದಾರೆ.



ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ ತಾರಸಿಗೆ ಆರ್‌ಸಿಸಿ ಬದಲು ಮದ್ರಾಸ್ ಟೆರೇಸ್ ನಿರ್ಮಾಣಕ್ಕೆ 2.06 ಕೋಟಿ ರೂ., ಸಿಮೆಂಟ್ ಕಾಂಕ್ರೀಟ್ ಬದಲು ಲೈನ್ ಕಾಂಕ್ರೀಟ್‌ಗೆ 28 ಲಕ್ಷ, ಬಾಗಿಲು– ಕಿಟಕಿಗಳಿಗೆ ತೇಗದ ಮರ ಬಳಕೆ, ಕಟ್ಟಡದ ಗೋಡೆಗಳ ಹೊರ ಮತ್ತು ಒಳಭಾಗಕ್ಕೆ ಲೈಮ್ ಪ್ಲಾಸ್ಟರಿಂಗ್ ಮಾಡಲು 1.40 ಕೋಟಿ, ಪ್ರಸ್ತುತ ಇರುವ ಪಾರಂಪರಿಕ ಶೈಲಿಯ ವಿನ್ಯಾಸ ಕೆಲಸದೊಂದಿಗೆ ಒಟ್ಟು 36.95 ಕೋಟಿ ರೂ. ವೆಚ್ಚದಲ್ಲಿ ಕಟ್ಟಡವನ್ನು ಪೂರ್ಣಗೊಳಿಸಲು ಡಿಪಿಆರ್ ಸಿದ್ಧಪಡಿಸಲಾಗಿದೆ.

ಐದನೇ ಪುಟದಿಂದ

ಒಕ್ಕಲಿಗರನ್ನೂ ಬೆಳೆಯಲು ಬಿಟ್ಟಿಲ್ಲ...

ಮಾತನಾಡಬೇಕು. 2019ರಲ್ಲಿ ನರೇಂದ್ರ ಮೋದಿ ಪ್ರಧಾನಿಯಾದರೆ, ದೇಶ ಬಿಡುವುದಾಗಿ ಹೇಳಿದ್ದರು. ಈಗ ಚನ್ನಪಟ್ಟಣದಲ್ಲಿ ಸಿದ್ದರಾಮಯ್ಯ ಗರ್ವಭಂಗ ಮಾಡುತ್ತೇನೆ. ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಿರಿ ಎಂದು ಹೇಳಿದರು. ನಾನು ದೇವೇಗೌಡರಿಂದ ಈ ಮಾತುಗಳನ್ನು ನಿರೀಕ್ಷೆ ಮಾಡಿರಲಿಲ್ಲ. ಒಂದು ವಾರ ಚನ್ನಪಟ್ಟಣದಲ್ಲಿ ದೇವೇಗೌಡರು, ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಕಣ್ಣೀರು ಹಾಕಿದ್ದೇ ಹಾಕಿದ್ದು. ಆದರೆ, ಹಾಸನದಲ್ಲಿ ಮಹಿಳೆಯರು ಕಣ್ಣೀರು ಹಾಕುತ್ತಿದ್ದಾರೆ. ಇಲ್ಲಿಗೆ ಬಂದು ಕಣ್ಣೀರು ಹಾಕಿದ್ದಾರಾ? ಎಂದು ಪ್ರಶ್ನಿಸಿದರು.

ಕೇಂದ್ರದ ಅನ್ಯಾಯ ಪ್ರಶ್ನಿಸಿದ್ದೀರಾ: ತೆರಿಗೆಯಲ್ಲಿ ಸರಿಯಾದ ಪಾಲು ಕೊಡುತ್ತಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನದಲ್ಲಿ ಕಡಿತ ಮಾಡಿದ್ದಾರೆ. 4.5 ಲಕ್ಷ ಕೋಟಿ ತೆರಿಗೆಯನ್ನು ಕರ್ನಾಟಕದಿಂದ ಕೊಡಲಾಗುತ್ತಿದೆ. ನಮಗೆ ಬರುತ್ತಿರುವುದು ಕೇವಲ 13 ಪೈಸೆ. ರಾಜ್ಯಕ್ಕೆ ಇಷ್ಟೊಂದು ಅನ್ಯಾಯ ಆಗುತ್ತಿದೆ. ಈ ಬಗ್ಗೆ ಕೇಳಿದ್ದೀರಾ ದೇವೇಗೌಡರೇ? ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕೇಳಿದ್ದಾರಾ ಎಂದು ಪ್ರಶ್ನಿಸಿದರು.

ದ್ವೇಷ, ಸೇಡಿನ ರಾಜಕಾರಣ ಮಾಡಬೇಡಿ: ದೇವೇಗೌಡರಿಗೆ ದೇವರು ಒಳ್ಳೆಯ ಆರೋಗ್ಯ ಕೊಡಲಿ. ಅವರು ರಾಜಕಾರಣ ಮಾಡಲಿ. ಆದರೆ, ದ್ವೇಷ, ಸೇಡಿನ ರಾಜಕಾರಣ ಮಾಡಬೇಡಿ ಎಂದು ಸಲಹೆ ನೀಡಿದ ಸಿದ್ದರಾಮಯ್ಯ, ಕೋಮುವಾದಿಗಳ ಜೊತೆಗೆ ಸೇರಿಕೊಂಡು ಜಾತ್ಯತೀತ ಜನತಾ ದಳ ಎಂದು ಹೆಸರು ಇಟ್ಟುಕೊಳ್ಳಲು ದೇವೇಗೌಡರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದರು.

ದೊಡ್ಡ ಸಮಾವೇಶ: ಮೈಸೂರಿನಲ್ಲಿ ಅನೇಕ ಸಮಾವೇಶಗಳು ನಡೆದಿವೆ. ಹಾಸನದಲ್ಲಿ ಕಾಂಗ್ರೆಸ್‌ನಿಂದ ದೊಡ್ಡ ಸಮಾವೇಶ ಆಗಿರಲಿಲ್ಲ. ಈ ಬಾರಿ ಹಾಸನದಲ್ಲಿ ಮಾಡೋಣ ಎಂದು ಶಿವಲಿಂಗೇಗೌಡರು, ಶ್ರೇಯಸ್ ಪಟೇಲ್ ಅವರನ್ನು ಕೇಳಿದೆ. ಸಚಿವರಾದ ಡಾ. ಮಹದೇವಪ್ಪ, ವೆಂಕಟೇಶ್, ರಾಜಣ್ಣ ಕೂಡ ಹಾಸನದಲ್ಲಿಯೇ ಸಮಾವೇಶ ಮಾಡೋಣ ಎಂದು ಹೇಳಿದರು. ಅದಕ್ಕಾಗಿಯೇ ಇಲ್ಲಿ ಸಮಾವೇಶ ಮಾಡಲಾಗುತ್ತಿದೆ. 40 ವರ್ಷಗಳ ರಾಜಕೀಯ ಜೀವನದಲ್ಲಿ ಹಾಸನ ಜಿಲ್ಲೆಯಲ್ಲಿ ಇಷ್ಟೊಂದು ದೊಡ್ಡ ಸಮಾವೇಶ ಆಗಿರಲಿಲ್ಲ. ಅದಕ್ಕಾಗಿ ಇಲ್ಲಿಗೆ ಬಂದಿರುವ ಕಾರ್ಯಕರ್ತರು, ಜನರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸ್ವಾಭಿಮಾನಿಗಳ ಒಕ್ಕೂಟದಿಂದ ಕೃತಜ್ಞತೆ ಸಲ್ಲಿಸಲು ಸಮಾವೇಶ ಮಾಡುವುದಾಗಿ ಒಕ್ಕೂಟದ ಪದಾಧಿಕಾರಿಗಳು ಕೇಳಿಕೊಂಡಿದ್ದರು. ಆದರೆ, ನಾನು ರಾಜ್ಯದ ಮುಖ್ಯಮಂತ್ರಿ. ಹಾಗಾಗಿ ಕಾಂಗ್ರೆಸ್ ಪಕ್ಷದ ಸಹಯೋಗದಲ್ಲಿಯೇ ಸಮಾವೇಶ ಮಾಡುವಂತೆ ತಿಳಿಸಿದ್ದೆ. ಅದರಂತೆ ಎಲ್ಲರೂ ಒಟ್ಟಾಗಿ ಸಮಾವೇಶ ಮಾಡುತ್ತಿದ್ದೇವೆ ಎಂದರು.

ಕಾಂಗ್ರೆಸ್‌ನಿಂದ ಸುಭದ್ರ ಸರ್ಕಾರ: ಕಾಂಗ್ರೆಸ್ ಪಕ್ಷದಿಂದ ಮಾತ್ರ ಸುಭದ್ರ ಸರ್ಕಾರ ಕೊಡಲು ಸಾಧ್ಯ. ಜೆಡಿಎಸ್, ಬಿಜೆಪಿ ಪಕ್ಷಗಳು ಸ್ವಂತ ಶಕ್ತಿಯ ಮೇಲೆ ಎಂದಿಗೂ ಅಧಿಕಾರಕ್ಕೆ ಬಂದಿಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದು ಬಿಜೆಪಿ ಹಾಗೂ ನಮ್ಮ ಬೆಂಬಲದಿಂದ. ಅದೇ ರೀತಿ ಬಿಜೆಪಿಯವರು ಎರಡು ಬಾರಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದರು. ಅಪರೇಷನ್ ಕಮಲದಿಂದ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅಧಿಕಾರಕ್ಕೆ ಬಂದರು. 2006ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆದರು. ನಂತರ ಯಡಿಯೂರಪ್ಪನವರಿಗೆ ಮೋಸ ಮಾಡಿದರು. 2018ರಲ್ಲಿ 38 ಸ್ಥಾನ ಗೆದ್ದಿದ್ದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಬೆಂಬಲ ನೀಡಿ, ಮುಖ್ಯಮಂತ್ರಿ ಮಾಡಿದೆವು. ಆದರೆ, ಸರ್ಕಾರ ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ ಎಂದು ರಾಜ್ಯದ ರಾಜಕೀಯ ಇತಿಹಾಸವನ್ನು ಮೆಲುಕು ಹಾಕಿದರು.

ಬಿಜೆಪಿ ನೀಡಿದ್ದ 600 ಭರವಸೆಯಲ್ಲಿ ಶೇ 10ರಷ್ಟನ್ನೂ ಈಡೇರಿಸಿಲ್ಲ: 2013 ರಿಂದ 2018ರವರೆಗೆ ಕಾಂಗ್ರೆಸ್ ಅಧಿಕಾರದಲ್ಲಿದ್ದು, 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದೆವು. ಬಿಜೆಪಿಯವರು 600 ಭರವಸೆ ನೀಡಿದ್ದರು. ಆದರೆ, ಶೇ 10 ರಷ್ಟನ್ನೂ ಈಡೇರಿಸಲಿಲ್ಲ. ಕೊಟ್ಟ ಮಾತಿನಂತೆ ನಡೆದವರು ನಾವು ಎಂದರು.

ಬಿಜೆಪಿ, ಜೆಡಿಎಸ್‌ಗೆ ನೈತಿಕ ಹಕ್ಕಿಲ್ಲ: ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿರುವುದಾಗಿ ಬಿಜೆಪಿ, ಜೆಡಿಎಸ್‌ನವರು ಆರೋಪಿಸುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ. ಉಚಿತ ಅಕ್ಕಿ ನೀಡಿದ್ದು, ಆಹಾರ ಭದ್ರತೆ ಯೋಜನೆ ಜಾರಿಗೊಳಿಸಿದ್ದು ನಮ್ಮ ಸರ್ಕಾರ. 5ರಿಂದ 7 ಕೆ.ಜಿ. ಅಕ್ಕಿ ಕೊಡುವ ತೀರ್ಮಾನ ಮಾಡಿದ್ದು ನಮ್ಮ ಸರ್ಕಾರ. 5 ಕೆ.ಜಿ. ಅಕ್ಕಿಯ ಜೊತೆಗೆ ಮತ್ತೆ 5 ಕೆ.ಜಿ. ಅಕ್ಕಿ ಕೊಡುವ ತೀರ್ಮಾನ ಮಾಡಿದವರು ನಾವು. ಬಡವರಿಗೆ ಹೆಚ್ಚುವರಿ ಅಕ್ಕಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಿದರೆ, ಅಕ್ಕಿ ಕೊಡಲಿಲ್ಲ. ಅದರಿಂದ 5 ಕೆ.ಜಿ. ಅಕ್ಕಿಯ ಬದಲಾಗಿ ರೂ. 170 ಕೊಡಲಾಗುತ್ತಿದೆ ಎಂದರು.

ಬೇರೆ ಯಾವುದೇ ರಾಜ್ಯದಲ್ಲಿ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುತ್ತಿರುವುದನ್ನು ತೋರಿಸಿದರೆ, ನಾನು ರಾಜಕೀಯ ನಿವೃತ್ತಿ ಘೋಷಿಸುತ್ತೇನೆ. ಬಡವರ ಹೊಟ್ಟೆಯ ಮೇಲೆ ಹೊಡೆಯುವವರು ಬಿಜೆಪಿ, ಜೆಡಿಎಸ್‌ನವರು. ಅವರಿಗೆ ಯಾವ ನೈತಿಕ ಹಕ್ಕಿದೆ ಎಂದು ಪ್ರಶ್ನಿಸಿದರು.

56 ಸಾವಿರ ಕೋಟಿ ಗ್ಯಾರಂಟಿಗೆ ನೀಡಲಾಗುತ್ತಿದೆ: ಗ್ಯಾರಂಟಿಗಳನ್ನು ಜಾರಿ ಮಾಡಲು ಸಾಧ್ಯವಿಲ್ಲ, ಜಾರಿ ಮಾಡಿದರೆ ಬೊಕ್ಕಸ ಖಾಲಿಯಾಗುತ್ತದೆ ಎಂದು ಪ್ರಧಾನಿ ಮೋದಿ ಸೇರಿದಂತೆ ಪ್ರತಿಪಕ್ಷಗಳ ನಾಯಕರು ಗ್ಯಾರಂಟಿಗಳನ್ನು ವಿರೋಧ ಮಾಡಿದರು. ಹಾಗಾಗಿ ಅವರು ಬಡವರ ವಿರೋಧಿಗಳು ಎಂದರು.

ಶೇ.4.5ರಷ್ಟು ಬಡ್ಡಿದರದೊಂದಿಗೆ ನಬಾರ್ಡ್‌ನಿಂದ ಸಾಲ ಪಡೆದು, 5 ಲಕ್ಷದವರೆಗೆ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ, ರೂ.5,600 ಕೋಟಿಯಿದ್ದ ನಬಾರ್ಡ್ ಸಾಲದ ಪ್ರಮಾಣ ಈಗ ರೂ. 2,340 ಕೋಟಿಗೆ ಇಳಿಕೆ ಮಾಡಲಾಗಿದೆ. ಶೇ 58 ರಷ್ಟು ಕಡಿತ ಮಾಡಲಾಗಿದೆ. ಈ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದರೂ, ಪ್ರಯೋಜನವಾಗಿಲ್ಲ. ಮಣ್ಣಿನ ಮಗ ಎಂದು ಹೇಳಿಕೊಳ್ಳುವ ದೇವೇಗೌಡರು ಈ ಬಗ್ಗೆ ಪ್ರಶ್ನೆ ಮಾಡಬೇಕಲ್ಲವೇ? ರಾಜ್ಯಕ್ಕೆ ಅನ್ಯಾಯವಾದಾಗ, ರಾಜ್ಯದ ಬಿಜೆಪಿ ಸಂಸದರು ಅದರ ವಿರುದ್ಧ ಧ್ವನಿ ಎತ್ತಬೇಕು ಎಂದರು.

ರಾಜ್ಯ ಬಜೆಟ್‌ನ ಒಟ್ಟು ಗಾತ್ರ 3.71 ಲಕ್ಷ ಕೋಟಿಯಲ್ಲಿ 1.20 ಲಕ್ಷ ಕೋಟಿ ಅಭಿವೃದ್ಧಿಗೆ, 56 ಸಾವಿರ ಕೋಟಿ ಗ್ಯಾರಂಟಿಗೆ ನೀಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಕೇಂದ್ರದ ಹಣಕಾಸು ನೆರವನ್ನು ಕಡಿತಗೊಳಿಸುವ ಮೂಲಕ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಹುನ್ನಾರವನ್ನು ಕೇಂದ್ರದ ಬಿಜೆಪಿ ಸರ್ಕಾರ ಮಾಡುತ್ತಿದೆ. 2028ರ ಮೇವರೆಗೂ ಗ್ಯಾರಂಟಿ ಯೋಜನೆಗಳು ಮುಂದುವರಿಯಲಿವೆ. 2028ರಲ್ಲಿ ಮತ್ತೆ ಅಧಿಕಾರಕ್ಕೆ ಬರುತ್ತೇವೆ. ಆಗಲೂ ಗ್ಯಾರಂಟಿಗಳು ಮುಂದುವರಿಯಲಿವೆ ಎಂದು ಭರವಸೆ ನೀಡಿದರು.

ಜೊತೆಗೆ ಬಂಡೆಯಾಗಿ ಇರ್ತೀನಿ

ಕಾಂಗ್ರೆಸ್ ಪಕ್ಷದ ಸಾಧನೆಗಳನ್ನು ಬಣ್ಣಿಸಿದರು. ಕಮಲ ಕೆರೆಯಲ್ಲಿದ್ದರೆ ಚೆನ್ನ, ತೆನೆ ಹೊಲದಲ್ಲಿದ್ದರೆ ಚೆಂದ, ಈ ದಾನ, ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ, ಕಾಂಗ್ರೆಸ್ ಅಧಿಕಾರದಲ್ಲಿ ಇರಬೇಕು. ಕಾಂಗ್ರೆಸ್‌ನಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಏಕೆಂದರೆ ಇಂದಿರಾ ಗಾಂಧಿ ಅವರ ಕಾಲದಿಂದ ಕೊಟ್ಟ ಎಲ್ಲಾ ಕಾರ್ಯಕ್ರಮಗಳು ಶಾಸನಬದ್ಧವಾಗಿದೆ. ಮುಂದಿನ ಚುನಾವಣೆಯಲ್ಲಿ ಹಾಸನ ಜಿಲ್ಲೆಯ ಎಲ್ಲಾ ಕ್ಷೇತ್ರದಲ್ಲೂ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ. ಕುಮಾರಸ್ವಾಮಿ, ದೇವೇಗೌಡರು ಚನ್ನಪಟ್ಟಣ ಚುನಾವಣೆ ಸಂದರ್ಭ ಕಣ್ಣೀರು ಹಾಕಿದಿರಿ. ಈ ರಾಜ್ಯಕ್ಕೆ, ಈ ಜಿಲ್ಲೆಗೆ ನಿಮ್ಮ ಸಾಧನೆಗೆ ಸಾಕ್ಷಿ ಏನು ಹೇಳಿ ಎಂದು ಪ್ರಶ್ನೆ ಮಾಡಿದರು.

ತಾತ ಪ್ರಧಾನಮಂತ್ರಿ ಆಗಿದ್ದರು. ತಂದೆ ಮುಖ್ಯಮಂತ್ರಿ ಆಗಿದ್ದರು, ಮಗನನ್ನು ಶಾಸಕನನ್ನಾಗಿ ಮಾಡೋಕೆ ನೋಡಿದರು. ಆದರೆ ನಿಮ್ಮ (ಕುಮಾರಸ್ವಾಮಿ) ಕ್ಷೇತ್ರ ಚನ್ನಪಟ್ಟಣದಲ್ಲೇ ಜನ ಒಪ್ಪಲಿಲ್ಲ. ಈ ರಾಜ್ಯದ ಜನರೂ ಒಪ್ಪಲ್ಲ. ಕುಮಾರಸ್ವಾಮಿ, ದೇವೇಗೌಡ ಈ ಸರ್ಕಾರವನ್ನು ಕಿತ್ತಾಕುತ್ತೇವೆ ಅಂದರು. ದೇವೇಗೌಡರೇ ಇದೇನು ಹಾಸನದಲ್ಲಿ ಬೆಳೆಯುವ ಆಲೂಗಡ್ಡೆಯಲ್ಲ, ಕಡಲೇಕಾಯಿ ಗಿಡ ಅಲ್ಲ. 138 ಶಾಸಕರ ಜನ ಬೆಂಬಲದ ಸರ್ಕಾರ. ನಮ್ಮಲ್ಲಿದೆ ಒಗ್ಗಟ್ಟು, ಬಿಜೆಪಿ–ನಿಮ್ಮಲ್ಲಿದೆ ಬಿಕ್ಕಟ್ಟು ಎಂದು ಲೇವಡಿ ಮಾಡಿದರು.ನಾವು ವಚನ ಪಾಲಕರು ವಚನ ಭ್ರಷ್ಟರಲ್ಲ. ರಾಮನಗರ, ಮಂಡ್ಯ, ಚಾಮರಾಜನಗರ, ಕೊಡಗು ರೀತಿ ಹಾಸನದಲ್ಲೂ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ನಮ್ಮ 5 ಗ್ಯಾರಂಟಿಗಳು ಪರ್ಮನೆಂಟ್ ಇದ್ದೇ ಇರುತ್ತವೆ ಎಂದರು.

ಜನಕಲ್ಯಾಣೋತ್ಸವ ನನಗೆ ಆನೆಬಲ

ಬೆದರಿಕೆಗಳಿಗೆ ನಾನು ಜಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ. ಎಲ್ಲವನ್ನೂ ಎದುರಿಸಿ ಗೆಲ್ಲುತ್ತೇನೆ. ನಾನು ಸತ್ಯದ ಪರವಾಗಿದ್ದೇನೆ, ಅಂತಿಮವಾಗಿ ಗೆಲ್ಲುವುದು ಸತ್ಯವೇ ಎಂದು ಸಿಎಂ ಸಿದ್ದರಾಮಯ್ಯ ಭಾವುಕ ಮಾತುಗಳನ್ನಾಡಿದ್ದಾರೆ.

ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಈ ಸಮಾವೇಶ: ಇದು ಅತ್ಯಂತ ಮಹತ್ವದ ಸಮಾವೇಶವಾಗಿದೆ. ನನ್ನ ರಾಜಕೀಯ ಜೀವನದಲ್ಲಿ ಹಾಸನದಲ್ಲಿ ಇಷ್ಟು ದೊಡ್ಡ ಸಮಾವೇಶ ಆಗಿಲ್ಲ. ಹಾಸನದಲ್ಲಿ ಏಕೆ ಈ ಸಮಾವೇಶ ಮಾಡುತ್ತಿದ್ದಾರೆಂದು ವ್ಯಾಖ್ಯಾನ ಮಾಡುತ್ತಿದ್ದರು. ಮೈಸೂರಿನಲ್ಲಿ ಅನೇಕ ಸಮಾವೇಶಗಳು ಆಗಿವೆ. ಹಾಸನದಲ್ಲಿ ಆಗಿಲ್ಲ. ಈ ಬಗ್ಗೆ ಸಚಿವ ರಾಜಣ್ಣ, ಶಾಸಕ ಶಿವಲಿಂಗೇಗೌಡ ಜತೆ ಚರ್ಚಿಸಿದೆ. ಹೆಚ್‌ಸಿಎಂ, ವೆಂಕಟೇಶ್ ಕೂಡ ಹಾಸನದಲ್ಲಿ ಸಮಾವೇಶ ಮಾಡಲು ನಿರ್ಧರಿಸಿದರು.

ಏಕೆ ಈ ಸಮಾವೇಶ ಮಾಡುದ್ದೀರಿ ಅಂತಾ ಮಾಧ್ಯಮದಲ್ಲಿ ಚರ್ಚೆ ಆಗಿದೆ. ಕಾಂಗ್ರೆಸ್ ಮಾತ್ರವಲ್ಲ, ಸ್ವಾಭಿಮಾನ ಒಕ್ಕೂಟ ಸಹಯೋಗದಲ್ಲಿ ಕೃತಜ್ಞತೆ ಸಮಾವೇಶಕ್ಕೆ ಸ್ವಾಭಿಮಾನ ಒಕ್ಕೂಟ ತೀರ್ಮಾನಿಸಿತ್ತು. ಉಪಚುನಾವಣೆಯಲ್ಲಿ 3 ಕ್ಷೇತ್ರಗಳಲ್ಲೂ ನಾವೇ ಗೆದ್ದಿದ್ದೇವೆ. ಸಂಡೂರು ಕ್ಷೇತ್ರದಲ್ಲಿ ತುಕಾರಾಂ ಅವರೇ ಶಾಸಕರಾಗಿ ಇದ್ದರು. ಚನ್ನಪಟ್ಟಣ, ಶಿಗ್ಗಾಂವಿ ವಿಧಾನಸಭಾ ಕ್ಷೇತ್ರಗಳಲ್ಲಿ ನಾವು ಗೆದ್ದಿರಲಿಲ್ಲ. ಆದರೆ ನಮ್ಮ ಮತದಾರರ ಆಶೀರ್ವಾದದಿಂದ 3 ಕ್ಷೇತ್ರಗಳಲ್ಲೂ ಗೆದ್ದೆವು. ಹೀಗಾಗಿ ಮತದಾರರ ಕೃತಜ್ಞತೆ ಸಲ್ಲಿಸಲು ಈ ಸಮಾವೇಶ ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ನಗರ ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗೆ ಶೀಘ್ರ ಚಾಲನೆ

ದೆಹಲಿಯಲ್ಲಿ ತಮ್ಮನ್ನು ಭೇಟಿಯಾದ ಮಾಜಿ ಸಂಸದ ಪ್ರತಾಪ್ ಸಿಂಹರಿಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಭರವಸೆ

ಮೈಸೂರು,ಡಿ.5(ಪಿಎಂ)– ಮುಂದಿನ 20 ದಿನಗಳೊಳಗೆ 356 ಕೋಟಿ ರೂ. ವೆಚ್ಚದಲ್ಲಿ ಮೈಸೂರು ನಗರದ ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಆರಂಭಕ್ಕೆ ಸಿದ್ಧತೆ ನಡೆಸುವಂತೆ ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಅಧಿಕಾರಿಗಳಿಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸೂಚಿಸಿದ್ದಾರೆ.



ದೆಹಲಿಯಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಭೇಟಿಯಾಗಿದ್ದರು.

ಪ್ರಧಾನಿ ಮೋದಿ ಅವರು ಜೂನ್ 2022ರಲ್ಲಿ ಮೈಸೂರಿಗೆ ಭೇಟಿ ನೀಡಿದ್ದ ವೇಳೆ ಈ ಮಹತ್ವಾಕಾಂಕ್ಷೆಯ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಮೈಸೂರು–ಕೊಡಗು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ನವದೆಹಲಿಯಲ್ಲಿಂದು ವಿ.ಸೋಮಣ್ಣ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ 20 ದಿನಗಳ ಒಳಗೆ ಸದರಿ ಯೋಜನೆಯ ಕಾಮಗಾರಿ ಆರಂಭಿಸಲಾಗುವುದು. ಈ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ತಾವು ಸಂಸದರಾಗಿದ್ದ ಅವಧಿಯಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಯಾರ್ಡ್ ಅಭಿವೃದ್ಧಿಗಾಗಿ ಹಾಗೂ ನಾಗನಹಳ್ಳಿ ಮೆಮು (ಎಲೆಕ್ಟ್ರಿಕ್ ಮಲ್ಟಿಪಲ್ ಯೂನಿಟ್) ಶೆಡ್ ನಿರ್ಮಾಣಕ್ಕಾಗಿ 356 ಕೋಟಿ ರೂ. ಅನುದಾನ ಪಡೆದಿದ್ದಾಗಿ ಇದೇ ವೇಳೆ ಪ್ರತಾಪ್ ಸಿಂಹ ಸಚಿವರಿಗೆ ತಿಳಿಸಿದರು.

ಅಲ್ಲದೆ, ಈ ಸಂಬಂಧ ಮರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸುಧಾರಿತ ಸೌಕರ್ಯಗಳು, ಪ್ಲಾಟ್‌ಫಾರ್ಮ್‌ಗಳ ವಿಸ್ತರಣೆ ಹಾಗೂ ಸುಧಾರಿತ ರೈಲು ಸೇವೆಗಳನ್ನು ಒದಗಿಸುವ ಮೂಲಕ ಹೆಚ್ಚುತ್ತಿರುವ ರೈಲ್ವೆ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಬೇಕಿರುವ ಅಗತ್ಯತೆಯನ್ನು ಮಾಜಿ ಸಂಸದರು, ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ಅಲ್ಲದೆ, ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಪ್ರಾರಂಭಿಸಬೇಕಿರುವ ಅಗತ್ಯತೆ ಇದೆಯೆಂದು ಸೋಮಣ್ಣ ಅವರಲ್ಲಿ ಸಂಸದರು ಮನವಿ ಮಾಡಿದರು.

ಯೋಜನೆಗೆ ಮಾರ್ಗಸೂಚಿ: ಮರು ಅಭಿವೃದ್ಧಿ ಯೋಜನೆಯಡಿ ಮೈಸೂರು ನಗರದ ರೈಲ್ವೆ ನಿಲ್ದಾಣದ ಪಾರಂಪರಿಕ ಆಕರ್ಷಣೆಯನ್ನು ಸಂರಕ್ಷಣೆಯೊಂದಿಗೆ ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸಬೇಕಿದೆ. ದೆಹಲಿ ಇಂಟಿಗ್ರೇಟೆಡ್ ಮಲ್ಟಿ ಮೋಡಲ್ ಟ್ರಾನ್ಸಿಟ್ ಸಿಸ್ಟಮ್ (ಡಿಐಎಂಟಿಎಸ್) ನಡೆಸಿದ ಯಾರ್ಡ್ ಅಭಿವೃದ್ಧಿಯ ತಾಂತ್ರಿಕ ಕಾರ್ಯಸಾಧ್ಯತೆಯ ಅಧ್ಯಯನವು ಈಗಾಗಲೇ ಯೋಜನೆಗೆ ಮಾರ್ಗಸೂಚಿಯನ್ನು ಒದಗಿಸಿದೆ.

ನೈರುತ್ಯ ರೈಲ್ವೆಯು ಮೈಸೂರು ವಿಭಾಗವು ರೀ–ಮಾಡೆಲಿಂಗ್ ಜೊತೆಗೆ ಮರು ಅಭಿವೃದ್ಧಿ ಹಾಗೂ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದೆ. ರೀ–ಮಾಡೆಲಿಂಗ್ ಯೋಜನೆಗಳಡಿ ಅಸ್ತಿತ್ವದಲ್ಲಿರುವ ಆರು ಪ್ಲಾಟ್‌ಫಾರ್ಮ್‌ಗಳಿಗೆ ಮೂರು ಪ್ಲಾಟ್‌ಫಾರ್ಮ್‌ಗಳ ಸೇರ್ಪಡೆ, ನಾಲ್ಕು ಸ್ಟೇಬ್ಲಿಂಗ್ ಲೈನ್‌ಗಳು, ನಾಲ್ಕು ಪಿಟ್ ಲೈನ್‌ಗಳು ಮತ್ತು ಒಂದು ಶಂಟಿಂಗ್ ನೆಕ್ ನಿರ್ಮಾಣವನ್ನು ಒಳಗೊಂಡಿದೆ. ಇದಲ್ಲದೆ, ವಾಣಿ ವಿಲಾಸ ವಾಟರ್ ವರ್ಕ್ಸ್ ಸಮೀಪವಿರುವ ರೈಲ್ವೆ ಕ್ರೀಡಾ ಮೈದಾನದ ಬಳಿ ಹೊಸ ಪ್ರವೇಶ ದ್ವಾರದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಇದು ನಿಲ್ದಾಣದ ಮೂರನೇ ಪ್ರವೇಶ ದ್ವಾರವಾಗಲಿದೆ.

ಮಹಾರಾಷ್ಟ್ರ ನೂತನ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡ್ನವೀಸ್ ಪ್ರಮಾಣ ವಚನ ಸ್ವೀಕಾರ

ಮುಂಬೈ, ಡಿ.5– ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಸುಮಾರು ಎರಡು ವಾರಗಳ ನಂತರ ಮಹಾರಾಷ್ಟ್ರ ನೂತನ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡ್ನವೀಸ್ ಅವರು ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ಇಂದು ಸಂಜೆ 5.30ಕ್ಕೆ ದಕ್ಷಿಣ ಮುಂಬೈನ ಆಜಾದ್ ಮೈದಾನದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ದೇವೇಂದ್ರ ಫಡ್ನವೀಸ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ನಂತರ ಉಪ ಮುಖ್ಯಮಂತ್ರಿಗಳಾಗಿ ಏಕನಾಥ್ ಶಿಂಧೆ ಹಾಗೂ ಅಜಿತ್ ಪವಾರ್ ಅವರು ಪ್ರಮಾಣವಚನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಎನ್‌ಡಿಎ ಆಡಳಿತವಿರುವ ರಾಜ್ಯಗಳ ಸಿಎಂಗಳು ಹಾಗೂ ಉಪ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಎನ್‌ಡಿಎ ನಾಯಕರು ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು.

ಬಾಲಿವುಡ್ ನಟರಾದ ಶಾರುಖ್ ಖಾನ್, ಸಲ್ಮಾನ್ ಖಾನ್, ರಣಬೀರ್ ಕಪೂರ್ ಮತ್ತು ರಣವೀರ್ ಸಿಂಗ್, ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ಕೈಗಾರಿಕೋದ್ಯಮಿಗಳಾದ ಮುಖೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಸೇರಿದಂತೆ ಪ್ರಮುಖ ಸೆಲೆಬ್ರಿಟಿಗಳು ಸಹ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ದೇವೇಂದ್ರ ಫಡ್ನವೀಸ್ ಅವರು ಇಂದು ಮುಖ್ಯಮಂತ್ರಿಯಾಗಿ ಮೂರನೇ ಬಾರಿ ಪ್ರಮಾಣವಚನ ಸ್ವೀಕರಿಸಿದರು. ಮೊದಲ ಬಾರಿಗೆ ಅಕ್ಟೋಬರ್ 2014ರಿಂದ ನವೆಂಬರ್ 2019ರವರೆಗೆ ಪೂರ್ಣ ಅವಧಿಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ 44ನೇ ವಯಸ್ಸಿನಲ್ಲಿ ಸಿಎಂ ಹುದ್ದೆಯನ್ನು ಅಲಂಕರಿಸಿದ ಅತ್ಯಂತ ಕಿರಿಯ ವ್ಯಕ್ತಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಅವರ ಎರಡನೇ ಅವಧಿಯು ಅತ್ಯಂತ ಸಂಕ್ಷಿಪ್ತವಾಗಿತ್ತು. ಕೇವಲ ಐದು ದಿನಗಳ ಕಾಲ ಅಂದರೆ ನವೆಂಬರ್ 23ರಿಂದ 28, 2019ರವರೆಗೆ ಸಿಎಂ ಆಗಿದ್ದರು. ಅವಿಭಜಿತ ಶಿವಸೇನೆ, ಬಿಜೆಪಿ ಜೊತೆ ಮೈತ್ರಿ ಮುರಿದುಕೊಂಡಿದ್ದರಿಂದ ಫಡ್ನವಿಸ್ ಸರ್ಕಾರ ಪತನವಾಗಿತ್ತು.

ಶೀಘ್ರದಲ್ಲೇ ಎರಡನೇ ಹಂತದ ವಕ್ಫ್ ಹೋರಾಟ: ಯತ್ನಾಳ್


ನವದೆಹಲಿ, ಡಿ.5– ಶೀಘ್ರದಲ್ಲೇ ಎರಡನೇ ಹಂತದ ವಕ್ಫ್ ಹೋರಾಟವನ್ನು ಬಳ್ಳಾರಿ, ವಿಜಯನಗರ, ಹಾವೇರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ನಡೆಸಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದ್ದಾರೆ.



ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಬಹುತೇಕ ಭಾಗಗಳಿಗೆ ಭೇಟಿ ನೀಡಲಾಗಿದೆ. ವಕ್ಫ್‌ಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿ ಅವಧಿಯನ್ನು ಬಜೆಟ್ ಅಧಿವೇಶನದವರೆಗೆ ವಿಸ್ತರಿಸಲಾಗಿದೆ. ಲಭ್ಯವಿರುವ ಎಲ್ಲಾ ದಾಖಲೆಗಳನ್ನೂ ಸಮಿತಿಗೆ ನೀಡಲಾಗಿದೆ. ಹೀಗಾಗಿ ಮತ್ತೊಮ್ಮೆ ಸಮಿತಿಯನ್ನು ಭೇಟಿ ಮಾಡುವುದಿಲ್ಲ. ಎರಡನೇ ಹಂತದ ಹೋರಾಟ ಪೂರ್ಣಗೊಂಡ ಬಳಿಕ ರೈತರು ಮತ್ತು ಮಠಾಧೀಶರನ್ನು ಒಳಗೊಂಡ ನಿಯೋಗದ ಮೂಲಕ ಸಮಿತಿಗೆ ದಾಖಲೆಗಳನ್ನು ಹಸ್ತಾಂತರಿಸಲಾಗುವುದು ಎಂದರು.

ಟಿಪ್ಪು ವೀರ ನಿಜ, ಆದರೆ ಸ್ವಾತಂತ್ರ್ಯ ಹೋರಾಟಗಾರನಲ್ಲ

'ಟಿಪ್ಪು ಸುಲ್ತಾನ್, ದಿ ಸಾಗಾ ಆಫ್ ಮೈಸೂರ್'ಸ್ ಇಂಟರ್‌ರೆಗ್ನಮ್' ಕೃತಿ ಬಿಡುಗಡೆ ನಂತರ ಸಂವಾದದಲ್ಲಿ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಸ್ಪಷ್ಟ ನುಡಿ



ಇತಿಹಾಸಕಾರ ಡಾ.ವಿಕ್ರಂ ಸಂಪತ್ ರಚಿತ 'ಟಿಪ್ಪು ಸುಲ್ತಾನ್, ದಿ ಸಾಗಾ ಆಫ್ ಮೈಸೂರ್'ಸ್ ಇಂಟರ್‌ರೆಗ್ನಮ್' ಪುಸ್ತಕವನ್ನು ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಬಿಡುಗಡೆ ಮಾಡಿದರು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್, ಕಾರ್ಯದರ್ಶಿ ಸಿ.ಆರ್.ಹನುಮಂತ್, ಪ್ರೊ.ಜಿ.ಎಲ್.ಶೇಖರ್ ಉಪಸ್ಥಿತರಿದ್ದರು.

ಮೈಸೂರು, ಡಿ.5(ಎಂಕೆ)– ಟಿಪ್ಪು ಸುಲ್ತಾನ್ ವ್ಯಕ್ತಿಗತ ಕ್ರೂರಿ ಮಾತ್ರವಲ್ಲ ಚಾಣಾಕ್ಷನೂ, ಯುದ್ಧದಾಹಿಯೂ ಆಗಿದ್ದನು. ಆತ ವೀರನೇ. ಆದರೆ, ಸ್ವಾತಂತ್ರ್ಯ ಹೋರಾಟಗಾರನಲ್ಲ ಎಂದು ಇತಿಹಾಸಕಾರ ಡಾ.ವಿಕ್ರಂ ಸಂಪತ್ ತಿಳಿಸಿದರು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಮತ್ತು ಭಾರತೀಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಶೋಧನೆಯ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ತಮ್ಮ 'ಟಿಪ್ಪು ಸುಲ್ತಾನ್, ದಿ ಸಾಗಾ ಆಫ್ ಮೈಸೂರ್'ಸ್ ಇಂಟರ್‌ರೆಗ್ನಮ್' ಪುಸ್ತಕ ಬಿಡುಗಡೆ ಬಳಿಕ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಜೀವನದುದ್ದಕ್ಕೂ ಬ್ರಿಟಿಷರ ವಿರುದ್ಧ ಸಾಧಿಸಿದ ದ್ವೇಷ, ಹೋರಾಟವನ್ನು ನೋಡಿದಾಗ ಟಿಪ್ಪು ವೀರಯೋಧ ಎಂಬುದರಲ್ಲಿ ಯಾವುದೇ ಗೊಂದಲವಿಲ್ಲ. ಆದರೆ, ಸ್ವಾತಂತ್ರ್ಯ ಯೋಧನೆಂದು ಬಿಂಬಿಸುತ್ತಿರುವುದು ಸರಿಯಲ್ಲ. ಆತನ ಆಳ್ವಿಕೆ ಸಂದರ್ಭದಲ್ಲಿ ಯಾರೇ ಆತನ ಮೇಲೆ ದಾಳಿ ಮಾಡಿದರೂ ಪ್ರತಿದಾಳಿ ಮಾಡುತ್ತಿದ್ದ ಎಂದರು.

ಟಿಪ್ಪುವೇ ದಾಖಲಿಸಿರುವ ಆಧಾರಗಳನ್ನಿಟ್ಟುಕೊಂಡು ಈ ಪುಸ್ತಕ ಬರೆದಿದ್ದೇನೆ. ಇಸ್ಲಾಂ ದೇಶವಾಗಿ ಮಾಡಲು ಭಾರತದ ಮೇಲೆ ದಾಳಿ ಮಾಡುವಂತೆ ಅಫ್ಘಾನಿಸ್ತಾನದ ಜಮನ್‌ಷಾ ಅಹಮದ್‌ಗೆ ಪತ್ರ ಬರೆದಿದ್ದ ಟಿಪ್ಪು, ಎರಡು ವರ್ಷದಲ್ಲಿ ಇಡೀ ಉತ್ತರ ಭಾರತ ಹಾಗೂ ದಕ್ಷಿಣ ಭಾರತದ 4 ಲಕ್ಷಕ್ಕೂ ಹೆಚ್ಚು ಕಾಫೀರರನ್ನು ಮತಾಂತರಿಸಿ, ಇಡೀ ಭಾರತ ಉಪಖಂಡವನ್ನು ಇಸ್ಲಾಂ ಖಲೀಫೇಟ್ ಮಾಡುವ ಉದ್ದೇಶವನ್ನು ಟಿಪ್ಪು ಹೊಂದಿದ್ದ ಎಂದು ವಿವರಿಸಿದರು.

ಇತಿಹಾಸದಲ್ಲಿ ಕೆಲವು ವೀರರನ್ನು ಅತಿರಂಜನೀಯವಾಗಿ ವೈಭವೀಕರಿಸಲಾಗಿದೆ. ಟಿಪ್ಪುವಿನಲ್ಲಿ ಒಳ್ಳೆಯ ಹಾಗೂ ಕೆಟ್ಟ ಗುಣಗಳೆರಡೂ ಇದ್ದವು. ಅವನು ಎಸಗಿದ ಅಪರಾಧಗಳನ್ನು ಶುದ್ಧಗೊಳಿಸಲು ಸಾಧ್ಯವಿಲ್ಲ. ಆತನಲ್ಲಿ ಚಾಣಾಕ್ಷತೆ ಇತ್ತು. ಹಲವಾರು ದೇಶಗಳೊಂದಿಗೆ ಸಂಪರ್ಕ ಸಾಧಿಸಿದ್ದ. ಜನರನ್ನು ಕಾಪಾಡುವ ಜೊತೆಗೆ ಹಿಂಸೆ ನೀಡಿರುವ ಘಟನೆಗಳು ಆತನ ಆಡಳಿತಾವಧಿಯಲ್ಲಿ ನಡೆದಿವೆ ಎಂದರು.

ನೈಜ ಇತಿಹಾಸ ಮುಚ್ಚಿಡಲಾಗಿದೆ: ಸ್ವಾತಂತ್ರ್ಯ ನಂತರ ದೇಶದಲ್ಲಿ ಇತಿಹಾಸವನ್ನು ಸಾಮಾಜಿಕ ಸೌಹಾರ್ದ ಕಾಪಾಡುವ ಉದ್ದೇಶಕ್ಕಾಗಿ ರಚಿಸಲಾಗಿದೆ. ನೈಜ ಇತಿಹಾಸವನ್ನು ಮುಚ್ಚಿಡಲಾಗಿದೆ. ಭಯವಿಲ್ಲದೇ ಸತ್ಯವನ್ನು ನುಡಿಯಬೇಕಾಗುತ್ತದೆ. ಬ್ರಿಟಿಷರ ವಸಾಹತುಶಾಹಿಯನ್ನು ಹೇಳುವಂತೆಯೇ ದೇಶದ ನೈಜ ಇತಿಹಾಸವನ್ನು ಅಡಗಿಸಿಡಲಾಗದು. ಈ ನಿಟ್ಟಿನಲ್ಲಿ 5 ವರ್ಷಗಳ ಆಧಾರಗಳನ್ನು ದಾಖಲಿಸಿ ಈ ಪುಸ್ತಕವನ್ನು ಬರೆದಿದ್ದು ಮೈಸೂರಿನಲ್ಲಿ ಬಿಡುಗಡೆ ಮಾಡುತ್ತಿರುವುದು ವಿಶೇಷವಾಗಿದೆ ಎಂದು ಹೇಳಿದರು.

ಇಂದಿನ ಮುಸ್ಲಿಮರು ವಾರಸುದಾರರಲ್ಲ: ಇತಿಹಾಸದಲ್ಲಿ ಮಹಮ್ಮದ್ ಘಜ್ನಿ, ಘೋರಿ, ತೈಮೂರ್, ಬಾಬರ್, ಔರಂಗಜೇಬ್, ಟಿಪ್ಪು ನಡೆಸಿರುವ ದಾಳಿ, ಶೋಷಣೆ, ದೌರ್ಜನ್ಯಕ್ಕೆ ಇಂದಿನ ಮುಸ್ಲಿಂ ಸಮುದಾಯ ವಾರಸುದಾರರಲ್ಲ. ಸಮುದಾಯವು ಅವರ ದೌರ್ಜನ್ಯವನ್ನು ಒಪ್ಪಿಕೊಳ್ಳುವುದೂ ಇಲ್ಲ. ಈ ಸತ್ಯ ಗೊತ್ತಿರಬೇಕು. ಬಂಗಾಳ ಕ್ಷಾಮ ಪರಿಸ್ಥಿತಿಯಲ್ಲಿ ಲಕ್ಷಾಂತರ ಜನರು ಸತ್ತಾಗ, ಬ್ರಿಟಿಷ್ ಆಡಳಿತದ ವರ್ತನೆಗೆ ಇಂದಿನ ಭಾರತೀಯ ಕ್ರೈಸ್ತರನ್ನು ಗುರಿಮಾಡಲಾಗುವುದಿಲ್ಲ. ಹಾಗೆಯೇ ಮುಸ್ಲಿಮರ ಬಗ್ಗೆಯೂ ಕೂಡ ಮಾಡಬಾರದು ಎಂದರು. ಪತ್ರಕರ್ತೆ ಪ್ರೀತಿ ನಾಗರಾಜ್ ಸಂವಾದ ನಡೆಸಿಕೊಟ್ಟರು.

ಪುಸ್ತಕ ಬಿಡುಗಡೆ: ಸಂವಾದಕ್ಕೂ ಮುನ್ನ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಪುಸ್ತಕ ಬಿಡುಗಡೆ ಮಾಡಿದರು. ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್, ಕಾರ್ಯದರ್ಶಿ ಸಿ.ಆರ್.ಹನುಮಂತ್, ಪ್ರೊ.ಜಿ.ಎಲ್.ಶೇಖರ್ ಉಪಸ್ಥಿತರಿದ್ದರು.

ಟಿಪ್ಪು ಕುರಿತ ಪುಸ್ತಕ ನಿಷ್ಪಕ್ಷಪಾತ ಸತ್ಯದ ನಿರೂಪಣೆಯಾಗಿದೆ: ಪ್ರಮೋದಾದೇವಿ ಒಡೆಯರ್

ಮೈಸೂರು, ಡಿ.5(ಎಂಕೆ)– ಡಾ.ವಿಕ್ರಂ ಸಂಪತ್ ಅವರ 'ಟಿಪ್ಪು ಸುಲ್ತಾನ್, ದಿ ಸಾಗಾ ಆಫ್ ಮೈಸೂರ್'ಸ್ ಇಂಟರ್‌ರೆಗ್ನಮ್' ಪುಸ್ತಕವು ನಿಷ್ಪಕ್ಷಪಾತ ಸತ್ಯದ ನಿರೂಪಣೆಯಾಗಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಿಸಿದರು.

ಟಿಪ್ಪು ಸುಲ್ತಾನ್ ಕಾಲವನ್ನು 904 ಪುಟಗಳಿರುವ ಈ ಕೃತಿಯು ಯಾವುದೇ ಪೂರ್ವಗ್ರಹವಿಲ್ಲದೆ ಹೇಳುತ್ತದೆ. ಟಿಪ್ಪುವಿನ ಮಾಹಿತಿ, ಬಹುವ್ಯಕ್ತಿತ್ವವನ್ನು ತಿಳಿಸುತ್ತದೆ. ಟಿಪ್ಪು ಸುಲ್ತಾನ್ ಎಂಬ ಹೆಸರು ಬೇರೆ ಬೇರೆ ಜನರಲ್ಲಿ ವಿಭಿನ್ನ ಭಾವನೆಗಳನ್ನು ಹುಟ್ಟುಹಾಕುತ್ತದೆ. ಮೈಸೂರಿನ ಮಹಾರಾಜರಾದ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದ ಹೈದರಾಲಿ, ತನ್ನ ಸಂಘಟನಾ ಮತ್ತು ಮಿಲಿಟರಿ ಕೌಶಲದಿಂದ ಬೆಳೆದು, ಸರ್ವಾಧಿಕಾರಿಯಾದರೆ, ಆತನ ಪುತ್ರ ಟಿಪ್ಪು ತನ್ನನ್ನು ತಾನು ಮೈಸೂರಿನ ಸುಲ್ತಾನನೆಂದು ಘೋಷಿಸಿಕೊಂಡಿದ್ದರಿಂದ ಟಿಪ್ಪು ಸುಲ್ತಾನ್ ಎಂದು ಕರೆಯಲಾಯಿತು. ಇದೆಲ್ಲವೂ 1761 ರಿಂದ 1799 ರವರೆಗಿನ 40 ವರ್ಷಗಳ ಅಲ್ಪಾವಧಿಯಲ್ಲಿ ಸಂಭವಿಸಿತು ಎಂದು ತಿಳಿಸಿದರು.

ಟಿಪ್ಪುವಿನ ಮರಣದ ನಂತರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಅವರ ಅವಿರತ ಪ್ರಯತ್ನದಿಂದ ಮೈಸೂರು ಸಾಮ್ರಾಜ್ಯ ಮರು ಸ್ಥಾಪನೆಯಾಯಿತು. ಆರು ವರ್ಷದ ಮುಮ್ಮಡಿ ಕೃಷ್ಣರಾಜ ಒಡೆಯರ್ 1799 ರಲ್ಲಿ ಮೈಸೂರಿನ ಸಿಂಹಾಸನ್ನೇರಿದರು. ಜಗನ್ಮೋಹನ ಅರಮನೆಯನ್ನು ಅವರ ಆಳ್ವಿಕೆ ಕಾಲದಲ್ಲಿಯೇ ನಿರ್ಮಾಣ ಮಾಡಲಾಯಿತು. ಜಗನ್ಮೋಹನ ಅರಮನೆಯ ಸಭಾಂಗಣವು ಭಾರತ ಸ್ವಾತಂತ್ರ್ಯ ಪೂರ್ವಕ್ಕೂ ಹಾಗೂ ಸ್ವಾತಂತ್ರ್ಯದ ನಂತರ ಅನೇಕ ಐತಿಹಾಸಿಕ ಮತ್ತು ಮಹತ್ವದ ಘಟನೆಗಳಿಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಧೀರ ಭಗತ್‌ರಾಯ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮೆಕ್ಯಾನಿಕ್ ರಾಕಿ (ತೆ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಪುಷ್ಪಾ 2 (ಕ):** ಬೆ.9.45ಕ್ಕೆ, ಮ.1.45ಕ್ಕೆ, **ಪುಷ್ಪಾ 2 (ಹಿಂ):** ಸಂ.5.50ಕ್ಕೆ, **ಪುಷ್ಪಾ 2 (ತೆ):** ರಾ.9.50ಕ್ಕೆ.
ಸ್ಕ್ರೀನ್ 2	**ಮೋನಾ 2 (3ಡಿ)(ಇಂ):** ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, **ಸೋಲೋ ಲೀವಿಂಗ್ ರಿವಾಕ್ (ಜ):** ಮ.1.10ಕ್ಕೆ, **ಪುಷ್ಪಾ 2 (ತೆ):** ರಾ.8.10ಕ್ಕೆ.
ಸ್ಕ್ರೀನ್ 3	**ದಿ ಸಬರ್‌ಮತಿ ರಿಪೋರ್ಟ್ (ಹಿಂ):** ಬೆ.10.25ಕ್ಕೆ, **ಭೈರತಿ ರಣಗಲ್ (ಕ):** ಮ.1.05ಕ್ಕೆ, **ಹರಿದಾಸರ ದಿನಚರಿ (ಕ):** ಸಂ.4ಕ್ಕೆ, **ಪುಷ್ಪಾ 2 (ಕ):** ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಪುಷ್ಪಾ 2 (ತೆ):** ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಅಮರನ್ (ಕ):** ಬೆ.10.30ಕ್ಕೆ, ರಾ.7.30ಕ್ಕೆ, **ಭೈರತಿ ರಣಗಲ್ (ಕ):** ಮ.1.45ಕ್ಕೆ, **ಧೀರ ಭಗತ್ ರಾಯ್ (ಕ):** ಸಂ.4.30ಕ್ಕೆ.
ಸ್ಕ್ರೀನ್ 2	**ಭೈರತಿ ರಣಗಲ್ (ಕ):** ಬೆ.10.40ಕ್ಕೆ, **ಪುಷ್ಪಾ 2 (ಕ):** ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ಪುಷ್ಪಾ 2 (ಕ):** ಬೆ.11.30ಕ್ಕೆ, ರಾ.7.45ಕ್ಕೆ, **ಪುಷ್ಪಾ 2 (ತೆ):** ಸಂ.4ಕ್ಕೆ.
ಸ್ಕ್ರೀನ್ 4	**ಪುಷ್ಪಾ 2 (ತೆ):** ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಪುಷ್ಪಾ 2 (ಕ):** ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಮಿತ್ರ

ಶುಕ್ರವಾರ 6 ಡಿಸೆಂಬರ್ 2024

ಸೂಕ್ತ ರೀತಿ ನೀರಿನ ಸಂರಕ್ಷಣೆ ಆಗದಿದ್ದರೆ ಕರ್ನಾಟಕ ದೇಶದ ಎರಡನೇ ಒಣ ಭೂಮಿ ರಾಜ್ಯವಾಗಲಿದೆ

● ಹಿರಿಯ ಅರಣ್ಯಾಧಿಕಾರಿ ಬಿ.ಪಿ.ರವಿ ಎಚ್ಚರಿಕೆ ● ಪರಿಸರ ಸಂರಕ್ಷಣೆ ಕುರಿತಾದ ಕಾರ್ಯಾಗಾರದಲ್ಲಿ ನಗರ ಪ್ರದೇಶದಲ್ಲಿ ನೀರು ಸಂರಕ್ಷಣೆ ಮಹತ್ವ ಮನವರಿಕೆ

ಮೈಸೂರು,ಡಿ.5(ಎಂಟಿವೈ)–ಸೂಕ್ತ ವಿಧಾನದಲ್ಲಿ ನೀರಿನ ಸಂರಕ್ಷಣೆ ಆಗದೇ ಇರುವುದರಿಂದ ಕರ್ನಾಟಕ ರಾಜ್ಯ ದೇಶದ ಎರಡನೇ ದೊಡ್ಡ ಒಣಭೂಮಿ ಹೊಂದಿರುವ ರಾಜ್ಯವಾಗುತ್ತಿದೆ ಎಂದು ಅರಣ್ಯ ಇಲಾಖೆ ಪಿಸಿಸಿಎಫ್ ಬಿ.ಪಿ.ರವಿ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮುಕ್ತ ವಿವಿಯ ಅಧ್ಯಯನ ಮತ್ತು ಪರಿಸರ ವಿಜ್ಞಾನ ಸಂಶೋಧನಾ ವಿಭಾಗದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ಎನ್ವಿರಾನ್ಮೆಂಟಲ್ ಆಡಿಟಿಂಗ್: ಬಿಲ್ಡಿಂಗ್ ಫಾರ್ ಎ ಗ್ರೀನರ್ ಫ್ಯೂಚರ್' ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನೀರಿನ ಸಂರಕ್ಷಣೆ ಸೂಕ್ತ ರೀತಿಯಲ್ಲಿ ಆಗುತ್ತಿಲ್ಲ. ಈ ಕಾರಣದಿಂದಲೇ ಅಕಾಲಿಕ ಮಳೆ, ತೀವ್ರ ಸ್ವರೂಪದ ಬರದ ವಾತಾವರಣ ಕಾಣಿಸಿಕೊಳ್ಳುತ್ತಿದೆ. ದೇಶದಲ್ಲಿ ರಾಜಸ್ಥಾನ ಹೊರತುಪಡಿಸಿದರೆ ಒಣ ಭೂಮಿ ಹೊಂದಿರುವ ಎರಡನೇ ಅತಿದೊಡ್ಡ ರಾಜ್ಯ ಕರ್ನಾಟಕವಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇನ್ನಾದರೂ ನೀರಿನ ಸಂರಕ್ಷಣೆಯೊಂದಿಗೆ ಸದ್ಬಳಕೆ ಮಾಡಿಕೊಳ್ಳಲು ಬದ್ಧರಾಗದಿದ್ದರೆ, ಸಮಸ್ಯೆ ಇನ್ನಷ್ಟು ಜಟಿಲಗೊಳ್ಳುತ್ತದೆ. ಜಲ ಸಂಪನ್ಮೂಲಗಳನ್ನು ಉಳಿಸಿಕೊಳ್ಳಲು ಸಾರ್ವಜನಿಕರ ಸಹಕಾರ ಅಗತ್ಯ ಎಂದರು.




ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ 'ಎನ್ವಿರಾನ್ಮೆಂಟಲ್ ಆಡಿಟಿಂಗ್: ಬಿಲ್ಡಿಂಗ್ ಫಾರ್ ಎ ಗ್ರೀನರ್ ಫ್ಯೂಚರ್' ಕುರಿತ ಕಾರ್ಯಾಗಾರವನ್ನು ಅರಣ್ಯ ಇಲಾಖೆಯ ಪಿಸಿಸಿಎಫ್ ಬಿ.ಪಿ.ರವಿ ಉದ್ಘಾಟಿಸಿದರು.

ಅಭಿವೃದ್ಧಿ ಹೆಸರಲ್ಲಿ ನಗರ ಪ್ರದೇಶಗಳು ಕಾಂಕ್ರೀಟ್ ಮಯವಾಗುತ್ತಿದೆ. ಇದರಿಂದ ಮಳೆ ನೀರು ಭೂಮಿಯಲ್ಲಿ ಇಂಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಅಂತರ್ಜಲ ವೃದ್ಧಿಯಾಗುತ್ತಿಲ್ಲ. ಮಳೆ ಬಂದಾಗ ಭೂಮಿಯಲ್ಲಿ ನೀರು ಇಂಗಬೇಕು. ಆದರೆ, ಕಾಂಕ್ರಿಟ್ ಕಾಡು ಭೂಮಿಯಲ್ಲಿ ನೀರು ಇಂಗಲು ಅವಕಾಶ ಮಾಡಿಕೊಡುತ್ತಿಲ್ಲ. ಗ್ರಾಮೀಣ ಪ್ರದೇಶಕ್ಕೂ ಕಾಂಕ್ರಿಟ್ ಕಾಡು ಹಬ್ಬುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಬಿದ್ದ ಮಳೆಯ ಶೇ.20 ಮಾತ್ರ ಇಂಗುತ್ತಿದೆ. ಉಳಿದ ನೀರು ವ್ಯರ್ಥವಾಗಿ ಹರಿಯುತ್ತಿದೆ. ಮಳೆ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ವಿಜ್ಞಾನಿಗಳು ಯೋಜನೆ ರೂಪಿಸಿದರೂ, ಸಾರ್ವಜನಿಕರು ಸಹಕಾರ ನೀಡದಿದ್ದರೆ ಆ ಯೋಜನೆಗಳು ಸಫಲವಾಗುವುದಿಲ್ಲ ಎಂದು ವಿಷಾದಿಸಿದರು.

ನೀರಿನ ಸಂರಕ್ಷಣೆಗೆ ಸರ್ಕಾರದಿಂದ ನೀರಿನ ಪರಿಶೋಧನೆಗೆ ಎಲ್ಲಾ ಪ್ರಯತ್ನ ನಡೆಯುತ್ತಿದೆ. ಯುಜಿಡಿ ನೀರನ್ನು ಸಂಸ್ಕರಣೆ ಮಾಡಿ ಪುನರ್‌ಬಳಕೆ ಮಾಡಬೇಕು. ವ್ಯರ್ಥವಾಗಿ ಹರಿದು ಹೋಗುತ್ತಿರುವ ಮಳೆ ನೀರನ್ನು ಪುನರ್‌ಬಳಕೆ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರ ಪ್ರತಿ ಮನುಷ್ಯನಿಗೆ 135 ಲೀಟರ್ ನೀರನ್ನು ಮಿತಿಗೊಳಿಸಿದೆ. ಸಾರ್ವಜನಿಕರು ನೀರಿನ ಬಳಕೆಯಲ್ಲಿ ಒಬ್ಬರಿಗೊಬ್ಬರು ಕೈ ತೋರಿಸದೇ ತಮ್ಮ ಜವಾಬ್ದಾರಿಯನ್ನು ಸೂಕ್ತವಾಗಿ ನಿರ್ವಹಿಸಬೇಕು. ಪರಿಸರ ಸಂರಕ್ಷಣೆ, ಜಲ ಸಂಪನ್ಮೂಲ ಸದ್ಬಳಕೆಗೆ ಸರ್ಕಾರ ಯೋಜನೆಗಳನ್ನು ರೂಪಿಸುತ್ತದೆ. ನೀರಾವರಿ ವ್ಯವಸ್ಥೆಯಲ್ಲಿ ನಾಲೆಗಳು, ಕಾಲುವೆ, ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಯಬೇಕಾದರೆ ಸುಸ್ಥಿತಿಯಲ್ಲಿ ಇರಬೇಕು. ಆಗ ಕೊನೆ ಭಾಗದಲ್ಲಿರುವ ರೈತರ ಹೊಲ–ಗದ್ದೆಗಳಿಗೂ ನೀರು ದೊರೆಯಲಿದೆ. ಆದರೆ, ಸರ್ಕಾರದ ಇಲಾಖೆಗಳಲ್ಲಿ ಸಮನ್ವಯದ ಕೊರತೆಯಿಂದ ಕೆಲಸ ಸರಿಯಾಗಿ ಕೆಲಸ ಆಗುತ್ತಿಲ್ಲ ಎಂದರು.

ಒಂದು ಬೆಳೆಗೆ ನಿರ್ದಿಷ್ಟ ಪ್ರಮಾಣದ ನೀರು ಬೇಕೆನ್ನುವ ಮನಸ್ಥಿತಿ ತುಂಬಿ ಬಿಟ್ಟಿದ್ದಾರೆ. ಹೊಸದಾಗಿ ಪ್ರಯೋಗ ಮಾಡಿ ನೀರನ್ನು ಕಡಿಮೆ ಬಳಕೆ ಮಾಡಿಕೊಂಡು ಹೆಚ್ಚು ಇಳುವರಿಯನ್ನು ಪಡೆಯುವ ಪ್ರಯತ್ನಕ್ಕೂ ಯಾರು ಕೈ ಹಾಕುವುದಿಲ್ಲ. ಈ ವಿಷಯವನ್ನು ವಿಜ್ಞಾನಿಗಳು ಹೇಳಿದರೆ ಅದನ್ನು ಆಡಳಿತ ನಡೆಸುವವರು ಒಪ್ಪಿಕೊಳ್ಳಲು ತಯಾರು ಇಲ್ಲ. ಇಂತಹ ಧೋರಣೆಯನ್ನು ರೈತರು ಬಿಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಡೀನ್ ಪ್ರೊ.ಎನ್.ಲಕ್ಷ್ಮೀ, ಪ್ರೊ.ಹರ್ಷ ಇನ್ನಿತರರು ಉಪಸ್ಥಿತರಿದ್ದರು.

ಬಡ ಮಕ್ಕಳ ಕಣ್ಣಿನ ರಕ್ಷಣೆಗೆ ಎಸ್.ಎಲ್.ಭೈರಪ್ಪನವರ ದೇಣಿಗೆ


ಮೈಸೂರಿನ ಉಷಾಕಿರಣ ಕಣ್ಣಿನ ಆಸ್ಪತ್ರೆ ನಡೆಸುತ್ತಿರುವ ಬಡ ಮಕ್ಕಳ ಕಣ್ಣಿನ ರಕ್ಷಣೆ ಕಾರ್ಯಕ್ರಮಕ್ಕೆ ಖ್ಯಾತ ಸಾಹಿತಿ, ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರು ತಮ್ಮ ದೇಣಿಗೆಯನ್ನು ಆಸ್ಪತ್ರೆಯ ರೂವಾರಿ ಡಾ.ಕೆ.ವಿ.ರವಿಶಂಕರ್ ಅವರಿಗೆ ಹಸ್ತಾಂತರಿಸಿದರು. ಕೆ.ವಿ.ರಾಮಪ್ರಸಾದ್ ಈ ವೇಳೆ ಉಪಸ್ಥಿತರಿದ್ದರು.

'ಸ್ವರಾಂಜಲಿ'ಯಿಂದ ಡಿ.8 ಹಿರಿಯ ನಾಗರಿಕರಿಗಾಗಿ 'ಸಮತೆ–ಮಮತೆ'

ಮೈಸೂರು, ಡಿ.5(ಜಿಎ)–ವೈದ್ಯಕೀಯ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿರುವವರು ಸ್ಥಾಪಿಸಿಕೊಂಡಿರುವ ಸ್ವರಾಂಜಲಿ ಎಂಬ ಸಮಾನಮನಸ್ಕರ ತಂಡದ ವತಿಯಿಂದ ಡಿ.8ರಂದು ಎಂಎಂಸಿ ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ಸಂಜೆ 5 ಗಂಟೆಗೆ ಹಿರಿಯ ನಾಗರಿಕರಿಗಾಗಿ 'ಸಮತೆ–ಮಮತೆ' ಎಂಬ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಮುಖ್ಯಸ್ಥ ಡಾ.ಎಂ.ಎಸ್.ರಘುವೀರ್ ಈ ವಿಷಯ ತಿಳಿಸಿ, ತಂಡದ ವತಿಯಿಂದ ಕೆಲವು ದಿನಗಳ ಹಿಂದೆ ಹಿರಿಯ ನಾಗರಿಕರಿಗಾಗಿ ಗಾಯನ, ರಂಗೋಲಿ, ಫ್ಯಾಷನ್ ಶೋ ಮೊದಲಾದ ಸ್ಪರ್ಧೆ ಆಯೋಜಿಸಲಾಗಿತ್ತು. ಇದರಲ್ಲಿ ಪಾಲ್ಗೊಂಡು ವಿಜೇತರಾದವರಿಗೆ ಅಂದು ಬಹುಮಾನ ವಿತರಿಸಲಾಗುವುದು ಎಂದರು.

ಸುಗಮ ಸಂಗೀತ ಕಾರ್ಯಕ್ರಮವೂ ಇದ್ದು, ಸುಗಮ ಸಂಗೀತ ಗಾಯಕರಾದ ಹೆಚ್.ಆರ್.ಲೀಲಾವತಿ ಪಾಲ್ಗೊಳ್ಳುವರು. ವಾಗ್ಮಿ ಪ್ರೊ.ಕೃಷ್ಣೇಗೌಡರು ವಿಜೇತರಿಗೆ ಬಹುಮಾನ ವಿತರಿಸುವರು. ಹಿರಿಯ ನಾಗರಿಕರಿಗೆ ಮನರಂಜನೆ ನೀಡಲು ಲೈವ್ ಆರ್ಕೆಸ್ಟ್ರಾ ರಸಸಂಜೆ ಕಾರ್ಯಕ್ರಮ ಇರಲಿದೆ. ಶಾರದಾ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್ ಸಹಯೋಗ ನೀಡುತ್ತಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ದಿವ್ಯ ಕೇಶವನ್, ಹೆಚ್.ಪಿ. ಮಧುಸೂದನ್ ಉಪಸ್ಥಿತರಿದ್ದರು.


ವೈದ್ಯಕೀಯ ಸಲಕರಣೆ ವಿತರಣೆ...


ಮೈಸೂರಿನ ಮಳಲವಾಡಿ ನ್ಯಾಯಾಲಯದ ಆವರಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೇಕಾಗಿರುವ ವೈದ್ಯಕೀಯ ಸಲಕರಣೆಗಳನ್ನು ವಕೀಲರು, ಕಕ್ಷಿದಾರರು ಹಾಗೂ ಸಿಬ್ಬಂದಿಗೆ ವೈದ್ಯಕೀಯ ತಪಾಸಣೆಗೆ ಅನುಕೂಲವಾಗಲು ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಬಿ.ಶಿವಣ್ಣ ಆಸ್ಪತ್ರೆ ಸಿಬ್ಬಂದಿಗೆ ವಿತರಿಸಿದರು. ಈ ವೇಳೆ ನ್ಯಾಯಾಲಯದ ಮ್ಯಾನೇಜರ್ ರಮೇಶ್, ಹಿರಿಯ ವಕೀಲರಾದ ಕೆಎಚ್.ರಮೇಶ್, ಕೃಷ್ಣ, ಮುತ್ತುರಾಜ್ ಹಾಜರಿದ್ದರು.

ಜನ ಕಲ್ಯಾಣ ಸಮಾವೇಶದಲ್ಲಿ ಭಾಗಿ


ಹಾಸನದಲ್ಲಿ ನಡೆದ ಕಾಂಗ್ರೆಸ್‌ನ ಜನ ಕಲ್ಯಾಣ ಸಮಾವೇಶದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ನೇತೃತ್ವದಲ್ಲಿ ಹಿಂದುಳಿದ ವರ್ಗದ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಕುರುಬನಕಟ್ಟೆ ಕಂಡಾಯ ಉತ್ಸವ


ಮೈಸೂರು ತಾಲೂಕು ಜಯಪುರ ಹೋಬಳಿಯ ಮಾರ್ಬಳ್ಳಿಹುಂಡಿ ಗ್ರಾಮದಲ್ಲಿ ಕುರುಬನಕಟ್ಟೆ ಕಂಡಾಯ ಉತ್ಸವ ನಡೆಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಯಜಮಾನ್ ಚಿಕ್ಕಮಾದಯ್ಯ, ಸೋಮು, ಗೋವಿಂದ, ಶೇಖರ್, ಮುತ್ತುರಾಜು ಇದ್ದರು.

ನಿಗಮಗಳಿಗೆ ಅನುದಾನಕ್ಕೆ ಆಗ್ರಹಿಸಿ ಡಿ.12ರಂದು ರಾಜ್ಯಾದ್ಯಂತ ಪ್ರತಿಭಟನೆ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಘೋಷಣೆ

ಬೆಂಗಳೂರು, ಡಿ.5– 'ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿ, ಇಲ್ಲವೇ ನಿಗಮಗಳನ್ನು ಮುಚ್ಚಿ ಬಿಡಿ' ಎಂಬ ಘೋಷಣೆಗಳೊಂ ದಿಗೆ ಡಿ.12ರಂದು ಬಿಜೆಪಿ ಹಿಂದು ಳಿದ ವರ್ಗಗಳ ಮೋರ್ಚಾ ರಾಜ್ಯಾದ್ಯಂತ ಹೋರಾಟ ನಡೆಸ ಲಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಘೋಷಿಸಿದರು.

ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದಲ್ಲಿ ಗುರುವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳು ತಾವು ಪಡೆಯುತ್ತಿದ್ದ ಆರ್ಥಿಕ ನೆರವಿನಿಂದ ವಂಚಿತವಾಗುತ್ತಿವೆ. ಅರಿವು ಯೋಜನೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಿಗುವಂತ ಆರ್ಥಿಕ ನೆರವು ಕೂಡ ಸಿಗುತ್ತಿಲ್ಲ. ಸಣ್ಣ ಹಿಡುವಳಿದಾರರಿಗೆ ಸಿಗುವಂತಹ ಗಂಗಾ ಕಲ್ಯಾಣ ಯೋಜನೆ ಸಂಪೂರ್ಣ ನಿಂತುಹೋಗಿದೆ ಎಂದು ಬೇಸರ ವ್ಯಕ್ತಪಡಿಸಿದರು.


ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಮಾಧ್ಯಮದೊಂದಿಗೆ ಮಾತನಾಡುತ್ತಿರುವುದು

ಅಹಿಂದ ಹೆಸರೇಳುವವರು ಹಿಂದುಳಿದ ವರ್ಗಗಳಿಗೆ ವಂಚನೆ ಮಾಡಿ ಆಡಳಿತ ನಡೆಸುತ್ತಿದ್ದಾರೆ. ಹಿಂದುಳಿದ ವರ್ಗಗಳ ಪರವಾಗಿರುವುದಾಗಿ ಎಂದು ಹೇಳಿಕೊಂಡವರು ಸಂಪೂರ್ಣವಾಗಿ ಅವರು ಹೇಳಿದ್ದ ಮಾತನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಟೀಕಿಸಿದರು.

ಹಿಂದುಳಿದ ವರ್ಗಗಳ ಧ್ವನಿಯಾಗಿ, ಬಿಜೆಪಿ ಸಿದ್ಧಾಂತದ ಅನುಸಾರವಾಗಿ ಜನರ ಧ್ವನಿಯಾಗಿ ಹೋರಾಟ ಮಾಡುವ ನಿರ್ಣಯ ಅಂಗೀಕರಿಸಿದ್ದೇವೆ. ಇಡೀ ರಾಜ್ಯಾದ್ಯಂತ ಹಿಂದುಳಿದ ವರ್ಗದ ಆರ್ಥಿಕ, ಔದ್ಯೋಗಿಕ, ಅವರ ಕೃಷಿ ಚಟುವಟಿಕೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅನುದಾನವನ್ನು ಈ ಸರ್ಕಾರ ಸ್ಥಗಿತ ಮಾಡಿದೆ ಎಂದು ಆಕ್ಷೇಪಿಸಿದರು.

ಈ ಸರ್ಕಾರವು ಹಿಂದುಳಿದವರಿಗೆ ಯಥೇಚ್ಛವಾಗಿ ಅನುದಾನವನ್ನು ಬಿಡುಗಡೆ ಮಾಡುವ ಮೂಲಕ ಅರ್ಜಿಗಳನ್ನು ಕರೆದು ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಕಲ್ಯಾಣ ಕಾರ್ಯಕ್ಕೆ ಅವಕಾಶ ಮಾಡಿಕೊಡದೆ ಇದ್ದರೆ ಮುಂದಿನ ದಿನದಲ್ಲಿ ಹಿಂದುಳಿದ ವರ್ಗದ ಪರವಾಗಿ ಬೃಹತ್ ಹೋರಾಟ ಕೈಗೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆದೇಶದ ಮೇರೆಗೆ ರಾಜ್ಯಾದ್ಯಂತ ಹೋರಾಟ ಮಾಡಲು ನಿರ್ಧರಿಸಿದ್ದೇವೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಯಾವ ನೈತಿಕತೆ ಇಟ್ಟುಕೊಂಡು ಹಾಸನದಲ್ಲಿ ಸ್ವಾಭಿಮಾನಿ ಸಮಾವೇಶ ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಹಿಂದುಳಿದ ವರ್ಗದ ಸ್ವಾಭಿಮಾನಿ ಬದುಕು, ಸ್ವಾವಲಂಬಿ ಬದುಕನ್ನು ಕಸಿದುಕೊಂಡ ಸಿದ್ದರಾಮಯ್ಯನವರಿಗೆ ಹಿಂದುಳಿದ ವರ್ಗಗಳ ಪರವಾಗಿ ಮಾತನಾಡಲು ಯಾವ ನೈತಿಕ ಹಕ್ಕೂ ಇಲ್ಲ. ದೇವರಾಜ ಅರಸು ನಿಗಮ ಸೇರಿ ಎಲ್ಲ ಸಮುದಾಯದ ನಿಗಮಗಳಿಗೆ ಹಿಂದಿನ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಒಂದು ಸಾವಿರ ಕೋಟಿ ಬಿಡುಗಡೆ ಮಾಡಿದ್ದರು. ಈಗಿನ ಸರ್ಕಾರ ನೆಪಮಾತ್ರಕ್ಕೆ 150 ಕೋಟಿ ರೂ. ಬಿಡುಗಡೆ ಮಾಡಿದೆ. ಅಂದರೆ ಹಿಂದುಳಿದ ವರ್ಗಗಳ ಎಲ್ಲ ಸಮು ದಾಯದ ನಿಗಮಗಳಿಗೆ ಕೊಡುವ ಹಣವು ಪಂಚ ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆಯಾಗಿದೆ ಎಂದು ಅವರು ಆರೋಪಿಸಿದರು. ಹಿಂದುಳಿದ ಅಭಿವೃದ್ಧಿ ನಿಗಮಗಳ ಕಚೇರಿಗಳು ಖಾಲಿಯಾಗಿವೆ. ಎಲ್ಲ ನಿಗಮಗಳು ತುಕ್ಕು ಹಿಡಿಯುತ್ತಿವೆ ಎಂದು ದೂರಿದರು.


ಇಂದು ಸಮಾಲೋಚನಾ ಸಭೆ

ಮೈಸೂರು, ಡಿ.5– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಡಿ.6ರಂದು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 38ನೇ ಪುಣ್ಯಾರಾಧನೆಯನ್ನು ಏರ್ಪಡಿಸ ಲಾಗಿದೆ. ಅಂದು ಪ್ರಾತಃಕಾಲ ಗದ್ದುಗೆಯಲ್ಲಿ ರುದ್ರಾ ಭಿಷೇಕ, ಲಕ್ಷ ಬಿಲ್ವಾರ್ಚನೆ ಅಷ್ಟೋತ್ತರ, ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಬೆಳಗ್ಗೆ 9.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ, ಮಠಾಧೀಶರ ಸಮ್ಮುಖ ದಲ್ಲಿ, ಗಣ್ಯರು, ಸಾರ್ವಜನಿಕರು ಹಾಗೂ ಭಕ್ತಾದಿಗಳ ಉಪಸ್ಥಿತಿಯಲ್ಲಿ ಜಾತ್ರಾ ಮಹೋತ್ಸವದ ಮಂಟಪ ಗಳ ಭೂಮಿಪೂಜೆಯನ್ನು ಸಾಂಕೇತಿಕವಾಗಿ ನೆರ ವೇರಿಸಲಾಗುವುದು. ಬೆಳಗ್ಗೆ 10ಕ್ಕೆ ಜಾತ್ರೆಯ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಲಿದೆ.

ನವದೆಹಲಿಯಲ್ಲಿ ಬಿ.ಎಲ್.ಸಂತೋಷ್ ಭೇಟಿಯಾದ ನಿಖಿಲ್ ಕುಮಾರಸ್ವಾಮಿ

ಚನ್ನಪಟ್ಟಣ ಉಪಚುನಾವಣೆ ಸಂಬಂಧ ಚರ್ಚೆ

ನವದೆಹಲಿ, ಡಿ.5–ಚನ್ನಪಟ್ಟಣ ಉಪಚುನಾವಣೆ ನಂತರ ನವದೆಹಲಿಗೆ ಭೇಟಿ ನೀಡಿರುವ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ. ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ, ಕೆಲಕಾಲ ಮಾತುಕತೆ ನಡೆಸಿದರು.



ಈ ವೇಳೆ ನಿಖಿಲ್, ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡ ಅವರ ಜೀವನ – ಸಾಧನೆ ಕುರಿತ Furrows in a Field: The Unexplored Life of H.D. Deve Gowda (ಕನ್ನಡಲ್ಲಿ: ನೇಗಿಲ ಗೆರೆಗಳು) ಗ್ರಂಥವನ್ನು ಸಂತೋಷ್ ಅವರಿಗೆ ನೀಡಿದರು. ಉಪ ಚುನಾವಣೆ, ಆ ನಂತರದ ರಾಜಕೀಯ ಬೆಳವಣಿಗೆಯನ್ನು ಅವರ ಗಮನಕ್ಕೆ ತಂದರು. ಚನ್ನಪಟ್ಟಣ ಉಪಚುನಾವಣೆ ಬಗ್ಗೆ ನಿಖಿಲ್ ಅವರಿಂದ ಕೆಲ ಮಾಹಿತಿಗಳನ್ನು ಪಡೆದ ಬಿ.ಎಲ್.ಸಂತೋಷ್, ಮುಂದಿನ ರಾಜಕೀಯ ಬೆಳವಣಿಗೆ ದೃಷ್ಟಿಯಿಂದ ಮಹತ್ವದ ಸಲಹೆ, ಮಾರ್ಗದರ್ಶನ ನೀಡಿದ್ದಾರೆ ಎನ್ನಲಾಗಿದೆ.

ಬಿ.ಎಲ್.ಸಂತೋಷ್ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿರುವ ನಿಖಿಲ್, ದೆಹಲಿ ಭೇಟಿ ವೇಳೆ ಸಂತೋಷ್ ಜೀ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದು ಕೊಂಡಿದ್ದು, ಚನ್ನಪಟ್ಟಣ ಉಪಚುನಾವಣೆ ಸಂಬಂಧ ಕೆಲ ಮಾಹಿತಿಗಳನ್ನು ಕೇಳಿ ಪಡೆದುಕೊಂಡರು. ನನ್ನ ರಾಜಕೀಯ ಬೆಳವಣಿಗೆ ಹಾಗೂ ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಬಲಗೊಳಿಸುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿದರು ಎಂದು ತಿಳಿಸಿದ್ದಾರೆ.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಡಿ.5–ಡಿ.7ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತುರ್ತು ಕಾಮಗಾರಿ ನಿಮಿತ್ತ ಮೃಗಾಲಯ ಆವರಣ, ಎ.ಟಿ.ಐ ಕ್ಯಾಂಪಸ್, ಕುರುಬಾರಹಳ್ಳಿ, ವೆಂಕಟಲಿಂಗಯ್ಯ ಬಡಾವಣೆ, ಪಾರ್ಶ್ವ ವಾಟಿಕ ಅಪಾರ್ಟ್‌ಮೆಂಟ್ ಸುತ್ತ–ಮುತ್ತ ಬುದ್ದ ಮಾರ್ಗ, ಮಾದೇಶ್ವರ ನರ್ಸಿಂಗ್ ಹೋಮ್ ಸುತ್ತ–ಮುತ್ತ ನ್ಯಾಯಮಾರ್ಗ, ಜಿ.ಎಸ್.ಟಿ ಭವನ ಸುತ್ತ–ಮುತ್ತ, ಜೆ.ಎಸ್.ಎಸ್ ಸ್ಕೂಲ್ ಸುತ್ತ–ಮುತ್ತ, ಆನಂದ ಮಾರ್ಗ, ಶಾಂತಿ ಮಾರ್ಗ, ತ್ಯಾಗ ಮಾರ್ಗ, ದಯಾ ಮಾರ್ಗ, ಅಹಿಂದ ಮಾರ್ಗ, ಸನ್ಮಾರ್ಗ, ವಿನಯ ಮಾರ್ಗ ಹಾಗೂ ಸುತ್ತ–ಮುತ್ತ ಹಾಗೆಯೇ ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಶಿವಪುರ, ಎಸ್.ಆರ್ ಲೇಔಟ್, ಶ್ರೀವಿಲಾಸ್ ಲೇಔಟ್, ಪಿನಾಕಲ್ ಪರ್ಲ್, ದೇವಯ್ಯನ ಹುಂಡಿ, ಬಿ.ಇ.ಎಂ.ಎಲ್ ಲೇಔಟ್, ಶ್ರೀರಾಂಪುರ 2ನೇ ಹಂತ, ಮಧುವನ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆ ಆಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಕನಸು ನನಸಿನೆಡೆಗೆ ಪಯಣ ನಾಟಕ ಪ್ರದರ್ಶನ; ನೂತನ ಗೋಕುಲಂ ಬೃಂದಾವನ ಕೊಡಗು ಸಂಘದ ಪದಾಧಿಕಾರಿಗಳಿಗೆ ಸನ್ಮಾನ


ಮೈಸೂರಿನ ವಾರ್ಡ್ ನಂ.6ರ ಗೋಕುಲಂನ ಬೃಂದಾವನ ಬಡಾವಣೆಯ ಸಾಂಸ್ಕೃತಿಕ ಭವನದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ರಂಗ ರಾಜ್ಯೋತ್ಸವ ಎಂಬ ಹೆಸರಿನಲ್ಲಿ ನಡೆದ 'ಕನಸು ನನಸಿನೆಡೆಗೆ ಪಯಣ' ಮೂರು ದಿನಗಳ ನಾಟಕದ ನಂತರ ಗೋಕುಲಂ ಬೃಂದಾವನ ಕೊಡಗು ಸಂಘಕ್ಕೆ ನೂತನವಾಗಿ ಆಯ್ಕೆಯಾದ ಸಂಘದ ಅಧ್ಯಕ್ಷ ಐ.ಬಿ.ಮುದ್ದಯ್ಯ, ಉಪಾಧ್ಯಕ್ಷರಾದ ಐ.ಜಿ.ಕಾಶಿಯಪ್ಪ, ಕಾರ್ಯದರ್ಶಿ ನವೀನ್, ಖಜಾಂಚಿ ನ್ಯಾನ್ಸಿ ಹಾಗೂ ಸಂಘದ ರೋಮಿ ಅಪ್ಪಯ್ಯ, ಯು.ಅಪ್ಪಯ್ಯ ಹಾಗೂ ಇನ್ನಿತರ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ನಂತರ ಬೆಂಗಳೂರು ನಾಟಕ ತಂಡದವರಿಂದ ಮಿಸ್ ಸೇವಂತಿ ನಾಟಕ ಪ್ರದರ್ಶಿಸಲಾಯಿತು. ಶಾಸಕ ಕೆ.ಹರೀಶ್‌ಗೌಡ, ವಿದ್ಯಾವರ್ಧಕ ಸಂಸ್ಥೆಯ ಪ್ರಾಂಶುಪಾಲ ಮರಿಗೌಡ, ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ದೇವರಾಜ್, ಶ್ರೇಯಸ್, ರಾಮಕೃಷ್ಣ ಇನ್ನಿತರರಿದ್ದರು.

ದೇಶ - ವಿದೇಶ

ಫ್ರಾನ್ಸ್‌ನಲ್ಲಿ ಪ್ರಧಾನಿ ಮೈಕೆಲ್ ಬರ್ನಿಯರ್ ಸರ್ಕಾರ ಪತನ



ಪ್ಯಾರಿಸ್: ಕುತೂಹಲಕಾರಿ ಬೆಳವಣಿಗೆಯಲ್ಲಿ ಫ್ರಾನ್ಸ್‌ನಲ್ಲಿ ಪ್ರಧಾನಿ ಮೈಕೆಲ್ ಬರ್ನಿಯರ್ ಸರ್ಕಾರ ಪತನವಾಗಿದ್ದು, ಅವಿಶ್ವಾಸ ನಿರ್ಣಯದಲ್ಲಿ ಬಹುಮತ ಪಡೆಯುವಲ್ಲಿ ಮೈಕೆಲ್ ಬರ್ನಿಯರ್ ವಿಫಲರಾಗಿದ್ದಾರೆ. ಪ್ರಧಾನಿ ಮೈಕೆಲ್ ಬರ್ನಿಯರ್ ಮತ್ತು ಅವರ ಕ್ಯಾಬಿನೆಟ್ ವಿರುದ್ಧ ಫ್ರಾನ್ಸ್ ಸಂಸದರು ಅವಿಶ್ವಾಸಮತ ಅಂಗೀಕರಿಸಿದ್ದು, ಇದರೊಂದಿಗೆ ದೇಶದಲ್ಲಿ ಹೊಸ ರಾಜಕೀಯ ಸಂದಿಗ್ಧತೆ ಸೃಷ್ಟಿಯಾಗಿದೆ. ಅವಿಶ್ವಾಸ ನಿರ್ಣಯದಲ್ಲಿ ಪ್ರಧಾನಿ ಮೈಕೆಲ್ ಬರ್ನಿಯರ್ ಪದಚ್ಯುತಗೊಂಡ ನಂತರ ಫ್ರಾನ್ಸ್ ಸರ್ಕಾರ ಪತನಗೊಂಡಿದೆ. ಸಂಸದರು ಅವರ ವಿರುದ್ಧದ ನಿರ್ಣಯವನ್ನು ಬೆಂಬಲಿಸಿ ಮತ ಹಾಕಿದ್ದು, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ನೇಮಕಗೊಂಡ ಕೇವಲ 3 ತಿಂಗಳ ಅವಧಿಯಲ್ಲೇ ಮೈಕೆಲ್ ಬರ್ನಿಯರ್ ಸರ್ಕಾರ ಪತನಗೊಂಡಿದೆ. ಫ್ರಾನ್ಸ್ ಸಂಸತ್ತಿನ ಕೆಳಮನೆಯಲ್ಲಿ 331 ಸಂಸದರು ಅವಿಶ್ವಾಸಮತ ನಿರ್ಣಯದ ಪರ ಮತ ಚಲಾಯಿಸಿದ್ದು, ಈ ನಿರ್ಣಯ ಅಂಗೀಕಾರಗೊಳ್ಳಲು ಕನಿಷ್ಠ 288 ಮತಗಳ ಅಗತ್ಯವಿದೆ. ಫ್ರಾನ್ಸ್ ಸಂಸತ್ತಿಗೆ ಇದೇ ವರ್ಷ ಜುಲೈನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ದೊರಕಿರಲಿಲ್ಲ.


ಪುಷ್ಪ–2 ಪ್ರೀಮಿಯರ್ ಶೋ ವೇಳೆ ನೂಕು ನುಗ್ಗಲು; ಮಹಿಳೆ ಸಾವು

ಹೈದರಾಬಾದ್: ನಟ ಅಲ್ಲು ಅರ್ಜುನ್ ಅವರ ಪುಷ್ಪ 2: ದಿ ರೂಲ್‌ನ ಪ್ರೀಮಿಯರ್ ಶೋ ವೇಳೆ ಚಿತ್ರಮಂದಿರವೊಂದರ ಬಳಿ ಭಾರಿ ಜನಸಂದಣಿಯಿಂದ ಉಂಟಾದ ನೂಕು ನುಗ್ಗಲಿನಿಂದ ಮಹಿಳೆಯೊಬ್ಬರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಅವರ ಮಗನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.



ಬುಧವಾರ ರಾತ್ರಿ ಈ ಘಟನೆ ನಡೆದಿದೆ. ನೆಚ್ಚಿನ ನಟನನ್ನು ನೋಡಲು ಅಪಾರ ಸಂಖ್ಯೆಯ ಅಭಿಮಾನಿಗಳು ಚಿತ್ರಮಂದಿರದಲ್ಲಿ ಜಮಾಯಿಸಿದ್ದರು. ಅಲ್ಲು ಅರ್ಜುನ್ ಹಾಗೂ ಚಿತ್ರದ ಇತರ ನಟರ ಆಗಮನದ ಬಗ್ಗೆ ಪೂರ್ವ ಮಾಹಿತಿ ಇರಲಿಲ್ಲ. ಥಿಯೇಟರ್ ಆಡಳಿತ ಕೂಡ ಯಾವುದೇ ವ್ಯವಸ್ಥೆ ಮಾಡಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಥಿಯೇಟರ್ ಒಳಗೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದ ಮಹಿಳೆ ಮತ್ತು ಅವರ ಮಗ ಭಾರಿ ಜನಸಂದಣಿಯಿಂದ ನೂಕಲ್ಪಟ್ಟಿದ್ದು, ನಂತರ ಉಸಿರುಗಟ್ಟಿ ಪ್ರಜ್ಞೆ ಕಳೆದುಕೊಂಡಿರುವುದಾಗಿ ಪ್ರಾಥಮಿಕ ತನಿಖೆಯ ಆಧಾರದ ಮೇಲೆ ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಸಿಬ್ಬಂದಿ, ಮಹಿಳೆ, ಆಕೆಯ ಮಗನನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದರು.

ದಕ್ಷಿಣ ಕೊರಿಯಾದ ರಕ್ಷಣಾ ಸಚಿವ ಕಿಮ್ ರಾಜೀನಾಮೆ



ದಕ್ಷಿಣ ಕೊರಿಯಾ: ದಕ್ಷಿಣ ಕೊರಿಯಾದಲ್ಲಿ ರಾಜಕೀಯ ಅಸ್ಥಿರತೆ ಮುಂದುವರೆದಿದೆ. ರಕ್ಷಣಾ ಸಚಿವ ಕಿಮ್ ಯೋಂಗ್–ಹ್ಯುನ್ ರಾಜೀನಾಮೆ ನೀಡಿದ್ದಾರೆ. ಸಮರ ಕಾನೂನಿನ ಕಲ್ಪನೆಯ ಮಾಸ್ಟರ್ ಮೈಂಡ್ ಎಂದು ಅವರನ್ನು ಕರೆಯಲಾಗಿತ್ತು. ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ಬುಧವಾರ ರಾತ್ರಿ 11 ಗಂಟೆಗೆ ಹಠಾತ್ತನೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿ, ಸಮರ ಕಾನೂನನ್ನು ಹೇರುವುದಾಗಿ ಘೋಷಿಸಿದ್ದರು. ಆದರೆ ಪ್ರತಿಪಕ್ಷಗಳ ವಿರೋಧ ಮತ್ತು ಸಾರ್ವಜನಿಕರ ಕೋಲಾಹಲದ ನಡುವೆ ಅವರು ಈ ನಿರ್ಧಾರವನ್ನು ಹಿಂಪಡೆಯಬೇಕಾಯಿತು. ಈ ಹಿಂದೆ ಸಂಸತ್ತಿನಲ್ಲಿ ಈ ನಿರ್ಧಾರದ ವಿರುದ್ಧ ನಿರ್ಣಯ ಮಂಡಿಸಿ ಅದನ್ನು ಕೈಬಿಡಲಾಗಿತ್ತು. ಸೌದಿ ಅರೇಬಿಯಾದ ರಾಯಭಾರಿ ಚೋಯ್ ಬ್ಯುಂಗ್–ಹ್ಯುಕ್ ಅವರನ್ನು ಹೊಸ ರಕ್ಷಣಾ ಸಚಿವರನ್ನಾಗಿ ಹೆಸರಿಸಲಾಗಿದೆ. ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಅವರ ಪಕ್ಷವು ಸಂಸತ್ತಿನಲ್ಲಿ ಕಡಿಮೆ ಬೆಂಬಲವನ್ನು ಹೊಂದಿದೆ. ಪ್ರತಿಪಕ್ಷ ಡೆಮಾಕ್ರಟಿಕ್ ಪಕ್ಷ ಸಂಸತ್ತಿನಲ್ಲಿ ಪ್ರಾಬಲ್ಯ ಹೊಂದಿದೆ. ಇಂತಹ ಪರಿಸ್ಥಿತಿಯಲ್ಲಿ ಆಡಳಿತಾರೂಢ ಪೀಪಲ್ಸ್ ಪವರ್ ಪಕ್ಷದ ಪ್ರತಿಯೊಂದು ನಿರ್ಧಾರವನ್ನು ವಿರೋಧ ಪಕ್ಷವು ಸಂಸತ್ತಿನಲ್ಲಿ ರದ್ದುಪಡಿಸುತ್ತದೆ.

ಬಾಂಗ್ಲಾದೇಶದಲ್ಲಿ ಎಲ್ಲಾ ಬಂಧಿತರಿಗೂ ಕಾನೂನು ಸಹಾಯ ಸಿಗಬೇಕು: ಅಮೆರಿಕ

ವಾಷಿಂಗ್ಟನ್: ಬಾಂಗ್ಲಾದೇಶವು ಮೂಲಭೂತ ಮಾನವ ಹಕ್ಕುಗಳ ತತ್ವಗಳಿಗೆ ಅನುಗುಣವಾಗಿ ಎಲ್ಲಾ ಬಂಧಿತರಿಗೆ ಸೂಕ್ತ ಕಾನೂನು ಸಹಾಯ ಸಿಗುವಂತೆ ನೋಡಿಕೊಳ್ಳಬೇಕು ಎಂದು ವಾಷಿಂಗ್ಟನ್‌ನಲ್ಲಿರುವ ಯುಎಸ್ ರಾಜ್ಯ ಇಲಾಖೆ ವಕ್ತಾರರು ಹೇಳಿದ್ದಾರೆ.

ವಕೀಲರು ಬಾರದ ಕಾರಣ ಚಿತ್ತಗಾಂಗ್ ನ್ಯಾಯಾಲಯದಲ್ಲಿ ಬಂಧಿತ ಚಿನ್ಮಯ್ ಕೃಷ್ಣದಾಸ್ ಜಾಮೀನು ವಿಚಾರಣೆಯನ್ನು ತಿಂಗಳ ಕಾಲ ಮುಂದೂಡಲಾಯಿತು. ಅಷ್ಟೇ ಅಲ್ಲದೆ ಅಲ್ಲಿನ ಅಧಿಕಾರಿಗಳು ವಕೀಲರನ್ನು ಕೋರ್ಟ್‌ನ ಆವರಣಕ್ಕೆ ಬರದಂತೆ ತಡೆದಿದ್ದರು.

ಹಿಂದೂಗಳ ಮೇಲೆ ನಡೆಯುತ್ತಿರುವ ದಾಳಿಗಳ ವರದಿಗಳನ್ನು ಬಾಂಗ್ಲಾ ಪ್ರಧಾನಿ ಯೂನಸ್ ತಳ್ಳಿಹಾಕಿದ್ದರು. ಧಾರ್ಮಿಕ ಮುಖಂಡರ ಜತೆ ಮತ್ತೊಂದು ಸಭೆ ನಡೆಸಲಿದ್ದಾರೆ. ರವೀಂದ್ರ ಘೋಷ್ ಎಂದು ಗುರುತಿಸಲಾದ ವಕೀಲರೊಬ್ಬರು ನ್ಯಾಯಾಲಯದ ವಿಚಾರಣೆಗೆ ಹಾಜರಾಗಲು ಢಾಕಾದಿಂದ ಸುಮಾರು 250 ಕಿಮೀ ಪ್ರಯಾಣಿಸಿದ್ದರು. ಆದರೆ, ಸ್ಥಳೀಯರು ನ್ಯಾಯಾಲಯದ ಆವರಣಕ್ಕೆ ಪ್ರವೇಶ ನಿರಾಕರಿಸಿದರು. ಧಾರ್ಮಿಕ ನಾಯಕ ಕೃಷ್ಣದಾಸ್ ಬಂಧನದ ವಿಚಾರ ವಿವಾದಕ್ಕೀಡಾಗಿರುವಂತೆಯೇ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳನ್ನು ಗುರಿಯಾಗಿಸಿ ಯಾವುದೇ ದಾಳಿ ನಡೆಸಲಾಗಿಲ್ಲ ಎಂದು ಬಾಂಗ್ಲಾ ಸರ್ಕಾರ ತಿಳಿಸಿದೆ.

ಉನ್ನಾವೋ ಅತ್ಯಾಚಾರ ಪ್ರಕರಣ: ಸೆಂಗಾರ್‌ಗೆ ಮಧ್ಯಂತರ ಜಾಮೀನು



ನವದೆಹಲಿ: 2017ರಲ್ಲಿ ಉತ್ತರ ಪ್ರದೇಶದ ಉನ್ನಾವೊದಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಿಜೆಪಿ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗಾರ್‌ಗೆ ವೈದ್ಯಕೀಯ ಕಾರಣಗಳಿಗಾಗಿ ದೆಹಲಿ ಹೈಕೋರ್ಟ್ ಗುರುವಾರ ಎರಡು ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿ ಪ್ರತಿಭಾ ಎಂ ಸಿಂಗ್, ಅಮಿತ್ ಶರ್ಮಾ ಅವರನ್ನೊಳಗೊಂಡ ನ್ಯಾಯಪೀಠ, ಶಿಕ್ಷೆಯನ್ನು ಸದ್ಯಕ್ಕೆ ಅಮಾನತುಗೊಳಿಸಿತು. ಅನಾರೋಗ್ಯದ ಕಾರಣ ಸೆಂಗಾರ್ ಅವರನ್ನು ಏಮ್ಸ್–ದೆಹಲಿಗೆ ದಾಖಲಿಸಬೇಕು ಮತ್ತು ಬಿಡುಗಡೆಯಾದ ನಂತರ ರಾಜಧಾನಿಯಲ್ಲೇ ಇರಬೇಕು ಎಂದು ನಿರ್ದೇಶಿಸಿತು. ಪ್ರಕರಣದ ಇತಿಹಾಸ ಮತ್ತು ಅರ್ಜಿದಾರರ ವೈದ್ಯಕೀಯ ಸ್ಥಿತಿಯನ್ನು ಪರಿಗಣಿಸಿ ಅವರನ್ನು 2 ವಾರಗಳವರೆಗೆ ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗುವುದು ಮತ್ತು ಸಮಗ್ರ ವೈದ್ಯಕೀಯ ಪರಿಶೀಲನೆಗಾಗಿ ಅವರನ್ನು ದೆಹಲಿಯ ಏಮ್ಸ್‌ಗೆ ದಾಖಲಿಸಬೇಕು ಎಂದು ನ್ಯಾಯಪೀಠ ಹೇಳಿತು.

ಏಮ್ಸ್‌ನ ವೈದ್ಯಕೀಯ ಮಂಡಳಿಯಿಂದ ವರದಿ ಕೇಳಿರುವ ನ್ಯಾಯಾಲಯ ಡಿ.20ರಂದು ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದಾಗಿ ಹೇಳಿದೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ದೌರ್ಜನ್ಯ ಖಂಡಿಸಿ

ಹಿಂದೂ ಪರ ಸಂಘಟನೆಗಳ ಪ್ರತಿಭಟನೆ

ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ನೋಡಿಕೊಂಡು ಸುಮ್ಮನೆ ಕೂರುವುದಿಲ್ಲ

ಮಡಿಕೇರಿ,ಡಿ.5– ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾತ್ಮಕವಾದ ದೌರ್ಜನ್ಯವನ್ನು ಖಂಡಿಸಿ ಹಿಂದು ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಹಿಂದೂ ಪರ ಸಂಘಟನೆಗಳು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದವು.

ಹಿಂದು ಹಿತರಕ್ಷಣಾ ಸಮಿತಿಯ ಸಂಚಾಲಕ ಸುರೇಶ್ ಮುತ್ತಪ್ಪ, ಕುಕ್ಕೇರ ಅಜಿತ್, ಸಂಪತ್ ಕುಮಾರ್ ಅವರುಗಳ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ನಗರದ ಶ್ರೀ ಚೌಡೇಶ್ವರಿ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಶಂಖನಾದ ಮೊಳಗಿಸುವ ಮೂಲಕ ಪ್ರತಿಭಟನಾ ಮೆರವಣಿಗೆ ಆರಂಭಗೊಂಡಿತು. ಜಿಲ್ಲೆಯಾದ್ಯಂತ ಆಗಮಿಸಿದ್ದ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಕೇಸರಿ ಧ್ವಜಗಳೊಂದಿಗೆ ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ವಿರೋಧಿಸಿ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ಬೀದಿಯ ಮೂಲಕ ಗಾಂಧಿ ಮೈದಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಿ, ಹಿಂದೂ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು

ಕೈಕಟ್ಟಿ ಕೂರುವುದಿಲ್ಲ: ಗಾಂಧಿ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ದಿಕ್ಸೂಚಿ ಭಾಷಣ ಮಾಡಿದ ಬಜರಂಗ ದಳದ ದಕ್ಷಿಣ ಪ್ರಾಂತದ ಮಾಜಿ ಸಹ ಸಂಚಾಲಕ ಹಾಗೂ ಸಮಾಜ ಕಾರ್ಯಕರ್ತರಾದ ಮುರಳೀಕೃಷ್ಣ ಹಸಂತಡ್ಕ ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ಕಡಿವಾಣ ಹಾಕಬೇಕಾಗಿದೆ. ಹಿಂದುಗಳ ಮೇಲೆ ನಡೆಯುವ ದೌರ್ಜನ್ಯಗಳನ್ನು ನೋಡಿಕೊಂಡು ಕೈಕಟ್ಟಿಕೊಂಡು ಕುಳಿತುಕೊಳ್ಳಲಾರೆವು. ಸಮಾಜದ ಕಟ್ಟಕಡೆಯ ಹಿಂದುವಿಗೆ ಅನ್ಯಾಯವಾದರು ಇಡೀ ಹಿಂದು ಸಮಾಜ ದಿಟ್ಟ ಉತ್ತರವನ್ನು ನೀಡಲಿದೆ ಎಂದು ಎಚ್ಚರಿಕೆಯ ಸಂದೇಶವನ್ನು ರವಾನಿಸಿದರು. ಬಾಂಗ್ಲಾದಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ಇಡೀ ವಿಶ್ವದಲ್ಲಿರುವ ಹಿಂದೂ ಬಾಂಧವರು ಧ್ವನಿ ಎತ್ತಿ ನಿಲ್ಲುವ ಮೂಲಕ, ಹಿಂದೂ ಸಮಾಜದ ನಾಶಕ್ಕೆ ಮುಂದಾಗುತ್ತಿರುವ ದುಷ್ಟ ಶಕ್ತಿಗಳಿಗೆ ನಡುಕವನ್ನು ಉಂಟು ಮಾಡಬೇಕಾಗಿದೆ. ನಮ್ಮಲ್ಲಿನ ಜಾತಿಗಳ ಭಿನ್ನತೆಯನ್ನು ಬದಿಗೊತ್ತಿ 'ನಾವೆಲ್ಲರು ಹಿಂದು ನಾವೆಲ್ಲರು ಒಂದು' ಎನ್ನುವ ಮನೋಭಾವವನ್ನು ಮೂಡಿಸಿಕೊಂಡು ಹಿಂದೂ ಸಮಾಜ ಜಾಗೃತವಾಗಬೇಕೆಂದು ಕರೆ ನೀಡಿದರು.

ಅನ್ನ ಹಾಕಿದವರು ಜೈಲಿಗೆ: ಹಿಂದು ಹಿತರಕ್ಷಣಾ ಸಮಿತಿಯ ಪ್ರಮುಖರಾದ ಅಜಿತ್ ಕುಕ್ಕೇರ ಮಾತನಾಡಿ, ಬಾಂಗ್ಲಾ ಉದಯಕ್ಕೆ ಕಾರಣವಾದ ಭಾರತದ ಹಿಂದೂಗಳನ್ನು ಅಲ್ಲಿ ಕೇಳುವವರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಇಸ್ಲಾಮಿಕ್ ಭಯೋತ್ಪಾದಕ ಶಕ್ತಿಗಳು ಅಲ್ಲಿನ ಹಿಂದೂಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನಕ್ಕೆ ಮುಂದಾಗಿವೆ. ಪ್ರಾಕೃತಿಕ ವಿಕೋಪಗಳ ಸಂದರ್ಭ ಅಲ್ಲಿನ ಮಂದಿಗೆ ಜಾತಿ ಮತಗಳ ಭೇದವಿಲ್ಲದೆ ಅನ್ನ ನೀಡಿದ ಇಸ್ಕಾನ್ ಸಂಸ್ಥೆಯ ಪ್ರಮುಖರನ್ನು ಜೈಲಿಗಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪ್ರಮುಖರಾದ ನಾಪಂಡ ರವಿ ಕಾಳಪ್ಪ, ಸುನಿಲ್ ಸುಬ್ರಮಣಿ, ಶಾಂತೆಯಂಡ ರವಿ ಕುಶಾಲಪ್ಪ, ಬಜರಂಗ ದಳದ ಚೇತನ್, ಅನಿತಾ ಪೂವಯ್ಯ, ಮಹೇಶ್ ಜೈನಿ, ಸುವಿನ್ ಗಣಪತಿ, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಪಿ.ಎಂ.ರವಿ, ಆನಂದ ರಘು, ಸತೀಶ್ ಜೋಯಪ್ಪ, ಕೊಲ್ಲೀರ ಬೋಪಣ್ಣ, ಉಮಾ ಪ್ರಭು ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ನುಸುಳುಕೋರರನ್ನು ಹುಡುಕಿ ಹೊರಗಟ್ಟಿ

ಕೊಡಗು ಜಿಲ್ಲೆಯಲ್ಲಿ ಅಸ್ಸಾಂ ರಾಜ್ಯದವರು ಎಂದು ನಕಲಿ ದಾಖಲೆಗಳನ್ನು ಹೊಂದಿರುವ ಅಕ್ರಮ ಬಾಂಗ್ಲಾ ವಲಸಿಗರಿದ್ದಾರೆ ಕೆಲವು ಮತಾಂಧರು ಅವರಿಗೆ ಆಶ್ರಯವನ್ನೂ ನೀಡಿದ್ದಾರೆ ಅಕ್ರಮ ಬಾಂಗ್ಲಾ ನುಸುಳುಕೋರರನ್ನು ಪೊಲೀಸ್ ಇಲಾಖೆ ಹುಡುಕಿ ಹೊರಹಟ್ಟಲು ಮುಂದಾಗಬೇಕು. ಈ ಕುರಿತು ಬಹಳ ವರ್ಷಗಳ ಹಿಂದಿನಿಂದಲೂ ಇಲಾಖೆಯನ್ನು ಒತ್ತಾಯಿಸುತ್ತ ಬರಲಾಗಿದೆ ಹಿಂದೂ ಸಮಾಜ ಕಾನೂನನ್ನು ಕೈಗೆತ್ತಿಕೊಳ್ಳುವ ಮುನ್ನ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಜಾಗೃತ ಹಿಂದು ಸಮಾಜವೇ ಅವರನ್ನು ಗುರುತಿಸಿ ಹೊರಗಟ್ಟಲಿದೆ.

– ಮುರಳೀಕೃಷ್ಣ ಹಸಂತಡ್ಕ

ಆಪಟ್ಟೀರ ಬಿ. ಸುಬ್ಬಯ್ಯ ನಿಧನ



ಮಡಿಕೇರಿ: ನಿವೃತ್ತ ಸೈನಿಕರು ಮತ್ತು ಮಾಯಮುಡಿ ಗ್ರಾಮದ ನಿವಾಸಿಯಾಗಿದ್ದ ಆಪಟ್ಟೀರ ಬಿ. ಸುಬ್ಬಯ್ಯ (ಮಣಿ) ಗುರುವಾರ ಮುಂಜಾನೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 86 ವರ್ಷ ಪ್ರಾಯವಾಗಿತ್ತು. ಮೃತರು ಪತ್ನಿ, ಜಿಲ್ಲಾ ಕಾಂಗ್ರೆಸ್ ವಕ್ತಾರರು ಮತ್ತು ಮಾಯಮುಡಿ ಗ್ರಾಪಂ ಅಧ್ಯಕ್ಷ ಎ.ಎಸ್. ಟಾಟು ಮೊಣ್ಣಪ್ಪ ಸೇರಿದಂತೆ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಸ್ವಗ್ರಾಮದ ಕುಟುಂಬ ಸ್ಮಶಾನದಲ್ಲಿ ನಡೆಯಿತು.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ

ಜಿಲ್ಲೆಯ ವಿವಿಧೆಡೆ ಎನ್ಐಎ ದಾಳಿ

ಮಡಿಕೇರಿ,ಡಿ.5– ಸುಳ್ಯ ತಾಲೂಕಿನ ಬೆಳ್ಳಾರೆಯ ಮಾಸ್ತಿಕಟ್ಟೆಯಲ್ಲಿ 2022ರ ಜು.26ರಂದು ನಡೆದಿದ್ದ ಬಿಜೆಪಿ ಯುವ ನಾಯಕ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ ಕೊಡಗು ಜಿಲ್ಲೆಯ ವಿವಿಧ ಕಡೆಗಳಿಗೆ ತೆರಳಿ ತನಿಖೆ ನಡೆಸಿದೆ.

ಸೋಮವಾರಪೇಟೆಯ ಅಬ್ದುಲ್ ನಾಸಿರ್ ಮತ್ತು ಅಬ್ದುಲ್ ರೆಹಮಾನ್ ಎಂಬವರು ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಆರೋಪಿಗಳಿಗೆ ಆಶ್ರಯ ನೀಡಿದ್ದ ಆರೋಪವಿದ್ದು, ಈ ವ್ಯಕ್ತಿಗಳು ಪ್ರಸ್ತುತ ದುಬೈನಲ್ಲಿದ್ದಾರೆ.

ಇವರ ಮನೆಗಳಿಗೆ ತೆರಳಿದ ಎನ್ಐಎ ಅಧಿಕಾರಿಗಳು ಮೊಬೈಲ್‌ಗಳನ್ನು ವಶಕ್ಕೆ ಪಡೆದು ಮನೆ ಮಂದಿಯನ್ನು ವಿಚಾರಣೆ ನಡೆಸಿರುವ ಮಾಹಿತಿ ದೊರೆತಿದೆ. ಮಡಿಕೇರಿಯ ಮುಸ್ತಾಫ, ಸೋಮವಾರಪೇಟೆಯ ಜುನೈದ್, ತೌಫಿಕ್ ಎಂಬುವರನ್ನು ವಿಚಾರಣೆಗೆ ಒಳಪಡಿಸಿ ಮೊಬೈಲ್‌ಗಳು, ಸಿಮ್ ಕಾರ್ಡ್‌ಗಳನ್ನು ಸಂಗ್ರಹಿಸಿಕೊಂಡೊಯ್ದಿದ್ದಾರೆ. ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದಲ್ಲಿ ಒಟ್ಟು 20 ಮಂದಿ ಆರೋಪಿಗಳಿದ್ದು, ಈಗಾಗಲೇ 14 ಮಂದಿಯನ್ನು ಎನ್ಐಎ ಬಂಧಿಸಿದೆ. 6 ಆರೋಪಿಗಳು ತಲೆಮರೆಸಿಕೊಂಡಿದ್ದು, ಇವರುಗಳು ತಮ್ಮ ಆಪ್ತ ವರ್ಗದೊಂದಿಗೆ ನಿರಂತರವಾಗಿ ಮೊಬೈಲ್ ಮೂಲಕ ಸಂಪರ್ಕದಲ್ಲಿರುವುದನ್ನು ಪತ್ತೆ ಮಾಡಿರುವ ರಾಷ್ಟ್ರೀಯ ತನಿಖಾ ದಳ ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದೆ.

ಇಂದಿನಿಂದ ವಿ.ಬಾಡಗದಲ್ಲಿ ಕೌಟುಂಬಿಕ ಹಾಕಿ ಪಂದ್ಯಾವಳಿ

ಪೊನ್ನಂಪೇಟೆ: ಬಿಟ್ಟಂಗಾಲ ಸಮೀಪದ ವಿ.ಬಾಡಗದ ಹೈ ಫ್ಲೈಯರ್ಸ್ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿರುವ ಮೂರು ಗ್ರಾಪಂ ವ್ಯಾಪ್ತಿಯ ಕೊಡವ ಕೌಟುಂಬಿಕ 3ನೇ ವರ್ಷದ ಹಾಕಿ ಪಂದ್ಯಾವಳಿಯು ಶುಕ್ರವಾರ (ಡಿ.6)ದಿಂದ ಆರಂಭಗೊಳ್ಳಲಿದೆ.

ವಿ.ಬಾಡಗದ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಒಟ್ಟು 5 ದಿನಗಳ ಕಾಲ ನಡೆಯಲಿರುವ ಈ ಹಾಕಿ ಪಂದ್ಯಾವಳಿಗಾಗಿ ಈಗಾಗಲೇ ಅಗತ್ಯ ಸಿದ್ಧತೆಗಳು ಪೂರ್ಣಗೊಂಡಿರುವುದಾಗಿ ವಿ.ಬಾಡಗ ಹೈಫ್ಲೈಯರ್ಸ್ ಸಂಸ್ಥೆ ಅಧ್ಯಕ್ಷ ಅಮ್ಮಣಿಚಂಡ ರಂಜು ಪೂಣಚ್ಚ ತಿಳಿಸಿದ್ದಾರೆ. ದ.ಕೊಡಗಿನ ಬಿಟ್ಟಂಗಾಲ, ಬಿ.ಶೆಟ್ಟಿಗೇರಿ ಮತ್ತು ಹಾತೂರು ಗ್ರಾಪಂ ವ್ಯಾಪ್ತಿಯಲ್ಲಿ ಐನ್‌ಮನೆ ಹೊಂದಿರುವ ಕೊಡವ ಕುಟುಂಬ ತಂಡಗಳಿಗಾಗಿ ಆಯೋಜಿಸಲಾಗಿರುವ ಈ ಹಾಕಿ ಪಂದ್ಯಾವಳಿಯಲ್ಲಿ ವಿವಿಧ ಅತಿಥಿ ಆಟಗಾರರನ್ನು ಒಳಗೊಂಡ ಒಟ್ಟು 20 ಕುಟುಂಬ ತಂಡಗಳು ಭಾಗವಹಿಸುತ್ತಿದ್ದು, ಚಾಂಪಿಯನ್ ಪಟ್ಟಕ್ಕಾಗಿ ಸೆಣಸಾಡಲಿವೆ.

ಶುಕ್ರವಾರ ಅಂತಾರಾಷ್ಟ್ರೀಯ ಮಾಜಿ ಹಾಕಿ ಪಟು, ಒಲಂಪಿಯನ್ ಚೆಪ್ಪುಡೀರ ಪೂಣಚ್ಚ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಹೈಫ್ಲೈಯರ್ಸ್ ಸಂಸ್ಥೆಯ ಸಲಹಾ ಸಮಿತಿ ಅಧ್ಯಕ್ಷ ಮಳವಂಡ ಗಿರೀಶ್ ಮುದ್ದಯ್ಯ ಅಧ್ಯಕ್ಷತೆ ವಹಿಸುವರು. ವಿರಾಜಪೇಟೆ ಪೊಲೀಸ್ ವೃತ್ತ ನಿರೀಕ್ಷಕ ಪೆಮ್ಮಂಡ ಅನೂಪ್ ಮಾದಪ್ಪ, ರಾಜ್ಯ ತಂಡದ ಮಾಜಿ ಹಾಕಿ ಆಟಗಾರ ಕಂಬಿರಂಡ ಶಾರದಾ ಅಯ್ಯಪ್ಪ, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಅಜ್ಜಿಕುಟ್ಟಿರ ನರೇನ್ ಕಾರ್ಯಪ್ಪ, ಹಾಕಿ ಕೂರ್ಗ್ ಸಂಸ್ಥೆ ಅಧ್ಯಕ್ಷ ಪಳಂಗಂಡ ಲವಕುಮಾರ್, ವಿ.ಬಾಡಗ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಂಜಿತಂಡ ಗಿಣಿ ಮೊಣ್ಣಪ್ಪ, ವಿ.ಬಾಡಗ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಕೆ.ಸಿ. ಗೀತಾಂಜಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ

ವೇತನಕ್ಕೆ ಆಗ್ರಹಿಸಿ ಮೈಷುಗರ್ ಗುತ್ತಿಗೆ ನೌಕರರ ಪ್ರತಿಭಟನೆ



ಬಾಕಿ ಇರುವ ವೇತನಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಗುತ್ತಿಗೆ ನೌಕರರು.


ಮಂಡ್ಯ: ಮೈಷುಗರ್ ಕಾರ್ಖಾನೆಯಲ್ಲಿ 2024–25ನೇ ಸಾಲಿನಲ್ಲಿ ಕೆಲಸ ನಿರ್ವಹಿಸಿದ ಗುತ್ತಿಗೆ ನೌಕರರಿಗೆ ಆರ್‌ಬಿಟೆಕ್ ಏಜೆನ್ಸಿಯವರು ಎರಡು ತಿಂಗಳ ವೇತನ ಹಾಗೂ ಓಟಿ ನೀಡಿಲ್ಲ ಎಂದು ಆರೋಪಿಸಿ ಗುತ್ತಿಗೆ ನೌಕರರು ಪ್ರತಿಭಟನೆ ನಡೆಸಿದರು.

ನಗರದ ಮೈಷುಗರ್ ಕಾರ್ಖಾನೆ ಮುಂದೆ ಬುಧವಾರ ಸಂಜೆ ಜಮಾಯಿಸಿದ ನೌಕರರು ಘೋಷಣೆ ಕೂಗಿ, ಎರಡು ತಿಂಗಳ ವೇತನ ಹಾಗೂ ಓಟಿ ಹಣ ನೀಡುವಂತೆ ಒತ್ತಾಯಿಸಿದರು.

ಅಕ್ಟೋಬರ್ ಹಾಗೂ ನವೆಂಬರ್ ತಿಂಗಳ ವೇತನ ಹಾಗೂ ಓಟಿ ನೀಡಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಆರ್‌ಬಿ ಟೆಕ್‌ನವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಆದರೆ ಕಳೆದ ಎರಡು ತಿಂಗಳಿನಿಂದ ವೇತನ ನೀಡಿಲ್ಲ. ಹೊರಗಿನಿಂದ ಬಂದ ನೌಕರರು ಬಡವರಿದ್ದು, ಇಲ್ಲೇ ವಾಸವಿದ್ದಾರೆ. ಅವರಿಗೆ ಊಟ ಮಾಡಲು ದುಡ್ಡಿಲ್ಲ. ವೇತನ ನೀಡಿ ಎಂದು ಆರ್‌ಬಿ ಟೆಕ್‌ನವರಿಗೆ ಕೇಳಿದರೆ, ಅವರು ನಮಗೆ ಕಾರ್ಖಾನೆಯವರು ಹಣ ನೀಡಿಲ್ಲ ಎನ್ನುತ್ತಿದ್ದಾರೆ ಎಂದು ಆರೋಪಿಸಿದರು.

ಟರ್ಬೈನ್ 20 ವರ್ಷಗಳಿಂದ ನಿಂತಿತ್ತು. ಇದೀಗ ಅದನ್ನು ಆರ್‌ಬಿ ಟೆಕ್‌ನವರು ದುರಸ್ತಿ ಮಾಡಿದ್ದಾರೆ. ಇದರ ವೆಚ್ಚ 7 ಲಕ್ಷ ರೂ. ಆಗಿದ್ದು, ಕಾರ್ಖಾನೆಯವರು ಹಣ ನೀಡುತ್ತಿಲ್ಲ. ಯಾಕೆ ಕೊಡುತ್ತಿಲ್ಲ ಎಂಬುದು ಗೊತ್ತಿಲ್ಲ ಇಲ್ಲಿ ಸುಮಾರು 250 ಮಂದಿ ನೌಕರರು ಕೆಲಸ ಮಾಡುತ್ತಿದ್ದಾರೆ. ಕಾರ್ಖಾನೆಯಲ್ಲಿ ಲಾಭ ಇದೆ ಎಂದು ಹೇಳುತ್ತಿದ್ದಾರೆ. ಆದರೆ ನೌಕರರಿಗೆ ವೇತನ ನೀಡಿಲ್ಲ. ಕಾರ್ಖಾನೆ ಚೇರ್ಮನ್, ವ್ಯವಸ್ಥಾಪಕರು ಹಣ ಬಿಡುಗಡೆ ಮಾಡುವಂತೆ ಸೂಚಿಸಿದ್ದರೂ ಲೆಕ್ಕಾಧಿಕಾರಿಗಳು ಹಣ ಬಿಡುಗಡೆ ಮಾಡುತ್ತಿಲ್ಲ. ಆದ್ದರಿಂದ ಕೂಡಲೇ ವೇತನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಸುಬ್ಬೇಗೌಡ ನಿಧನ



ಕೆ.ಆರ್.ಪೇಟೆ: ಅಗ್ರಹಾರಬಾಚಹಳ್ಳಿಯ ಹಿರಿಯ ಮುಖಂಡರಾದ ಸುಬ್ಬೇಗೌಡ(80) ನಿಧನ ಹೊಂದಿದರು. ಮೃತರು ಪತ್ನಿ ರತ್ನಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಡಿ.6ರಂದು ಬೆಳಿಗ್ಗೆ 10.30 ಗಂಟೆಗೆ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡ್ಯ ನೂತನ ಎಡಿಸಿಯಾಗಿ ಶಿವಾನಂದಮೂರ್ತಿ ನೇಮಕ

ಆಧ್ಯಾತ್ಮದ ಕಡೆಗೆ ಒಲವು ತೋರಿದ್ದ ಎಡಿಸಿ ನಾಗರಾಜು ಜಾಗಕ್ಕೆ ಹೊಸ ಅಧಿಕಾರಿ

ಮಂಡ್ಯ,ಡಿ.5– ಮಂಡ್ಯ ಜಿಲ್ಲಾ ನೂತನ ಅಪರ ಜಿಲ್ಲಾಧಿಕಾರಿಯಾಗಿ ಬಿ.ಸಿ.ಶಿವಾನಂದಮೂರ್ತಿ ಅವರನ್ನು ರಾಜ್ಯ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಹೆಚ್.ಕೇಶವಪ್ರಸಾದ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ಮಂಡ್ಯದಲ್ಲಿ ಉಪವಿಭಾಗಾಧಿಕಾರಿಯಾಗಿ, ತಹಸೀಲ್ದಾರ್ ಆಗಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವ ಶಿವಾನಂದಮೂರ್ತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾರುಕಟ್ಟೆ ವಿಭಾಗದ ಜಂಟಿ ಆಯುಕ್ತರಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ ಮಂಡ್ಯ ಜಿಲ್ಲಾ ಅಪರ ಜಿಲ್ಲಾಧಿಕಾರಿಯಾಗಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ.ಹೆಚ್.ಎಲ್.ನಾಗರಾಜು ಜಾಗಕ್ಕೆ ಶಿವಾನಂದಮೂರ್ತಿ ನೇಮಕವಾಗಿದ್ದಾರೆ. ಅಷ್ಟಕ್ಕೂ ನಾಗರಾಜು ಆಧ್ಯಾತ್ಮದ ಕಡೆಗೆ ಗಮನ ಕೊಟ್ಟಿದ್ದರಿಂದ ಹಿರಿಯ ಅಧಿಕಾರಿಗಳು ಹಾಗೂ ಸರ್ಕಾರಕ್ಕೆ ದೀರ್ಘಾವಧಿ ರಜೆ ಬೇಕೆಂದು ಕೇಳಿದ್ದ ತರುವಾಯ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಇತ್ತೀಚೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಹ ನಾಗರಾಜು ಅವರು ದೀರ್ಘಾವಧಿ ರಜೆ ಕೇಳಿದ್ದಾರೆಂದು ಹೇಳಿದ್ದರು.



ಶಿವಾನಂದಮೂರ್ತಿ

ಕ್ರಿಯಾಶೀಲತೆ ಜೊತೆಗೆ ಸಾಹಿತ್ಯ, ಸಾಂಸ್ಕೃತಿಕ ಹಬ್ಬಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ನಾಗರಾಜು ಅವರಿಗೆ ಈ ಬಾರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆಲವೊಂದು ವಿಶೇಷ ಜವಾಬ್ದಾರಿಯನ್ನು ನೀಡಲಾಗಿತ್ತು. ಆದರೆ ಸಮ್ಮೇಳನಕ್ಕೆ ಬೆರಳೆಣಿಕೆ ದಿನ ಬಾಕಿ ಇರುವಾಗಲೇ ನಾಗರಾಜು ಅವರು ಅಧಿಕಾರ ಬಿಟ್ಟು ತೆರಳಿರುವುದು ಸಮ್ಮೇಳನದ ಕೆಲ ಜವಾಬ್ದಾರಿಗಳಿಗೆ ಹಿನ್ನಡೆಯಾಗಿದೆ.



ನಾಗರಾಜು

ಎಲ್ಲಕ್ಕಿಂತ ಹೆಚ್ಚಾಗಿ ಜನಾನುರಾಗಿ ಅಧಿಕಾರಿ ಎಂದು ಹೆಸರು ಮಾಡಿದ್ದ ಅವರು ಈ ಹಿಂದೆ ಕೆ.ಆರ್.ಪೇಟೆ ಮತ್ತು ನಾಗಮಂಗಲದಲ್ಲಿ ತಹಸೀಲ್ದಾರ್ ಆಗಿ ಕಾರ್ಯನಿರ್ವಹಿಸಿದ್ದರು. ಕೆಲ ವರ್ಷಗಳ ಹಿಂದೆ ಆದಿಚುಂಚನಗಿರಿ ಮಠದ ಪ್ರಭಾವಕ್ಕೆ ಒಳಗಾಗಿ ಸನ್ಯಾಸತ್ವ ದೀಕ್ಷೆ ಪಡೆದಿದ್ದ ಅವರು, ಸ್ನೇಹಿತರು ಹಾಗೂ ಅಭಿಮಾನಿ ಗಳ ಒತ್ತಡಕ್ಕೆ ಮಣಿದು ಕರ್ತವ್ಯಕ್ಕೆ ಮತ್ತೆ ವಾಪಸ್ಸಾಗಿದ್ದರು.

ವಾಪಸ್ಸಾದ ತರುವಾಯ ಮಂಡ್ಯ ಅಪರ ಜಿಲ್ಲಾಧಿಕಾರಿಯಾಗಿ ಸುದೀರ್ಘ ಮೂರು ವರ್ಷಗಳಿಂದ ಕರ್ತವ್ಯ ನಿಭಾಯಿಸುತ್ತಿದ್ದ ಅವರನ್ನು ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಸರ್ಕಾರ ನೇಮಿಸಿತ್ತು. ಎರಡು ಹುದ್ದೆಯನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದ ಅವರು, ಇದೀಗ ದಿಢೀರನೇ ಕರ್ತವ್ಯದಿಂದ ವಿಮುಖರಾಗಿದ್ದಾರೆ.

ಉನ್ನತ ಮೂಲಗಳಿಂದ ಬಂದಿರುವ ಮಾಹಿತಿ ಪ್ರಕಾರ ಡಾ.ನಾಗರಾಜು ಅವರು ಕೆಂಗೇರಿಯಲ್ಲಿರುವ ವಿಶ್ವ ಒಕ್ಕಲಿಗರ ಮಠದ ಉತ್ತರಾಧಿಕಾರಿಯಾಗಿ ನೇಮಕ ವಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಪ್ರಸ್ತುತ ಮಠದ ಪೀಠಾಧಿಪತಿಯಾಗಿರುವ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ಅನಾರೋಗ್ಯಕ್ಕೊಳಗಾಗಿದ್ದು, ಮಠದ ಉಸ್ತುವಾರಿ ಹೊಣೆ ಹೊರುವ ಸಾಧ್ಯತೆ ಇದೆ ಎನ್ನಲಾಗಿದೆ.

ಕಿಕ್ಕೇರಿಯಲ್ಲಿ ಶಸ್ತ್ರಚಿಕಿತ್ಸಾ ಕೇಂದ್ರಕ್ಕೆ ಚಾಲನೆ

ಕಿಕ್ಕೇರಿ: ಹೋಬಳಿಯ ಗರ್ಭಿಣಿಯರಿಗೆ ದೊಡ್ಡ ಸಮಸ್ಯೆಗಳಾದಾಗ ತುರ್ತು ಶಸ್ತ್ರಚಿಕಿತ್ಸೆಗಾಗಿ ದೂರದ ಊರುಗಳಿಗೆ ತೆರಳುವ ಸಮಸ್ಯೆ ದೂರವಾಗಿದೆ ಎಂದು ಶಾಸಕ ಎಚ್.ಟಿ.ಮಂಜು ಹೇಳಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ಶಸ್ತ್ರಚಿಕಿತ್ಸೆ ಹಾಗೂ ಉಪಕರಣಗಳ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ ಬಲು ದೊಡ್ಡ ಹೋಬಳಿ ಕೇಂದ್ರ ಇದಾಗಿದೆ. ಸುತ್ತಮುತ್ತ 80ಕ್ಕೂ ಹೆಚ್ಚಿನ ಹಳ್ಳಿಗಳ ಜನರು ಇಲ್ಲಿನ ಆಸ್ಪತ್ರೆ ಆಶ್ರಯಿಸಿದ್ದಾರೆ. ಗರ್ಭಿಣಿಯರಿಗೆ ಸಿಸೇರಿಯನ್ ರೀತಿ ತುರ್ತು ಚಿಕಿತ್ಸೆಗೆ ತಾಲೂಕು ಕೇಂದ್ರ, ಖಾಸಗಿ ಆಸ್ಪತ್ರೆಗೆ ತೆರಳಬೇಕಿತ್ತು. ಶಸ್ತ್ರಚಿಕಿತ್ಸಾ ಕೊಠಡಿ ಆರಂಭವಾಗಿರುವುದರಿಂದ ರೈತರು, ಬಡ ಮಹಿಳೆಯರು ಇನ್ನು ಮುಂದೆ ಹೊರಗಡೆ ಹೋಗುವ ಸಮಸ್ಯೆ ತಪ್ಪಿದೆ ಎಂದರು. ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ಅನಕ್ಷರಸ್ಥ, ರೈತರು ಇರಲಿದ್ದು ರೋಗಿ, ಸಂಬಂಧಿಕರೊಂದಿಗೆ ಸೌಜನ್ಯದಿಂದ ಆರೋಗ್ಯ ಸಿಬ್ಬಂದಿಗಳು ವರ್ತಿಸಿ. ತಿಳಿಹೇಳುವ ಕೆಲಸ ಮಾಡಿ. ತುರ್ತು ಚಿಕಿತ್ಸೆ ವೇಳೆ ಗಾಬರಿ ಸಹಜವಾಗಿದೆ ಎಂಬುದನ್ನು ಅರಿಯಿರಿ ಎಂದು ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಐಕನಹಳ್ಳಿ ಕೃಷ್ಣೇಗೌಡ, ಕಾಯಿ ಮಂಜೇಗೌಡ, ಶೇಖರ್, ಐನೋರಹಳ್ಳಿ ಮಲ್ಲೇಶ್, ಕೆ.ಜಿ.ಪುಟ್ಟರಾಜು ಇತರರಿದ್ದರು.



ಸಮುದಾಯ ಆರೋಗ್ಯ ಕೇಂದ್ರದ ನೂತನ ಶಸ್ತ್ರಚಿಕಿತ್ಸಾ ಹಾಗೂ ಉಪಕರಣಗಳ ಕೊಠಡಿಯನ್ನು, ಶಾಸಕ ಎಚ್.ಟಿ.ಮಂಜು ಉದ್ಘಾಟಿಸಿದರು.

ಶಾಲೆಗೆ ವಾಟರ್ ಫಿಲ್ಟರ್ ಕೊಡುಗೆ



ಚಿನಕುರಳಿ ಗ್ರಾಮ ಪಂಚಾಯ್ತಿ ವತಿಯಿಂದ 15ನೇ ಹಣಕಾಸು ಯೋಜನೆಯಡಿಯಲ್ಲಿ ಶಾಲೆ, ಅಂಗನವಾಡಿ ಹಾಗೂ ಕಿವುಡ ಮತ್ತು ಮೂಕ ಮಕ್ಕಳ ಶಾಲೆಗಳಿಗೆ ವಾಟರ್ ಫಿಲ್ಟರ್‌ಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಗಾಯತ್ರಿ ಕುಮಾರ್, ಡೈರಿ ಅಧ್ಯಕ್ಷ ಸಿ.ಶಿವಕುಮಾರ್, ಸೊಸೈಟಿ ಅಧ್ಯಕ್ಷ ಸಿ.ಎಸ್. ಮಂಜುನಾಥ್, ಗ್ರಾಪಂ ಸದಸ್ಯ ಸಿ.ಎ.ಲೋಕೇಶ್, ಪಿಡಿಒ.ಆರತಿಕುಮಾರಿ ಹಾಜರಿದ್ದರು.

ರೈತರು ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಿ



ಮಣ್ಣಿನ ಫಲವತ್ತತೆ ಕುರಿತು ರೈತರಿಗೆ ತರಬೇತಿ ಶಿಬಿರ ಉದ್ಘಾಟನೆ.

ಚಾಮರಾಜನಗರ, ಡಿ.5– ಪ್ರತಿಯೊಬ್ಬ ರೈತರು ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಕೆಲವು ನಿಯಮಗಳನ್ನು ಪಾಲಿಸಬೇಕು ಎಂದು ಸಹಾಯಕ ಕೃಷಿ ನಿರ್ದೇಶಕರಾದ ರೂಪ ತಿಳಿಸಿದರು.

ನಗರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ 2024–25ನೇ ಆತ್ಮ ಯೋಜನೆಯಡಿ ವಿಶ್ವ ಮಣ್ಣಿನ ದಿನದ ಅಂಗವಾಗಿ ರೈತರಿಗೆ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ತಮ್ಮ ಜಮೀನುಗಳಲ್ಲಿ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬೇಕಾದಲ್ಲಿ ಮಿಶ್ರ ಬೆಳೆ ಬೆಳೆಯಬೇಕು ಹಾಗೂ ಅಂತರ ಕಾಪಾಡಿಕೊಳ್ಳಬೇಕು. ಅಲ್ಲದೇ ಕೊಟ್ಟಿಗೆ ಹಾಗೂ ಸಾವಯವ ಗೊಬ್ಬರವನ್ನು ಬಳಸಬೇಕು. ನೀರು ಹಿಂಗುವ ರೀತಿ ಬದು ನಿರ್ಮಾಣ ಮಾಡಬೇಕು. ಯಾವುದೇ ರಾಸಾಯನಿಕ ಕೀಟನಾಶಕಗಳನ್ನು ಸಿಂಪಡಿಸಬಾರದು. ಇದರಿಂದ ಭೂಮಿಯ ಫಲವತ್ತತೆ ಹೆಚ್ಚಾಗುವುದಲ್ಲದೆ ಆರೋಗ್ಯಕರ ಆಹಾರ ಉತ್ಪನ್ನಗಳನ್ನು ಬೆಳೆಯಬಹುದು ಎಂದರು.

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ರಜತ್ ಹೆಚ್.ಪಿ. ಅವರು ರೈತರಿಗೆ ತರಬೇತಿ ನೀಡುವ ಮೂಲಕ ಮಾತನಾಡಿ, ಮಣ್ಣಿನ ಸಂರಕ್ಷಣೆಗೆ ವೈಜ್ಞಾನಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಬೇಕು. ಮಳೆ ಮತ್ತು ಗಾಳಿಯಿಂದ ಸವಕಳಿಯಾಗುವುದನ್ನು ತಡೆಗಟ್ಟಲು ಮಿಶ್ರ ಬೆಳೆ ಬೆಳೆಯಬೇಕು.ಮಣ್ಣಿಗೆ ಸಮತೋಲನ ಪೋಷಕಾಂಶಗಳ ಪೂರೈಕೆ ಹಾಗೂ ಉಪಯುಕ್ತ ಸೂಕ್ಷ್ಮಾಣು ಜೀವಿಗಳ ಸಂಖ್ಯೆ ಅಲ್ಲದೆ ಕಡಿಮೆ ಪ್ರಮಾಣದಲ್ಲಿ ಸಸ್ಯರೋಗ ಮತ್ತು ಕೀಟನಾಶಕಗಳನ್ನು ಸಿಂಪಡಿಸಬೇಕು.ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಇದೆ ವೇಳೆ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ಜಯಶಂಕರ್, ಚಂದಕವಾಡಿ ಕೃಷಿ ಅಧಿಕಾರಿ ವೀರಭದ್ರ ಸೇರಿದಂತೆ ರೈತರು ಭಾಗವಹಿಸಿದ್ದರು.

ಆಲೂರು ಮಹದೇವಶೆಟ್ಟಿ ನಿಧನ



ಆಲೂರು, ಡಿ.5– ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ನಿವಾಸಿ ಹಿರಿಯ ಜಾನಪದ ಕಲಾವಿದ ಮಹದೇವಶೆಟ್ಟಿ (65) ಗುರುವಾರ ಬೆಳಿಗ್ಗೆ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಶುಕ್ರವಾರ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ಯಳಂದೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

35 ಕೋಟಿ ರೂ. ವೆಚ್ಚದ ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ : ಎಆರ್‌ಕೆ

ಯಳಂದೂರು, ಡಿ.5– ಮುಖ್ಯಮಂತ್ರಿ ಸಿದ್ದರಾಮಯ್ಯನವರು ಡಿ.7 ರಂದು ಯಳಂದೂರು ಪಟ್ಟಣಕ್ಕೆ ಆಗಮಿಸುತ್ತಿದ್ದು, 35 ಕೋಟಿ ರೂ. ವೆಚ್ಚದ ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ಪಟ್ಟಣಕ್ಕೆ ಇದೊಂದು ಅಪೂರ್ವ ಕೊಡುಗೆಯಾಗಿದ್ದು ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಮನವಿ ಮಾಡಿದ್ದಾರೆ.

ಸರ್ಕಾರಿ ಪಬ್ಲಿಕ್ ಶಾಲಾ ಆವರಣವನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್, ಸಿಇಒ ಮೋನಾ ರೌತ್ ಹಾಗೂ ಇತರೆ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿ ನಂತರ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ನಡೆದ ಸದಸ್ಯರು ಹಾಗೂ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಯಳಂದೂರು ತಾಲೂಕು ಕೇಂದ್ರಕ್ಕೆ ಒಂದು ಸುಸಜ್ಜಿತ ಆಸ್ಪತ್ರೆ ಕಟ್ಟಡ ಬೇಕೆಂದು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಮುಖ್ಯಮಂತ್ರಿಗಳು ಸ್ಪಂದಿಸಿ ಬಜೆಟ್‌ನಲ್ಲಿ ಇದಕ್ಕೆ ಅನುದಾನವನ್ನು ಘೋಷಿಸಿದ್ದರು.



ಯಳಂದೂರು ಪಟ್ಟಣ ಪಂಚಾಯಿತಿಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಪಪಂ ಸದಸ್ಯರು, ಮುಖಂಡರ ಸಭೆ ನಡೆಸಿದರು.

ಈಗ ಅನುದಾನವನ್ನು ನೀಡಿದ್ದು ಟೆಂಡರ್ ಪ್ರಕ್ರಿಯೆಯೂ ಪೂರ್ಣಗೊಂಡಿದೆ. ಡಿ.7 ರಂದು ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿಗಳು ಇಲ್ಲಿಗೆ ಬರಲಿದ್ದಾರೆ. ಅಂದು ಬೆಳಿಗ್ಗೆ ಸತ್ತೇಗಾಲದಲ್ಲಿ ಶಾಲಾ ಕಟ್ಟಡವನ್ನು ಉದ್ಘಾಟಿಸಿ ನಂತರ ಕೊಳ್ಳೇಗಾಲದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಪಟ್ಟಣಕ್ಕೆ ಬರಲಿದ್ದಾರೆ ಎಂದು ವಿವರಿಸಿದರು.

ಇದಕ್ಕಾಗಿ ಈಗಾಗಲೇ ಸರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪಟ್ಟಣದ ಸರ್ಕಾರಿ ಪಬ್ಲಿಕ್ ಶಾಲೆಯ ಆವರಣದಲ್ಲಿ ಕಾರ್ಯಕ್ರಮ ನಿಗದಿಯಾಗಿದ್ದು, ಈ ಮೈದಾನವನ್ನು ಸಿದ್ಧಗೊಳಿಸುವಂತೆ ಸೂಚನೆ ನೀಡಲಾಗಿದೆ. ಬಹುದಿನಗಳ ಬೇಡಿಕೆಯಾಗಿದ್ದ ಆಸ್ಪತ್ರೆಯನ್ನು ನನ್ನ ಕ್ಷೇತ್ರದ ಯಳಂದೂರಿಗೆ ನೀಡಿರುವುದರಿಂದ ಪಟ್ಟಣ ಪಂಚಾಯಿತಿ ಸದಸ್ಯರೂ ಸೇರಿದಂತೆ ಪಟ್ಟಣದ ನಾಗರೀಕರು, ತಾಲೂಕು ವ್ಯಾಪ್ತಿಯ ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಈ ಮೂಲಕ ಅವರಿಗೆ ನಮ್ಮ ತಾಲೂಕಿನಿಂದ ಕೃತಜ್ಞತೆಯನ್ನು ಸಲ್ಲಿಸುವಂತಾಗಬೇಕು ಎಂದರು.

ಅಲ್ಲದೆ ಪಟ್ಟಣದಲ್ಲಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಬಿಳಿಗಿರಿರಂಗನಬೆಟ್ಟದಲ್ಲಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಾಣ ಹಾಗೂ ಸಂತೆಮರಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಇದ್ದ ರೇಷ್ಮೆ ಇಲಾಖೆ ಕಚೇರಿಯ ಹಳೇ ಕಟ್ಟಡದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಮಾಡಲೂ ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಪಪಂ ಅಧ್ಯಕ್ಷೆ ಲಕ್ಷ್ಮಮ್ಮ ಮಲ್ಲು, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಮಂಜು, ಬಿ.ರವಿ, ಸುಶೀಲಾ ಪ್ರಕಾಶ್, ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಮುನಾವರ್ ಬೇಗ್, ಶ್ರೀಕಂಠಸ್ವಾಮಿ, ಮಾಜಿ ಸದಸ್ಯ ಜೆ.ಶ್ರೀನಿವಾಸ್, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಂದಹಳ್ಳಿ ನಂಜುಂಡಸ್ವಾಮಿ, ರೂಪೇಶ್, ರಾಘು, ಕಿನಕಹಳ್ಳಿ ಪ್ರಭುಪ್ರಸಾದ್ ಸೇರಿದಂತೆ ಅನೇಕರು ಇದ್ದರು.

ಬುದ್ಧನಗರದಲ್ಲಿ ಕಳಪೆ ರಸ್ತೆ ಕಾಮಗಾರಿ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಡಿ.5– ನಗರದ 10ನೇ ವಾರ್ಡ್ ಬುದ್ಧನಗರದಲ್ಲಿ ನಗರಸಭೆ ವತಿಯಿಂದ ಮಾಡಿರುವ ರಸ್ತೆ ಕಾಮಗಾರಿ ಕಳಪೆಯಿಂದ ಕೂಡಿದೆ ಎಂದು ಆರೋಪಿಸಿ ನಿವಾಸಿಗಳು ವಾರ್ಡ್‌ನ ಮುಖಂಡ ಭಾನುಪ್ರಕಾಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ನಗರಸಭೆ ಪೌರಾಯುಕ್ತ, ಗುತ್ತಿಗೆ ದಾರರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ವಾರ್ಡಿನ ಮುಖಂಡ ಭಾನುಪ್ರಕಾಶ್ ಮಾತನಾಡಿ, ನಗರದ 10ನೇ ವಾರ್ಡ್ ಬುದ್ಧನಗರದಲ್ಲಿ ನಗರಸಭೆಯ ನಗರೋತ್ಥಾನ ಯೋಜನೆಯಡಿ 1 ಕೋಟಿ ರೂ. ವೆಚ್ಚದಲ್ಲಿ ಮಾಡಿರುವ ಡಾಂಬರ್ ರಸ್ತೆ ಕಳಪೆಯಿಂದ ಕೂಡಿದ್ದು, ರಸ್ತೆ ಮಾಡಿದ ನಾಲ್ಕು ದಿನದಲ್ಲೇ ಜೆಲ್ಲಿಕಲ್ಲು ಮೇಲೆದ್ದು ಹರಡಿಕೊಂಡಿದ್ದು ವಾಹನ ಸವಾರರು ಜಾರಿ ಬಿದ್ದು ಸಣ್ಣಪುಟ್ಟ ಗಾಯವಾಗಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಈ ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರ ಸೆಲ್ವ ಕುಮಾರ್ ಅವರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ಕಳಪೆ ನಡೆದರು ಕೂಡ ಮೌನವಾಗಿರುವ ನಗರಸಭಾ ಪೌರಾಯುಕ್ತರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಉರುಕಾತಮ್ಮನವರ ವಿಜೃಂಭಣೆ ವಾರ್ಷಿಕೋತ್ಸವ



ಚಾಮರಾಜನಗರ: ತಾಲೂಕಿನ ಗೂಳೀಪುರ ಗ್ರಾಮದಲ್ಲಿ ಸಂಭ್ರಮ, ಸಡಗರದಿಂದ ಜಗನ್ಮಾತೆ ಉರುಕಾತಮ್ಮನವರ ದೇವಸ್ಥಾನ ಮೂರನೇ ವರ್ಷದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಉರುಕಾತಮ್ಮ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಹೋಮ ಹವನ ನೆರವೇರಿಸಿ, ವಿಶೇಷ ಪೂಜೆ ಸಲ್ಲಿಸಿ, ಮಧ್ಯಾಹ್ನ ಮಹಾಮಂಗಳಾರತಿ ಮಾಡಲಾಯಿತು. ಗ್ರಾಮದ ಎಲ್ಲಾ ಭಕ್ತರು ಭಾಗವಹಿಸಿ ತಾಯಿ ಉರುಕಾತೇಶ್ವರಿ ಅಮ್ಮನವರ ಕೃಪೆಗೆ ಪಾತ್ರರಾದರು.

ಅನ್ನಸಂತರ್ಪಣೆ : ಪೂಜಾ ಕಾರ್ಯಕ್ರಮದ ನಂತರ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ತಮ್ಮಡಿ ನಾಗರಾಜು, ಪುಟ್ಟಸ್ವಾಮಿ, ಯಜಮಾನ್ರು ದೊರೆಸ್ವಾಮಿ ನಾಯಕ, ಅಂಗಡಿ ಮಹದೇವನಾಯಕ, ರಂಗಸ್ವಾಮಿ,ನಾಗೇಶ್ ಮುಖಂಡರಾದ ರವೀಶ್, ಹೋಟೆಲ್ ನಾಗಣ್ಣ, ಬಿಳಿಗಿರಿರಂಗನಾಯಕ, ರಾಚನಾಯಕ, ಮಾದೇಶ್ ಕುಮಾರ್, ಗುರುಲಿಂಗ, ಗ್ರಾಮಸ್ಥರು ಹಾಗೂ ಭಕ್ತರು ಭಾಗವಹಿಸಿದ್ದರು.

'ಮ್ಯಾಕ್ಸ್' ಒಂದೇ ರಾತ್ರಿಯ ಕಥೆ

ಕಿಚ್ಚ ಸುದೀಪ್ ಅಭಿನಯದ ಬಹುನಿರೀಕ್ಷಿತ ಚಿತ್ರ ಮ್ಯಾಕ್ಸ್ ಡಿ.25ರಂದು ಬಿಡುಗಡೆಯಾಗಲಿದೆ. ಸಿನಿಮಾ ಪ್ರಾರಂಭವಾಗಿ ಎರಡು ವರ್ಷಗಳಾಗಿದ್ದರೂ, ಚಿತ್ರದ ಬಗ್ಗೆ ಸುದೀಪ್ ಹೆಚ್ಚು ಮಾತನಾಡಿರಲಿಲ್ಲ. ಮೊದಲ ಬಾರಿಗೆ ಚಿತ್ರದ ಕುರಿತಂತೆ ಒಂದಿಷ್ಟು ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಇದು ಒಂದು ರಾತ್ರಿಯ ಕಥೆ. ಇಲ್ಲಿ ಚಿತ್ರಕಥೆಯೇ ಹೀರೋ. ನಿರ್ದೇಶಕ ವಿಜಯ್ ಕಾರ್ತಿಕೇಯನ್ ಮನೆಗೆ ಬಂದು ಈ ಕಥೆ ಹೇಳಿದರು. ಹುಡುಗಿ ನೋಡಿದೆ. ಇಷ್ಟ ಆಗಿದ್ದರಿಂದಲೇ ತಾಳಿ ಕಟ್ಟುವುದಕ್ಕೆ ಒಪ್ಪಿಕೊಂಡೆ. ಇಲ್ಲಿ ಪ್ರಮುಖವಾಗಿರುವುದು ಒಂದೇ ವಿಷಯ. ಮೂಡ್ ಹೇಗಿದೆ ಎಂಬುದರ ಮೇಲೆ ಎಲ್ಲವೂ ನಿಂತಿರುತ್ತದೆ. ಮೂಡ್ ಚೆನ್ನಾಗಿದ್ದರೆ ಕಥೆ ಕೇಳುತ್ತೇನೆ. ಇಲ್ಲವಾದರೆ ಇಲ್ಲ. ಅವರು ಕಥೆ ಹೇಳಿದಾಗ ನನ್ನ ಮೂಡ್ ಚೆನ್ನಾಗಿತ್ತು. ಕಥೆ ಬಹಳ ಪ್ರಾಮಾಣಿಕವಾಗಿತ್ತು. ನನ್ನ ಮೆಚ್ಚಿಸೋಕೆ ಅವರು ಏನೂ ಮಾಡಿರಲಿಲ್ಲ. ಆದರೆ, ಸ್ವಲ್ಪ ತಮಿಳಿನ ಫ್ಲೇವರ್ ಇತ್ತು. ಸಾಕಷ್ಟು ಚರ್ಚೆ ಮಾಡಿದ ಬಳಿಕ ಒಂದೊಳ್ಳೆ ಚಿತ್ರಕಥೆ ಸಿದ್ಧವಾಯ್ತು' ಎಂದರು.

ಚಿತ್ರದಲ್ಲಿ ರಕ್ತಪಾತ ಸ್ವಲ್ಪ ಹೆಚ್ಚೇ ಇರುವಹಾಗಿದೆ ಎಂಬ ಮಾತನ್ನು ಒಪ್ಪದ ಅವರು, ನಾನು ಸ್ವಾತಿಮುತ್ತು, ಮೈ ಆಟೋಗ್ರಾಫ್, ಮುಸ್ಸಂಜೆ ಮಾತು ಇಂಥ ಚಿತ್ರಗಳ ಮೂಲಕ ಮೆಸೇಜ್ ಕೊಟ್ಟೆ. ಆದರೆ, ಜನ ಮನೆಗೆ ಕಳಿಸಿದರು. ಆಗಿನ ಕಾಲಕ್ಕೆ ಕತ್ತಿ ಹಿಡಿದವರು ನಂಬರ್ ಒನ್ ಆದರು. ಮುಂದೇನು ಎಂದು ಅಪ್ಪ-ಅಮ್ಮನನ್ನು ಕೇಳಿದಾಗ, ಮನೆಯಲ್ಲಿ ಹಾಕುವ ಬಟ್ಟೆ ಮನೆಯಲ್ಲಿರಲಿ, ಹೊರಗೆ ಹಾಕುವ ಬಟ್ಟೆ ಹೊರಗೆ ಇರಲಿ ಎಂದು ಹೇಳಿದರು. ಹೊರಗೆ ನಿನ್ನಿಂದ ಜನ ಏನು ನಿರೀಕ್ಷಿಸುತ್ತಾರೋ ಹಾಗಿರು ಎಂದರು. ಅದರಂತೆ ಚಿತ್ರಗಳನ್ನು ಮಾಡುತ್ತಿದ್ದೇನೆ. ಇಲ್ಲಿ ರಕ್ತವಿದೆ ಎಂಬ ಕಾರಣಕ್ಕೆ ಸಿನಿಮಾ ಪೂರ್ತಿ ಅದೇ ಇದೆ ಎಂದುಕೊಳ್ಳಬೇಡಿ. ಅದೊಂದು ಭಾಗವಷ್ಟೇ. ಇವತ್ತು ಜನ ವಿದ್ಯಾವಂತರಾಗಿದ್ದಾರೆ. ತಮಗೆ ಏನು ಬೇಕು ಎಂದು ಅವರಿಗೆ ಗೊತ್ತಿದೆ. ಅದಕ್ಕೆ ಪೂರಕವಾಗಿ ಚಿತ್ರ ಕೊಡುವ ಪ್ರಯತ್ನ ಮಾಡಿದ್ದೇವೆ ಎಂದರು. ಒಮ್ಮೊಮ್ಮೆ ಯಾವ ರೀತಿಯ ಸಿನಿಮಾ ಮಾಡಬೇಕು, ಮಾಡಬಾರದು ಎಂಬ ಗೊಂದಲ ನನಗೂ ಆಗುತ್ತದೆ. ಮನರಂಜನೆ ಅನ್ನೋದು ದೇವಸ್ಥಾನದಲ್ಲಿ ಪೂಜೆ ಮಾಡಿದಂತೆ. ದೇವರಿಗೆ ನಾವು ಪೂಜೆ ಮಾಡೋಕಷ್ಟೇ ಸಾಧ್ಯ. ಇಷ್ಟವಾದರೆ ವರ ಕೊಡುತ್ತಾನೆ, ಇಲ್ಲವಾದರೆ ಇಲ್ಲ ಎಂದು ಚಿತ್ರದ ಸೋಲು, ಗೆಲುವಿನ ಬಗ್ಗೆ ವಿವರಿಸಿದರು.

ತಮಿಳಿನ ಕಲೈಪುಲಿ ಎಸ್.ಧಾನು ನಿರ್ಮಿಸಿರುವ ಮ್ಯಾಕ್ಸ್ ಚಿತ್ರಕ್ಕೆ ವಿಜಯ್ ಕಾರ್ತಿಕೇಯನ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಕಿಚ್ಚ ಸುದೀಪ್, ವರಲಕ್ಷ್ಮೀ ಶರತ್‌ಕುಮಾರ್, ಸಂಯುಕ್ತ ಹೊರನಾಡು, ಪ್ರಮೋದ್ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿದ್ದಾರೆ.





ಉಪೇಂದ್ರ-ರಮ್ಯಾರ ಹಳೇ ಚಿತ್ರಕ್ಕೆ ಹೊಸ ಹೆಸರು ರಕ್ತ ಕಾಶ್ಮೀರ



2007ರಲ್ಲಿ ಎಸ್.ವಿ.ರಾಜೇಂದ್ರಸಿಂಗ್ ಬಾಬು ನಿರ್ದೇಶನದಲ್ಲಿ, ನಟ ಉಪೇಂದ್ರ ಮತ್ತು ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ ಅಭಿನಯದಲ್ಲಿ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಎಂಬ ಚಿತ್ರವೊಂದು ತಯಾರಾಗಿತ್ತು. ಚಿತ್ರದ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದರೂ, ಕಾರಣಾಂತರಗಳಿಂದ ಆ ಚಿತ್ರ ರಿಲೀಸಾಗಿರಲಿಲ್ಲ. ಈಗ ಅದೇ ಸಿನಿಮಾ 17ವರ್ಷಗಳ ನಂತರ ಹೊಸ ಹೆಸರಿನೊಂದಿಗೆ, ಒಂದಿಷ್ಟು ಬದಲಾವಣೆಗಳೊಂದಿಗೆ ಬಿಡುಗಡೆಯಾಗುತ್ತಿದೆ. ಆ ಚಿತ್ರದ ಹೆಸರು ರಕ್ತ ಕಾಶ್ಮೀರ.

ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಇದೇ ಚಿತ್ರದ ಪ್ರಮುಖ ಅಂಶ. ಗಡಿಪ್ರದೇಶ ಅಷ್ಟೇ ಅಲ್ಲ, ಬೆಂಗಳೂರಿನಲ್ಲೂ ಉಗ್ರಗಾಮಿಗಳ ಕಾಟವಿದೆ. ಅದರ ನಿರ್ಮೂಲನೆಗೆ ಸಂಬಂಧಿಸಿದ ಕಥಾವಸ್ತುವನ್ನು ಈ ಚಿತ್ರ ಒಳಗೊಂಡಿದೆ.

ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರೇ ರಕ್ತ ಕಾಶ್ಮೀರ ಚಿತ್ರಕ್ಕೆ ಕಥೆ, ಚಿತ್ರ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಎಂ.ಎಸ್. ರಮೇಶ್ ಅವರ ಸಂಭಾಷಣೆ ಮತ್ತು ಗುರುಕಿರಣ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರದಲ್ಲಿ ಉಪೇಂದ್ರ, ರಮ್ಯ, ಪಾರ್ವತಿ ಮಿಲ್ಟನ್, ದೊಡ್ಡಣ್ಣ, ಓಂಪ್ರಕಾಶ್‌ರಾವ್ ಮುಂತಾದವರು ನಟಿಸಿದ್ದಾರೆ. ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್ ಚಿತ್ರಕ್ಕಾಗಿ ವಿಶೇಷ ಹಾಡೊಂದನ್ನು ಚಿತ್ರೀಕರಿಸಲಾಗಿದ್ದು, ಈ ಹಾಡಿನಲ್ಲಿ ಡಾ.ವಿಷ್ಣುವರ್ಧನ್, ಅಂಬರೀಶ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ರಮೇಶ್ ಅರವಿಂದ್, ದರ್ಶನ್, ಆದಿತ್ಯ ಮುಂತಾದವರು ಹೆಜ್ಜೆ ಹಾಕಿರುವುದು ವಿಶೇಷ.

ಧಿಕ್ಕಾರಕ್ಕಿಂತ ಅಧಿಕಾರ ಮುಖ್ಯ ಎಂದ ರಿಯಲ್ ಸ್ಟಾರ್...!

ಜಿ.ಮನೋಹರನ್, ಕೆ.ಪಿ.ಶ್ರೀಕಾಂತ್ ನಿರ್ಮಿಸಿರುವ, ಉಪೇಂದ್ರ ನಿರ್ದೇಶಿಸಿ, ನಟಿಸಿರುವ ಬಹುನಿರೀಕ್ಷಿತ "ಯುಐ" ಚಿತ್ರದ ವಾರ್ನರ್ ಇದೀಗ ಬಿಡುಗಡೆಯಾಗಿದೆ. ಇದರಲ್ಲಿ ಉಪ್ಪಿ 2040ರ ಕಾಲಘಟ್ಟವನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಇದೇ ತಿಂಗಳ 20ರಂದು ಯುಐ ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ.

ಕಿತ್ತು ತಿನ್ನುವ ಬಡತನ, ಅನ್ನ, ನೀರಿಗಾಗಿ ಜನ ಹಾಹಾಕಾರ ಮಾಡುತ್ತಿರುವ ಜಾಗಕ್ಕೆ ಐಷಾರಾಮಿ ಕಾರಿನಲ್ಲಿ ಆಗಮಿಸುವ ನಾಯಕ ಜನರ ಧಿಕ್ಕಾರಕ್ಕೆ ಸೆಡ್ಡು ಹೊಡೆದು "ಧಿಕ್ಕಾರಕ್ಕಿಂತ ಅಧಿಕಾರಕ್ಕೆ ಬೆಲೆ ಜಾಸ್ತಿ" ಎಂದು ಪವರ್‌ಫುಲ್ ಡೈಲಾಗ್ ಹೇಳುತ್ತಾನೆ. ಕೋವಿಡ್‌ನಿಂದ ಜಾಗತಿಕ ಹಣದುಬ್ಬರ ಸಮಸ್ಯೆ ಸೃಷ್ಟಿಸಿದರೆ, ಕೃತಕ ಬುದ್ಧಿಮತ್ತೆಯಿಂದ ನಿರುದ್ಯೋಗ ಸಮಸ್ಯೆ, ಯುದ್ಧದಿಂದ 2040ರಲ್ಲಿ ದೇಶ ಹೇಗಿರಬಹುದು ಎಂಬುದನ್ನು ಡೈರೆಕ್ಟರ್ ಉಪ್ಪಿ, ಈ ವಾರ್ನರ್‌ನಲ್ಲಿ ಕಟ್ಟಿಕೊಟ್ಟಿದ್ದಾರೆ. ಯುಐ ವಾರ್ನರ್ ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಮಲೆಯಾಳಂನಲ್ಲಿ ಬಿಡುಗಡೆಯಾಗಲಿದೆ. ಈ ಸಂದರ್ಭದಲ್ಲಿ ಮಾತನಾಡಿದ ಉಪೇಂದ್ರ, ಸಾಮಾನ್ಯವಾಗಿ ನಾನು, ನನ್ನ ಚಿತ್ರದ ಯಾವುದೇ ಕಂಟೆಂಟನ್ನು ಬಿಡುಗಡೆಪೂರ್ವದಲ್ಲಿ ಜನರಿಗೆ ತೋರಿಸುವುದಿಲ್ಲ. ಬಿಡುಗಡೆಯಾದ ನಂತರ ಜನ ಅದನ್ನು ನೋಡಲಿ ಎಂದು ಆಸೆಪಡುವವನು ನಾನು. ಆದರೆ ಈಗ ಕಾಲ ಸ್ವಲ್ಪ ಬದಲಾಗಿದೆ. ಜನರಿಗೆ ಚಿತ್ರದ ಬಗ್ಗೆ ಟೀಸರ್ ಹಾಗೂ ಟ್ರೇಲರ್ ಮೂಲಕ ತಲುಪಿಸುವ ಪ್ರಯತ್ನವಾಗುತ್ತಿದೆ. ಹಾಗಾಗಿ ನಾನು "ವಾರ್ನರ್" ರಿಲೀಸ್ ಮಾಡಿದ್ದೇನೆ. ಚಿತ್ರದ ಗೆಲುವಿನಲ್ಲಿ ಪ್ರೇಕ್ಷಕರ ನಿರ್ಧಾರವೇ ಅಂತಿಮ. 25 ವರ್ಷಗಳ ಹಿಂದೆ ನಾನು ನಿರ್ದೇಶಿಸಿದ ಎ ಚಿತ್ರ ನೋಡಿ ಇಡೀ ಗಾಂಧಿನಗರ ನಕ್ಕಿತ್ತು, ಯಾರೊಬ್ಬರಿಗೂ ಸಿನಿಮಾ ಇಷ್ಟವಾಗಿರಲಿಲ್ಲ. ಆದರೆ ಜನರಿಗೆ ಚಿತ್ರ ಇಷ್ಟವಾಯಿತು. ನಾನು ಜನರಿಗೆ ಕನ್‌ಫ್ಯೂಸ್ ಮಾಡಲ್ಲ. ಕನ್‌ವಿನ್ಸ್ ಮಾಡುತ್ತೇನೆ ಎಂದರು.


ಶಿವಾಜಿ ಪಾತ್ರದಲ್ಲಿ ರಿಷಭ್ ಶೆಟ್ಟಿ; ಪರ-ವಿರೋಧ ಚರ್ಚೆ

ಕಾಂತಾರ ಚಿತ್ರದ ಅಭೂತಪೂರ್ವ ಯಶಸ್ಸಿನ ನಂತರ ನಟ, ನಿರ್ದೇಶಕ ರಿಷಭ್ ಶೆಟ್ಟಿ ಅವರಿಗೆ ಹಲವಾರು ಭಾಷೆಗಳಿಂದ ಸಾಕಷ್ಟು ಆಫರ್‌ಗಳು ಬರುತ್ತಿವೆ. ಕೆಲ ದಿನಗಳ ಹಿಂದೆ ರಿಷಭ್ ತೆಲುಗಿನ ಜೈಹನುಮಾನ್ ಚಿತ್ರದಲ್ಲಿ ಆಂಜನೇಯನ ಪಾತ್ರ ಮಾಡುತ್ತಿರುವುದು ದೊಡ್ಡ ಸುದ್ದಿಯಾಗಿತ್ತು, ಇದೀಗ ಛತ್ರಪತಿ ಶಿವಾಜಿಯಾಗಿ ಮತ್ತೊಂದು ಮರಾಠಿ ಚಿತ್ರದಲ್ಲಿ ನಟಿಸುತ್ತಿರುವುದು ಇತ್ತೀಚಿನ ವರದಿ. 'ದಿ ಪ್ರೈಡ್ ಆಫ್ ಭಾರತ್-ಛತ್ರಪತಿ ಶಿವಾಜಿ ಮಹಾರಾಜ್' ಎಂಬ ಈ ಮರಾಠಿ ಚಿತ್ರವನ್ನು ಸಂದೀಪ್‌ಸಿಂಗ್ ಅವರು ನಿರ್ದೇಶಿಸುತ್ತಿದ್ದಾರೆ. ಈ ಮೊದಲು ಅಲಿಘರ್, ಪಿಎಂ ನರೇಂದ್ರ ಮೋದಿ, ಝುಂಡ್, ಮೇ ಅಟಲ್ ಹೂಂ ಮತ್ತು ಸ್ವಾತಂತ್ರ್ಯವೀರ್ ಸಾವರ್‌ಕರ್ ಚಿತ್ರಗಳನ್ನು ಅವರು ನಿರ್ಮಿಸಿದ್ದರು. ಕಳೆದ ವರ್ಷ ಬಿಡುಗಡೆಯಾದ ಸಫೇದ್ ಎಂಬ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದರು. ಈಗವರು ರಿಷಭ್ ಶೆಟ್ಟಿ ಇಟ್ಟುಕೊಂಡು ಶಿವಾಜಿ ಮಹಾರಾಜರ ಕಥೆಯನ್ನು ಹೇಳಲು ಹೊರಟಿದ್ದಾರೆ. ಇದೀಗ ರಿಷಭ್ ಶೆಟ್ಟಿ, ಶಿವಾಜಿ ಮಹಾರಾಜ್ ಪಾತ್ರ ಮಾಡುತ್ತಿರುವ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಪರ ವಿರೋಧ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಕೆಲವರು ಅವರ ಪರವಾಗಿ ನಿಂತರೆ, ಇನ್ನೂ ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ.

ಪ್ರಮುಖವಾಗಿ, ಕರ್ನಾಟಕದಲ್ಲಿ ಕದಂಬರು, ಚಾಲುಕ್ಯರು, ಹೊಯ್ಸಳರು, ನಾಯಕರು, ವಿಜಯನಗರ ಹಾಗೂ ಮೈಸೂರು ಅರಸರು ದೊಡ್ಡ ಹೆಸರು ಮಾಡಿರುವಾಗ, ರಿಷಭ್ ಮರಾಠಿ ರಾಜರೊಬ್ಬರ ಪಾತ್ರ ಮಾಡುತ್ತಿರುವ ಬಗ್ಗೆ ಹಲವು ಟೀಕೆಗಳು ವ್ಯಕ್ತವಾಗುತ್ತಿವೆ. ಇನ್ನು ಕೆಲವರು, ಇದರಲ್ಲಿ ತಪ್ಪೇನಿದೆ, ಒಬ್ಬ ನಟನಾಗಿ ಅವರು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇದರ ಜೊತೆಗೆ, ರಿಷಭ್ ಕನ್ನಡಕ್ಕಿಂತ ಹೆಚ್ಚು ಪರಭಾಷಾ ಚಿತ್ರಗಳಲ್ಲೇ ನಟಿಸುತ್ತಿರುವ ಬಗ್ಗೆಯೂ ಸೋಷಿಯಲ್ ಮೀಡಿಯಾದಲ್ಲಿ ಅಸಮಾಧಾನ ವ್ಯಕ್ತವಾಗಿದೆ.

ರಿಷಭ್‌ಶೆಟ್ಟಿ, ಕಳೆದ ವರ್ಷದ ಚಿತ್ರೋತ್ಸವದಲ್ಲಿ ಭಾಗವಹಿಸಿ ಮಾತನಾಡುವ ಸಂದರ್ಭದಲ್ಲಿ ತನಗೆ ಪರಭಾಷೆಯ ಚಿತ್ರಗಳಲ್ಲಿ ಹಲವು ಅವಕಾಶಗಳು ಬರುತ್ತಿದ್ದರೂ, ಕನ್ನಡದಲ್ಲೇ ಹೆಚ್ಚು ಚಿತ್ರಗಳನ್ನು ಮಾಡುವುದಾಗಿ ಹೇಳಿದ್ದರು. ಆದರೆ, ಇದೀಗ ಪರಭಾಷೆ ಚಿತ್ರಗಳಲ್ಲೇ ಹೆಚ್ಚು ನಟಿಸುತ್ತಿದ್ದು, ತಮ್ಮ ಮಾತು ತಪ್ಪುತ್ತಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಅಂದಹಾಗೆ, ರಿಷಭ್‌ಶೆಟ್ಟಿ ಅಭಿನಯದ ಮೂರು ಚಿತ್ರಗಳು ಮುಂದಿನ ಮೂರು ವರ್ಷದಲ್ಲಿ ಬಿಡುಗಡೆಯಾಗಲಿವೆ. ಈ ಪೈಕಿ ಕಾಂತಾರ ಚಾಪ್ಟರ್ ಒಂದು. 2025ರ ಅ.2ರಂದು ಬಿಡುಗಡೆಯಾದರೆ, ತೆಲುಗಿನ ಜೈಹನುಮಾನ್ 2026ರಲ್ಲಿ ಬಿಡುಗಡೆ ಯಾಗಲಿದೆ. 2027ರ ಜ.27ಕ್ಕೆ ದಿ ಪ್ರೈಡ್ ಆಫ್ ಭಾರತ್-ಛತ್ರಪತಿ ಶಿವಾಜಿ ಮಹಾರಾಜ್ ತೆರೆಕಾಣಲಿದೆ.



ಸಿನಿಪದಬಂಧ-554



ಉಮ್ಮತ್ತೂರು ಇಂದುಶೇಖರ್
ಮೊ.9880820462

1		2		■	■	■	3	■	■	■
	■		■	4					■	5
	■	■	■		■	■		■	■	
6		7			■	8			9	
	■		■		■	■	■	■		■
■	■	■	10			11		■	■	■
■	12	■	■	■	■		■	13	■	14
15			16		■	17				
	■	■		■	■		■	■	■	
	■	18					■	19	■	
■	■	■		■	■	■	20			

ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1.ಮೌನ ಸಂಗ್ರಾಮ ಸಾರಿದ ನಟ 4
4.ದುನಿಯಾವಿಜಯ್ ಅಭಿನಯದಲ್ಲಿ ಕಾಣಿಸಿಕೊಂಡ ಕಪ್ಪನೆಯ ಪ್ರಾಣಿ 5
6.ಕೋಮಲ್‌ಕುಮಾರ್-ಪೂರ್ಣ ಅಭಿನಯದ ಚಿತ್ರ 5
8.ಜಯಪ್ರದ ಅಭಿನಯದ ಚಿತ್ರ ಭಯ ಹುಟ್ಟಿಸಿದೆ 5
10.ಸಮರ ಸಿಂಹ ಚಿತ್ರದ ನಾಯಕಿ 5
15.ಲಕ್ಷ್ಮೀ ಹಗೆ ತೀರಿಸಲು ದೊರೈ-ಭಗವಾನ್ ನಿರ್ದೇಶಕರು 5
17.ರಮೇಶ್-ಸುಧಾರಾಣಿ ಅಭಿನಯದ ಪ್ರೇಮ ಕಾವ್ಯ! 5
18.ವಿನೋದ್ ಆಳ್ವ ಪರಾಕ್ರಮ ತೋರಿದ್ದಾನೆ 5
20.ಮುರಳಿ-ಭವ್ಯ ಅಭಿನಯದ ಪ್ರೀತಿಯ ಹಬ್ಬ! 4

ಮೇಲಿನಿಂದ ಕೆಳಕ್ಕೆ

1.ವಿಷ್ಣು - ಭಾರತಿ ಅಭಿನಯದ ಗೌಪ್ಯತೆಯ ಇರುಳು 5
2.ಸಂಯುಕ್ತ ಚಿತ್ರದ ನಾಯಕಿ 2
3.ಪುನೀತ್ ರಾಜ್‌ಕುಮಾರ್ "ಭಗವಂತ" 4
4.ನಾವಾಡುವ ನುಡಿ ಇರಿಸಿಕೊಂಡಿರುವ ಪೋಷಕ ನಟ 5
5.ಡಾ. ನಂದಿನಿ ಪಾತ್ರವನ್ನು ನೆನಪಿಸುವ ಚಿತ್ರ 3
7.ಕುರುಬನ ರಾಣಿ ಚಿತ್ರದ ನಾಯಕಿ 2
9.ವಿಷ್ಣುವರ್ಧನ್ "ಒಡೆಯ" 2
11.ಕಲ್ಪನಾ ನಿರ್ಮಿಸಿದ ಬಾಣದ ಗೂಡು 5
12.ಬಿಡುಗಡೆಯಾದರೂ ಹಾಕಿಕೊಂಡ ಕೋಳ 2
13.ಬಜಾರ್‌ನಲ್ಲಿ ಕಾಣಿಸಿಕೊಂಡ ಪಾಂಡವ 2
14.ಪೃಥ್ವಿ ಶಾಮನೂರ್ ಡಿಗ್ರಿಗೂ ಮುಂಚೆ ಓದಿದ್ದು 5
15.ಈ ಪುಷ್ಪವು ಹಾಡಿನಲ್ಲಿ ಬಂತು 3
16.ತರುಣ್-ಪೂಜಾ ಗಾಂಧಿ ಅಭಿನಯದ ಚಿತ್ರ 4
19.ಓಂ ಚಿತ್ರದ ನಾಯಕಿ 2

ಸಿನಿ ಪದಬಂಧ 553ರ ಉತ್ತರ

ಕ	ಪ್ಪು	ಕೊ	ಳ	■	■	■	ಪ	■	■	■
ಳ್ಳ	■	ಳ್ಳಿ	■	ಕೋ	ದಂ	ಡ	ರಾ	ಮ	■	ಜಿ
ರ	■	■	■	ಕಿ	■	■	ಜಿ	■	■	ಲೇ
ಸಂ	ಶ	ಯ	ಫ	ಲ	■	ಶ್ವೇ	ತ	ಗು	ಲಾ	ಬಿ
ತೆ	■	ಕ್ಷ	■	ವಾ	■	■	■	■	ಲಿ	■
■	■	■	ವಾ	ಣಿ	ಜ	ಯ	ರಾಂ	■	■	■
■	ದೀ	■	■	■	■	ಮ	■	ನಾ	■	ರಂ
ರೂ	ಪಾ	ಯಿ	ರಾ	ಜ	■	ಕಿಂ	ದ	ರಿ	ಜೋ	ಗಿ
ಪಿ	■	■	ಜ	■	■	ಕ	■	■	■	ತ
ಣಿ	■	ವೀ	ರಾ	ಧಿ	ವೀ	ರ	■	ದ್ರೋ	■	ರಂ
■	■	■	ಣಿ	■	■	■	ರ	ಣ	ರಂ	ಗ

ವಿಜೇತರು: ಕೆ.ಎಸ್.ದೀಪಿಕಾ, ತಿಮ್ಮರಾಜಪುರ, ಹೊಸಸ್ಯೆಟ್, ಕೊಳ್ಳೇಗಾಲ ತಾಲೂಕು, ಚಾಮರಾಜನಗರ ಜಿಲ್ಲೆ.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಐದನೇ ಪುಟದಿಂದ

ಪುನರ್ ನಿರ್ಮಾಣ

ವಿಭಿನ್ನವಾದ ವರದಿ ನೀಡಿದ್ದು, ಒಂದು ಸಮಿತಿಯು ಕಟ್ಟಡಗಳನ್ನು ಯಥಾಸ್ಥಿತಿ ದುರಸ್ಥಿಗೊಳಿಸಿ ಪುನರುಜ್ಜೀವನ ಮಾಡ ಬಹುದು ಎಂದು ಅಭಿಪ್ರಾಯಪಟ್ಟರೆ, ಮತ್ತೊಂದು ಸಮಿತಿಯು ತಜ್ಞರು ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡಿ ರುವುದರಿಂದ ಸಂಭವಿಸಬಹುದಾದ ಅಪಾಯ ತಪ್ಪಿಸಲು ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ನೆಲಸಮಗೊಳಿಸಿ ಪಾರಂಪರಿಕ ಶೈಲಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುವುದು ಸೂಕ್ತ ಎಂದು ಶಿಫಾರಸು ಮಾಡಿದೆ. ಈ ಕುರಿತಂತೆ ಮುಖ್ಯಮಂತ್ರಿಗಳು ಹಾಗೂ ಸಂಪುಟದಲ್ಲಿ ಸುದೀರ್ಘ ಚರ್ಚೆ ನಡೆಸಿದ ಬಳಿಕ ನಿರ್ಧಾರಕ್ಕೆ ಬಂದು ಅದಕ್ಕೆ ಬೇಕಾದ ಅನುದಾನವನ್ನೂ ಪೂರೈಸುವುದಾಗಿ ತಿಳಿಸಿದರು.

ನೀರಿನ ಹಣ 1.25 ಕೋಟಿ ಗುಳುಂ

51ನೇ ವಾರ್ಡಿನ ಎನ್.ಪ್ರವೀಣ, 10 ಮತ್ತು 11ನೇ ವಾರ್ಡಿನ ಲಿಂಗರಾಜು, ವಾಟರ್ ಇನ್ಸ್‌ಪೆಕ್ಟರ್‌ಗಳಾದ ಹೂಟ ಗಳ್ಳಿಯ ವ್ಯಾಪ್ತಿಯ ಎನ್.ಮೋಹನ್, ವಿಜಯನಗರದ ಕೆ.ಮಹೇಶ್, 8, 17 ಮತ್ತು 25ನೇ ವಾರ್ಡಿನ ಚನ್ನೇಗೌಡ, ವಾಟರ್ ಬಿಲ್ಲಿಂಗ್ ಸಾಫ್ಟ್‌ವೇರ್ ನಿರ್ವಹಣೆ ಮಾಡುತ್ತಿರುವ ಸೆಮಿನಲ್ ಸಂಸ್ಥೆಯ ಬ್ಯಾಕೆಂಡ್ ತಾಂತ್ರಿಕ ಸಿಬ್ಬಂದಿ ಮಲ್ಲಿಕಾರ್ಜುನ್ ಅವರು ನೀರಿನ ಗ್ರಾಹಕರಿಂದ ಸಂಗ್ರಹಿಸಿದ 1.25 ಕೋಟಿ ಹಣವನ್ನು ಮೈಸೂರು ಮಹಾನಗರಪಾಲಿಕೆ ಕಚೇರಿಗೆ ಜಮಾ ಮಾಡದೆ ನಕಲಿ ಬಿಲ್ ತಯಾರಿಸಿ ಪಾಲಿಕೆಗೆ ವಂಚಿಸಿದ್ದಾರೆ.

ಗ್ರಾಹಕರಿಗೆ ಬೆದರಿಕೆ: ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿರುವ ಗ್ರಾಹಕರ ಮನೆಗಳಿಗೆ ತೆರಳಿದ ನಾಲ್ವರು ವಾಟರ್ ಇನ್ಸ್‌ಪೆಕ್ಟರ್ಸ್ (ಜಲ ನಿರೀಕ್ಷಕರು) ಮತ್ತು 18 ಮಂದಿ ಮೀಟರ್ ರೀಡರ್‌ಗಳು ಬಿಲ್ ಪಾವತಿಸದಿದ್ದಲ್ಲಿ ನಿಮ್ಮ ನೀರಿನ ಸಂಪರ್ಕ ಕಡಿತಗೊಳಿಸುತ್ತೇವೆಂದು ಬೆದರಿಸಿ, ಧಮಕಿ ಹಾಕಿ ಸ್ಥಳದಲ್ಲೇ ಅವರಿಂದ ನಗದು ರೂಪದಲ್ಲಿ ಹಣ ವಸೂಲಿ ಮಾಡಿದ್ದರು. ಈ ಹಣವನ್ನು ಕಚೇರಿಯ ನೀರಿನ ಬಳಕೆದಾರರ ಖಾತೆಗೆ ಜಮಾ ಮಾಡದೆ, ದುರ್ಬಳಕೆ ಮಾಡಿ ಕೊಂಡು ನಂತರ ತಿಂಗಳ ಅಂತ್ಯದಲ್ಲಿ ಸದರಿ ಬಳಕೆದಾರರ ಪಟ್ಟಿಯನ್ನು ವಾಟರ್ ಬಿಲ್ಲಿಂಗ್ ಸಾಫ್ಟ್‌ವೇರ್‌ನ ನಿರ್ವಹಣಾ ಸಂಸ್ಥೆಯಾದ ಸೆಮಿನಲ್ ಸಿಬ್ಬಂದಿ ಮಲ್ಲಿಕಾರ್ಜುನ್ ಅವರಿಗೆ ಮಾಹಿತಿ ನೀಡಿ, ಗ್ರಾಹಕರ ಖಾತೆಗೆ ಜಮಾ ಆಗಿದೆ ಎಂಬಂತೆ, ಅನಧಿಕೃತ ರಶೀದಿ ಸೃಷ್ಟಿಸಿ ಅದರ ಸಂಖ್ಯೆಯನ್ನು ನಮೂದು ಮಾಡುತ್ತಿದ್ದರು. ಇದರಿಂದ, ಮುಂದಿನ ನೀರಿನ ಬಿಲ್ಲಿನಲ್ಲಿ ಸದರಿ ಮೊತ್ತವು ಕಡಿಮೆಯಾಗಿ ಹೊಸ ಬಿಲ್ ವಿತರಣೆಯಾಗುತ್ತಿದುದು ಪ್ರಗತಿ ಪರಿಶೀಲನೆ ವೇಳೆ ಕಂಡುಬಂದಿದೆ.

ಈ ರೀತಿ ಅನಧಿಕೃತವಾಗಿ ರಶೀದಿ ಸೃಷ್ಟಿಸಿದ ವಾಟರ್ ಇನ್ಸ್‌ಪೆಕ್ಟರ್‌ಗಳು, ಮೀಟರ್ ರೀಡರ್‌ಗಳು ಸುಮಾರು ಒಂದೂವರೆ ವರ್ಷದಿಂದ ಹೀಗೆ ಮಾಡುತ್ತಿದ್ದರು. 2023ರ ಏಪ್ರಿಲ್ ಮಾಹೆಯಿಂದ 2024ರ ಡಿಸೆಂಬರ್ 5ರವರೆಗೆ ಒಟ್ಟು 490 ಮಂದಿ ನೀರಿನ ಗ್ರಾಹಕರಿಂದ ಒಟ್ಟು 1.25 ಕೋಟಿ ರೂ.ಗಳನ್ನು ವಸೂಲಿ ಮಾಡಿ ಪಾಲಿಕೆಗೆ ಹಾಗೂ ವಾಣಿವಿಲಾಸ ವಾಟರ್ ವರ್ಕ್ಸ್‌ಗೆ ವಂಚನೆ ಮಾಡುತ್ತಿದ್ದರು ಎಂಬುದು ಪರಿಶೀಲನೆ ವೇಳೆ ಕಂಡುಬಂದ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರು ಈ ಸಂಬಂಧ ತನಿಖೆ ನಡೆಸಿ ಶಿಫಾರಸಿನೊಂದಿಗೆ ವರದಿ ನೀಡುವಂತೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು ಅವರಿಗೆ ನಿರ್ದೇಶನ ನೀಡಿದ್ದರು.

ತನಿಖಾ ಸಮಿತಿಯ ನೇತೃತ್ವ ವಹಿಸಿದ್ದ ಸಿಂಧು ಅವರು ಈ ಸಂಬಂಧ ತನಿಖೆ ಕೈಗೊಂಡಾಗ ಹಣ ಗುಳುಂ ಮಾಡಿದ್ದ ಮೀಟರ್ ರೀಡರ್‌ಗಳು ಹಾಗೂ ವಾಟರ್ ಇನ್ಸ್‌ಪೆಕ್ಟರ್‌ಗಳು ತಮ್ಮ ತಪ್ಪನ್ನು ಒಪ್ಪಿಕೊಂಡು ಪಾಲಿಕೆಗೆ ಲಿಖಿತ ರೂಪದಲ್ಲಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಅಲ್ಲದೆ, ಪಾಲಿಕೆಗೆ ಈವರೆಗೆ ಒಟ್ಟು 99,34,425 ರೂ.ಗಳನ್ನು ಮರು ಪಾವತಿಸಿದ್ದು, ಆ ಹಣವನ್ನು ಪಾಲಿಕೆ ಖಾತೆಗೆ ಜಮಾ ಮಾಡಲಾಗಿದೆ. ಈ ಕೃತ್ಯದಲ್ಲಿ ವಾಟರ್ ಬಿಲ್ಲಿಂಗ್ ಸಾಫ್ಟ್‌ವೇರ್ ನಿರ್ವಹಣೆ ಮಾಡುವ ಸೆಮಿನಲ್ ಸಂಸ್ಥೆಯ ಬ್ಯಾಕೆಂಡ್ ತಾಂತ್ರಿಕ ಸಿಬ್ಬಂದಿ ಮಲ್ಲಿಕಾರ್ಜುನ ಅವರ ಪಾತ್ರ ಪ್ರಮುಖವಾಗಿದ್ದು ಎಕ್ಸಿಕ್ಯುಟಿವ್ ಇಂಜಿನಿಯರ್ ಬಳಸುವ ಲಾಗಿನ್ ಅನ್ನು ಹ್ಯಾಕ್ ಮಾಡಿ ಪ್ರತಿದಿನ ಸಂಜೆ 6ರ ನಂತರ ಮಧ್ಯರಾತ್ರಿ ವರೆಗೂ ಸಾಫ್ಟ್‌ವೇರ್‌ನಲ್ಲಿ ನಕಲಿ ಬಿಲ್ ತಯಾರಿಸಿ ಕೊಡುವುದರಲ್ಲಿ ನಿರತರಾಗಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಈ ಸಿಬ್ಬಂದಿ ಪೈಕಿ 6 ಮಂದಿ ಸಮಾನ ಕೆಲಸಕ್ಕೆ ಸಮಾನ ವೇತನ ಸಿಬ್ಬಂದಿಗಳಾಗಿದ್ದು, 15 ಮಂದಿ ಹೊರಗುತ್ತಿಗೆ ನೌಕರರಾಗಿದ್ದಾರೆ. ಈಗಾಗಲೇ ತನಿಖೆ ಪೂರ್ಣಗೊಳಿಸಿರುವ ಸಿಂಧು ಅವರು ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಪೂರಕ ದಾಖಲಾತಿಗಳೊಂದಿಗೆ ಸಮಗ್ರ ವರದಿಯನ್ನು ಸಲ್ಲಿಸಿದ್ದಾರೆ. ಅಲ್ಲದೆ, ಸಾರ್ವಜನಿಕರಿಂದ ನಗದು ರೂಪದಲ್ಲಿ ವಸೂಲಿ ಮಾಡಿದ ನೀರಿನ ಬಾಕಿ ಬಿಲ್ ಹಣವನ್ನು ಪಾಲಿಕೆ ಖಾತೆಗೆ ಜಮಾ ಮಾಡದೆ ದುರುಪಯೋಗ ಮಾಡಿಕೊಂಡಿ ರುವ ಸಿಬ್ಬಂದಿಗಳ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಿ ಅವರನ್ನು ಕೆಲಸದಿಂದ ವಜಾ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ.

ಇಂದು ಕೆಲಸದಿಂದ ವಜಾ?: ವರದಿ ಆಯುಕ್ತರಿಗೆ ತಲುಪಿದ್ದು ನಾಳೆ(ಡಿ.6) ಅಥವಾ ಶನಿವಾರ ಸದರಿ ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಿ ಆದೇಶಿಸುವ ಸಾಧ್ಯತೆ ಇದೆ. ಹಾಗೆಯೇ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿ ಎಫ್ಐಆರ್ ದಾಖಲಿಸಲು ಸಿದ್ಧತೆ ಮಾಡಲಾಗುತ್ತಿದೆ. ಇತ್ತೀಚೆಗಷ್ಟೇ ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯತಿಯಲ್ಲೂ ಸಹ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಡೇಟಾ ಎಂಟ್ರಿ ಆಪರೇಟರ್ ಇದೇ ರೀತಿ ಸಾರ್ವಜನಿಕರು ಪಾವತಿಸಿದ ತೆರಿಗೆ ಹಣವನ್ನು ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗ ಮಾಡಿಕೊಂಡಿದ್ದರು. ಹಾಗೆಯೇ ಮೈಸೂರಿನ ಕೆಎಸ್‌ಆರ್‌ಪಿ ತುಕಡಿಯಲ್ಲಿಯೂ ಇಬ್ಬರು ಕಚೇರಿ ಸಿಬ್ಬಂದಿ ಪೊಲೀಸ್ ಸಿಬ್ಬಂದಿಗಳ ಇನ್‌ಸೆಂಟಿವ್ ಹಣವನ್ನು ಗುಳುಂ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಜ.25ಕ್ಕೆ ಮುಂದೂಡಿಕೆ

ಜೆ.ದೇವರಾಜು ಲೋಕಾಯುಕ್ತ ತನಿಖೆ ಸ್ಥಗಿತಗೊಳಿಸಬೇಕು ಮತ್ತು ಸಿಬಿಐನಿಂದ ತನಿಖೆ ನಡೆಸಬಾರದು ಎಂದು ಕೋರಿದ್ದ ಅರ್ಜಿಯನ್ನೂ ನ್ಯಾಯಾಲಯ 2025ರ ಜನವರಿ 25ಕ್ಕೆ ಮುಂದೂಡಿದೆ.

ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ವಾದ–ಪ್ರತಿವಾದ ಮಂಡಿಸಲು ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿಗಳಾದ ದುಷ್ಯಂತ್ ದವೆ, ಅಭಿಷೇಕ್ ಮನುಸಿಂಘ್ವಿ, ಕಪಿಲ್ ಸಿಬಲ್ ಹಾಗೂ ಮಣೀಂದರ್ ಸಿಂಗ್ ಸೇರಿದಂತೆ ಹಲವು ನ್ಯಾಯವಾದಿಗಳು ತಮ್ಮ ಕಕ್ಷಿದಾರರ ಪರ ವಾದ ಮಂಡಿಸಿದರು. ಇದಕ್ಕೂ ಮುನ್ನ ವಿವಾದಿತ ಭೂಮಿಯ ಮೂಲ ಮಾಲೀಕ ಜೆ.ದೇವರಾಜು, ನನ್ನನ್ನು ವಿನಾಕಾರಣ ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ, ನನಗೆ ಈಗ 80 ವರ್ಷ ವಯಸ್ಸಾಗಿದೆ. ನಾನೊಬ್ಬ ಬಡಪಾಯಿ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ ಹಾಗೂ ನನ್ನ ವಿರುದ್ಧ ಕ್ರಿಮಿನಲ್ ಆರೋಪಗಳೂ ಇಲ್ಲ ಎಂದು ವಾದ ಮಂಡಿಸಿದರು.

ಏಕಸದಸ್ಯ ನ್ಯಾಯಪೀಠ ತೀರ್ಪು ನೀಡುವ ಸಂದರ್ಭದಲ್ಲಿ ನನ್ನ ಹೆಸರನ್ನು ಉಲ್ಲೇಖಿಸಿದ್ದು, ಅಂತೆಯೇ ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಕೋರಿದ ಅರ್ಜಿ ಏಕಸದಸ್ಯ ಪೀಠದ ಮುಂದೆ ಡಿಸೆಂಬರ್ 10 ರಂದು ವಿಚಾರಣೆಗೆ ಬರಲಿದೆ. ಇದಕ್ಕೆ ತಡೆ ನೀಡಬೇಕು, ಇಲ್ಲವಾದಲ್ಲಿ, ಅನಗತ್ಯವಾಗಿ ನಾನು ತನಿಖೆಗೆ ಒಳಪಡಬೇಕಾಗುತ್ತದೆ ಎಂದು ಮನವಿ ಮಾಡಿಕೊಂಡರು.

ಸ್ನೇಹಮಯಿ ಕೃಷ್ಣ ಪರ ವಕೀಲ ಕೆ.ಜಿ. ರಾಘವನ್ ವಾದ ಮಂಡಿಸಿ, ಹೈಕೋರ್ಟ್ ಏಕಸದಸ್ಯ ಪೀಠ ನೋಟಿಸ್ ಜಾರಿಗೊಳಿಸಿದೆ. ಆ ವಿಚಾರಣೆಗೂ ಈ ಮೊಕದ್ದಮೆಗೂ ಸಂಬಂಧವಿಲ್ಲ ಎಂದರು.

ವಾದ–ಪ್ರತಿವಾದ ಆಲಿಸಿದ ವಿಭಾಗೀಯ ನ್ಯಾಯಪೀಠ, ಸದ್ಯ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡೋಣ, ಮುಂದೆ ನಿಮ್ಮ ಅಹವಾಲು ಪರಿಶೀಲಿಸೋಣ ಎಂದು ಹೇಳುವ ಮೂಲಕ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿತು.

ಸಿದ್ದರಾಮಯ್ಯ ಪರ ಅಭಿಷೇಕ್ ಮನುಸಿಂಘ್ವಿ, ಕಪಿಲ್ ಸಿಬಲ್ ವಾದ ಮಂಡಿಸಿ, ಏಕಸದಸ್ಯ ಪೀಠ ನೀಡಿರುವ ತೀರ್ಪನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಅವರ ಕುಟುಂಬ ಮುಡಾದಿಂದ 14 ನಿವೇಶನಗಳನ್ನು ಪಡೆದ ಸಂಬಂಧ ಬಂದ ದೂರು ಮತ್ತು ದಾಖಲೆ ಆಧರಿಸಿ ರಾಜ್ಯಪಾಲರು ಭ್ರಷ್ಟಾಚಾರ ನಿಗ್ರಹ ಕಾಯ್ದೆ 17ಎ ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರು.

ಇದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್ ಮೆಟ್ಟಿಲೇರಿದ್ದರು, ಅವರ ಅರ್ಜಿ ವಿಚಾರಣೆ ನಡೆಸಿದ ಏಕಸದಸ್ಯ ಪೀಠ, ರಾಜ್ಯಪಾಲರ ಆದೇಶ ರದ್ದುಗೊಳಿಸಲು ನಿರಾಕರಿಸಿ ತನಿಖೆಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಸಿದ್ದರಾಮಯ್ಯ ವಿಭಾಗೀಯ ಪೀಠದ ಮುಂದೆ ಅರ್ಜಿ ಸಲ್ಲಿಸಿದ್ದಾರೆ.


ಮಾರುಕಟ್ಟೆ ದರದನ್ವಯ ಪರಿಹಾರ ನೀಡಿ

ಹೇಳಿತು. ದೀರ್ಘ ಕಾಲದವರೆಗೆ ಭೂ ಮಾಲೀಕರಿಗೆ ಪರಿಹಾರ ನಿರಾಕರಿಸುವುದು ಸಂವಿಧಾನದ 300ಎ ಅನುಚ್ಛೇದದ (ಆಸ್ತಿಯ ಹಕ್ಕು) ಉಲ್ಲಂಘನೆಯಾಗಿದೆ ಎಂದಿತು. ಮೈಸೂರು ಜಿಲ್ಲೆಯಲ್ಲಿ ಸರ್ಕಾರ ಸ್ವಾಧೀನಪಡಿಸಿಕೊಂಡ ಜಮೀನಿನ ಪರಿಹಾರಕ್ಕಾಗಿ ಕಾಯುತ್ತಿದ್ದ ಭೂ ಮಾಲೀಕರಾದ ಜಯಲಕ್ಷ್ಮಮ್ಮ ಹಾಗೂ ಇತರರ ಪರ ವಾದ ಮಂಡಿಸಿದ ಹಿರಿಯ ವಕೀಲ ಆನಂದ್ ಸಂಜಯ್ ಎಂ. ನೂಲಿ ಅವರ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಿತು.

ಪರಿಹಾರ ತಡೆಹಿಡಿಯುವಿಕೆಯನ್ನು ಸಮರ್ಥಿಸಲು ಕಾನೂನಿನಲ್ಲಿರುವ ಯಾವುದೇ ಕಾರಣಗಳನ್ನು ಮುಂದಿಡುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಪೀಠ ಅಭಿಪ್ರಾಯಪಟ್ಟಿತು. 2019ರ ಜೂನ್ 1ರಂದು ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯದ ಪ್ರಕಾರ ಭೂಮಾಲೀಕರಿಗೆ ಪರಿಹಾರ ನೀಡುವಂತೆ ವಿಶೇಷ ಭೂಸ್ವಾಧೀನ ಅಧಿಕಾರಿಗೆ ಆದೇಶಿಸಿತು.

ಇಂದು, ನಾಳೆ ಜೈಲಿಗೆ ಹೋಗುವವರಿಂದ ಜನಕಲ್ಯಾಣ ಸಮಾವೇಶ

ಮಾಜಿ ಶಾಸಕ ಬಿ.ಹರ್ಷವರ್ಧನ್ ವಾಗ್ದಾಳಿ



ಕಾರ್ಯಕ್ರಮವನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಉದ್ಘಾಟಿಸಿದರು.

ನಂಜನಗೂಡು, ಡಿ.5– ಕಾಂಗ್ರೆಸ್ ಸರ್ಕಾರ ಎಸ್ಸಿ, ಎಸ್ಟಿ ಅನುದಾನಗಳನ್ನು ದುರ್ಬಳಕೆ ಮಾಡಿಕೊಂಡಿದ್ದು, ಇಂದು ಅಥವಾ ನಾಳೆ ಜೈಲಿಗೆ ಹೋಗುವವರು ಹಾಸನದಲ್ಲಿ ಜನಕಲ್ಯಾಣ ಸಮಾವೇಶ ನಡೆಸುತ್ತಿದ್ದಾರೆ ಎಂದು ಮಾಜಿ ಶಾಸಕ ಬಿ. ಹರ್ಷವರ್ಧನ್ ವಾಗ್ದಾಳಿ ನಡೆಸಿದರು.

ನಗರದ ಯಾತ್ರಿ ಭವನ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಆಯೋಜಿಸಿದ್ದ ಸಂವಿಧಾನ ಸನ್ಮಾನ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಸ್ಸಿ, ಎಸ್ಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಜೊತೆಗೆ ಹಾಸನದಲ್ಲಿ ಜನಕಲ್ಯಾಣ ಸಮಾವೇಶ ನಡೆಸುತ್ತಿದೆ ಎಂದ ಅವರು ಮಾಜಿ ಪ್ರಧಾನಿ ನೆಹರು ಅವರಿಗೆ ಇದ್ದಂತಹ ಸೋವಿಯತ್ ಒಕ್ಕೂಟ ಮತ್ತು ಕಮ್ಯುನಿಸ್ಟ್ ಪಕ್ಷಗಳ ಹುಚ್ಚುತನವನ್ನು ತಲೆಯಲಿಟ್ಟುಕೊಂಡು ಕಾಂಗ್ರೆಸ್ ಪಕ್ಷ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ ಜಾತ್ಯಾತೀತ ಮತ್ತು ಸಮಾಜವಾದ ಪದಗಳನ್ನು ಸೇರ್ಪಡೆ ಮಾಡಿದೆ. ಆದರೆ ಸಮಾಜವಾದವೇ ಬೇರೆ ಸಾಮಾಜಿಕ ನ್ಯಾಯವೇ ಬೇರೆಯಾಗಿದ್ದು, ಅವರ ತಿದ್ದುಪಡಿಗೆ ಮೌಲ್ಯವಿಲ್ಲ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಉತ್ಕೃಷ್ಟ ಸಂವಿಧಾನ ದಿಂದಾಗಿ ನಾವು ಸುಭದ್ರವಾಗಿದ್ದೇವೆ. ಇಂತಹ ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಆ ನಿಟ್ಟಿನಲ್ಲಿ ಸಂವಿಧಾನದ ವಿರುದ್ಧ ಮಾತನಾಡುವವರನ್ನು ಮೊದಲು ಜೈಲಿಗಟ್ಟಿ ಆ ನಂತರ ದೂರು ದಾಖಲಿಸಬೇಕು ಎಂಬ ಸಂವಿಧಾನ ತಿದ್ದುಪಡಿಯಾಗಬೇಕು. ಜೊತೆಗೆ ಪ್ರಧಾನಿ ಮೋದಿ ಅವರು ಜನಗಣತಿ ಜೊತೆಗೆ ಜಾತಿಗಣತಿಯನ್ನು ನಡೆಸಿದಲ್ಲಿ ಈ ದೇಶದಲ್ಲಿ ಯಾವ ಸಮುದಾಯಕ್ಕೆ ಎಷ್ಟು ಹಕ್ಕಿದೆ ಎಂಬುದು ತಿಳಿಯಲಿದೆ ಎಂದರು.

ಬಾಬಾ ಸಾಹೇಬರ ವಿಮೋಚನಾ ರಥ ಅರ್ಧಕ್ಕೆ ನಿಂತಿದ್ದು, ಆ ರಥವನ್ನು ಮುಂದಕ್ಕೆ ಎಳೆಯುವ ಸಲುವಾಗಿ ಎಲ್ಲರೂ ಜಾತಿ, ಮತ ಎಂಬ ಭೇದ ಭಾವವನ್ನು ಬಿಟ್ಟು ಭಾರತೀಕರಣವಾಗಬೇಕು. ಇಂತಹ ಚಿಂತನೆಗಳನ್ನು ಜನರಲ್ಲಿ ಮೂಡಿಸುವ ಸಲುವಾಗಿ ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನದ ಆಶಯಗಳನ್ನು ಜನರಿಗೆ ತಿಳಿಸುವ ಮೂಲಕ ಅರಿವು ಮೂಡಿಸಿ ಜಾಗೃತಿ ಮೂಡಿಸುವ ಸಲುವಾಗಿ ಬಿಜೆಪಿಯಿಂದ ಸಂವಿಧಾನ ಸನ್ಮಾನ ಅಭಿಯಾನ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ಸಮಾರಂಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಬಿಜೆಪಿ ರಾಜ್ಯ ಮುಖಂಡರಾದ ಫಣೀಶ್, ನಾಗರಾಜಮಲ್ಲಾಡಿ, ಪ್ರಫುಲ್ಲಾಮಲ್ಲಾಡಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಬದನವಾಳು ರಾಮು, ವಳಗೆರೆ ಪುಟ್ಟಸ್ವಾಮಿ, ಶ್ರೀನಿವಾಸ ರೆಡ್ಡಿ, ಸಿದ್ದರಾಜು, ಬಾಲಚಂದ್ರು, ಮಹೇಶ್ ಬಾಬು, ಎನ್.ಸಿ.ಬಸವಣ್ಣ, ಶ್ಯಾಮ್ ಪಟೇಲ್, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಮಾಜಿ ನಗರ ಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಸೇರಿದಂತೆ ಹಲವರಿದ್ದರು.

> **ದೇಶದ ಸಂವಿಧಾನದ ಆಶಯಗಳನ್ನು ಜನಸಾಮಾನ್ಯರಿಗೂ ತಿಳಿಸಿ ಜಾಗೃತಿ ಮೂಡಿಸುವ ಸಲುವಾಗಿ ಬಿಜೆಪಿ ನ.26 ರಿಂದ ಜ.26 ರವರೆಗೆ ರಾಜ್ಯಾದ್ಯಂತ ಸಂವಿಧಾನ ಸನ್ಮಾನ ಅಭಿಯಾನ ಕಾರ್ಯಕ್ರಮಗಳನ್ನು ರೂಪಿಸಿದೆ. ವರಿಷ್ಠರ ಆದೇಶದ ಮೇರೆಗೆ ಕ್ಷೇತ್ರದಲ್ಲಿ 2 ತಿಂಗಳ ಕಾಲ ಎಲ್ಲಾ ಶಕ್ತಿ, ಮಹಾಶಕ್ತಿ ಕೇಂದ್ರಗಳಲ್ಲೂ ಕಾರ್ಯಕ್ರಮ ರೂಪಿಸಲಾಗುವುದು.**
> -ಎಸ್.ಮಹದೇವಯ್ಯ, ಸಂವಿಧಾನ ಸನ್ಮಾನ ಅಭಿಯಾನದ ಸಂಚಾಲಕ.

ಹೆಮ್ಮಿಗೆಯಲ್ಲಿ ರೈತ ಕ್ಷೇತ್ರ ಪಾಠ ಶಾಲೆ ಕಾರ್ಯಕ್ರಮ


ಹೆಮ್ಮಿಗೆಯಲ್ಲಿ ರೈತ ಕ್ಷೇತ್ರ ಪಾಠ ಶಾಲೆ ಕಾರ್ಯಕ್ರಮ ಉದ್ಘಾಟಿಸಲಾಯಿತು.

ತಿ.ನರಸೀಪುರ, ಡಿ.5– ರೈತರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಧಿಕಾರಿಗಳು ನೀಡುವ ಕೃಷಿ ಮಾರ್ಗದರ್ಶನದಂತೆ ಬೇಸಾಯ ಮಾಡಿದಲ್ಲಿ ಹೆಚ್ಚು ಇಳುವರಿ, ಆದಾಯ ಪಡೆಯಬಹುದು ಎಂದು ತಲಕಾಡು ಶ್ರೀ ಹಸ್ತಿಕೇರಿ ಮಠಾಧೀಶ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ಸಲಹೆ ನೀಡಿದರು.

ತಾಲೂಕಿನ ಹೆಮ್ಮಿಗೆ ಗ್ರಾಮದ ರೈತ ಗಂಗಾಧರಪ್ಪ ಅವರ ಜಮೀನಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಆಯೋಜಿಸಿದ್ದ ರೈತ ಕ್ಷೇತ್ರ ಪಾಠ ಶಾಲೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಜಮೀನಿನಲ್ಲಿ ಯಂತ್ರ ಶ್ರೀಭತ್ತ ಬೇಸಾಯ ಅನುಷ್ಠಾನಿಸಿದ್ದು, ಉತ್ತಮ ಬೆಳೆ ಬಂದಿದೆ. ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದು, ಮುಂದಿನ ದಿನಗಳಲ್ಲಿಯೂ ತಮ್ಮ ಜಮೀನಿನಲ್ಲಿ ಯಂತ್ರ ಶ್ರೀ ಭತ್ತ ಬೇಸಾಯ ಮಾಡಿಸುವುದಾಗಿ ತಿಳಿಸಿದರು.

ಯಂತ್ರ ಶ್ರೀಭತ್ತದ ಕೃಷಿ ಮಾಡಿರುವ ಪ್ರಗತಿಪರ ರೈತ ಗಂಗಾಧರಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೃಷಿ ಕೂಲಿ ಕಾರ್ಮಿಕರ ಅಭಾವದಿಂದ ರೈತರು ಭತ್ತ ಕೃಷಿಯಿಂದ ವಿಮುಖರಾಗುತ್ತಿರುವ ವೇಳೆ ಯಂತ್ರಗಳ ಬಳಕೆಯಿಂದ ಕೃಷಿ ಮಾಡಲು ಸಾಧ್ಯವಿದೆ ಎಂಬುದು ತಿಳಿದಿದೆ. ಇದು ಕಡಿಮೆ ಶ್ರಮ, ಸಮಯ ಹಾಗೂ ಖರ್ಚಿನಲ್ಲಿ ಹೆಚ್ಚು ಆದಾಯ, ಹೆಚ್ಚು ಇಳುವರಿ ಪಡೆಯಬಹುದು ಎಂದು ತಿಳಿಸಿದರು.

ರೈತ ಮುಖಂಡ ಕಿರಗಸೂರು ಶಂಕರ್ ಮಾತನಾಡಿ, ರೈತರು ಬಿತ್ತನೆಗೆ ಮೊದಲು ಬೀಜೋಪಚಾರ ಮಾಡುವುದರಿಂದ ಕೀಟ ಮತ್ತು ರೋಗಬಾಧೆಯಿಂದ ದೂರವಾಗಿ ಔಷಧೋಪಚಾರಗಳ ಖರ್ಚು ಕಡಿಮೆಗೊಳಿಸಿ ಅಧಿಕ ಇಳುವರಿ ಪಡೆಯಬಹುದು ಎಂದರು. ನಿವೃತ್ತ ಅಧಿಕಾರಿ ನಾರಾಯಣಗೌಡ ಅವರು ಯಂತ್ರಗಳ ಬಗ್ಗೆ ಯಂತ್ರಶ್ರೀ ಯೋಜನೆ ಕಾರ್ಯಕ್ರಮಗಳ ಬಗ್ಗೆ ಮತ್ತಷ್ಟು ತಯಾರಿ, ತರಬೇತಿ, ಮಾಹಿತಿ ಮಾರ್ಗದರ್ಶನ ನೀಡಿ ಕಾರ್ಯಕ್ರಮದ ಮಹತ್ವ ತಿಳಿಸಿದರು. ಯಂತ್ರ ಶ್ರೀರೈತ ಪಾಂಡುರಂಗ ಮಾತನಾಡಿದರು. ಗ್ರಾಪಂ ಸದಸ್ಯೆ ಟಿ.ಕೆ.ರತ್ನ, ಒಕ್ಕೂಟದ ಅಧ್ಯಕ್ಷೆ ಗಾಯಿತ್ರಮ್ಮ, ಕೃಷಿ ಮೇಲ್ವಿಚಾರಕ ಕುಮಾರ್, ರೈತ ಮುಖಂಡ ಕಿರಗಸೂರು ಪ್ರಸಾದ್ ನಾಯಕ್, ಸೇವಾ ಪ್ರತಿನಿಧಿ ಚಂದು, ಸಂಘದ ಸದಸ್ಯರು, ರೈತ ಮಹಿಳೆಯರು ಹಾಜರಿದ್ದರು.

ಇಂದಿನಿಂದ ಆರ್.ಧ್ರುವನಾರಾಯಣ್ ಮೆಮೊರಿಯಲ್ ಕಪ್; ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯಾವಳಿ

ನಂಜನಗೂಡು, ಡಿ.5– ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ವತಿಯಿಂದ ಡಿ.6ರಿಂದ 8ರವರೆಗೆ 3 ದಿನಗಳ ಕಾಲ ಆರ್.ಧ್ರುವನಾರಾಯಣ್ ಮೆಮೊರಿಯಲ್ ಕಪ್ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ ನಡೆಯಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.


ಧ್ರುವನಾರಾಯಣ್

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನಿಯರ್ ಕಾಲೇಜ್ ಮೈದಾನದಲ್ಲಿ ಡಿ.6ರಂದು ಮಧ್ಯಾಹ್ನ 3 ಗಂಟೆಗೆ ಶಾಸಕ ಮಂತರ್‌ಗೌಡ ಪಂದ್ಯಾವಳಿ ಉದ್ಘಾಟಿಸಲಿದ್ದು, ಸಂಸದ ಸುನೀಲ್ ಬೋಸ್, ಶಾಸಕ ಅನಿಲ್ ಉಪಸ್ಥಿತರಿರುವರು. ಡಿ.8ರ ಸಂಜೆ 5 ಗಂಟೆಗೆ ನಡೆಯುವ ಸಮಾರೋಪ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ..ಯತೀಂದ್ರ, ಶಾಸಕರಾದ ಗಣೇಶ್ ಪ್ರಸಾದ್ ಡಿ.ರವಿಶಂಕರ್, ಕೆ.ಹರೀಶ್‌ಗೌಡ ಭಾಗವಹಿಸಲಿದ್ದಾರೆ. ಪಂದ್ಯಾವಳಿಯಲ್ಲಿ ವಿಜೇತರಿಗೆ ಮೊದಲ ಬಹುಮಾನ 1 ಲಕ್ಷ, 2ನೇ ಬಹುಮಾನ 50 ಸಾವಿರ, 3ನೇ ಬಹುಮಾನ 25 ಸಾವಿರ ರೂ.ಗಳನ್ನು ವಿತರಿಸಲಾಗುವುದು. ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಫುಟ್‌ಬಾಲ್ ತಂಡಗಳು ಭಾಗಿಯಾಗಲಿವೆ. ನಂಜನಗೂಡು ತಾಲೂಕಿನಲ್ಲಿ ಮೊದಲ ಬಾರಿಗೆ ಇಂತಹ ರಾಜ್ಯ ಮಟ್ಟದ ಪಂದ್ಯಾವಳಿ ನಡೆಯುತ್ತಿರುವುದು ಹೆಮ್ಮೆ ತಂದಿದೆ ಎಂದು ತಿಳಿಸಿದರು.

ಇಂದು ನಗರಸಭೆ ಸಾಮಾನ್ಯ ಸಭೆ

ಹುಣಸೂರು, ಡಿ.5– ನಗರಸಭೆ ಸಾಮಾನ್ಯ ಸಭೆ ಅಧ್ಯಕ್ಷ ಎಸ್.ಶರವಣ ಅಧ್ಯಕ್ಷತೆಯಲ್ಲಿ ಡಿ.6 ರಂದು ಬೆಳಗ್ಗೆ 10 ಗಂಟೆಗೆ ನಗರಸಭಾ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪಲಾಪುರ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಕಂಪಲಾಪುರ ಡೈರಿ ನೂತನ ಅಧ್ಯಕ್ಷರಾಗಿ ಕೃಷ್ಣೇಗೌಡ, ಉಪಾಧ್ಯಕ್ಷೆಯಾಗಿ ಸುನಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಂಪಲಾಪುರ, ಡಿ.5– ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷೆಯಾಗಿ ಸುನಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಆಡಳಿತ ಮಂಡಳಿಗೆ ಇತ್ತೀಚೆಗೆ ಚುನಾವಣೆ ನಡೆದು ಜೆಡಿಎಸ್ ಬೆಂಬಲಿತ 7, ಕಾಂಗ್ರೆಸ್ ಬೆಂಬಲಿತ 3 ಮಂದಿ ಆಯ್ಕೆಯಾಗಿದ್ದರು. ನಿಯಮದಂತೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕೃಷ್ಣೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಸುನಂದ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜೆ.ಹಿತೇಂದ್ರ ಘೋಷಿಸಿದರು.

ಇದೇ ವೇಳೆ ಪಿರಿಯಾಪಟ್ಟಣ ಟಿಎಪಿಸಿಎಂಎಸ್ ನಿರ್ದೇಶಕ ಕೆ.ಕುಮಾರ್, ಡೇರಿ ನಿರ್ಗಮಿತ ಅಧ್ಯಕ್ಷ ಸ್ವಾಮಿ, ಪಿಎಸಿಎಸ್ ಅಧ್ಯಕ್ಷ ಕೆ.ಆರ್.ಸಂತೋಷ್, ನಿರ್ದೇಶಕ ಕೆ.ಎಂ.ಲಕ್ಷ್ಮಣ್, ಗಿರೀಶ್, ರವಿ, ಸಿಇಓ ಕಿಶೋರ್, ಮಾಜಿ ಅಧ್ಯಕ್ಷ ಕಟ್ಟೆ ಜಯಣ್ಣ, ರಿಜ್ವಾನ್, ಪಾಪಣ್ಣ, ಡೇರಿ ನಿರ್ದೇಶಕರಾದ ಕರೀಗೌಡ, ಗಣೇಶ್, ಕೆ.ಕೆ.ರವಿ, ರಾಮಕೃಷ್ಣ, ನಜೀಬ್, ಸಿಬ್ಬಂದಿ ರೇವಣ್ಣ, ಮಂಜು ಮತ್ತಿತರರಿದ್ದರು.

ದಿ.ಅಶ್ವಥ್ ನಾರಾಯಣರಾಜೇ ಅರಸ್‌ಗೆ ಹಸಿರು ನಮನ


ರೈತ ಮುಖಂಡ ದಿ.ಅಶ್ವಥ್ ನಾರಾಯಣರಾಜೇ ಅರಸ್ ಅವರಿಗೆ ಹಸಿರು ನಮನ ಸಲ್ಲಿಸಲಾಯಿತು.

ತಿ.ನರಸೀಪುರ, ಡಿ.5– ಮೈಸೂರಿನಲ್ಲಿ ಇತ್ತೀಚೆಗೆ ನಿಧನರಾದ ಹಿರಿಯ ರೈತ ಚೇತನ, ಹುಟ್ಟು ಹೋರಾಟಗಾರ ಹಾಗೂ ಅರಸ್ ಕಾರ್ ಮಾಲೀಕ ಅಶ್ವಥ್ ನಾರಾಯಣರಾಜೇ ಅರಸ್ ಅವರ ನಿಧನಕ್ಕೆ ಶಾಂತಿ ಕೋರಿ ಪಟ್ಟಣದಲ್ಲಿ ಸಾಮೂಹಿಕ ನಾಯಕತ್ವದಡಿ ಹಸಿರು ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪಟ್ಟಣದ ನಂಜನಗೂಡು ರಸ್ತೆಯ ಎಪಿಎಂಸಿ ಕಚೇರಿ ಎದುರಿನ ರೈತ ಸಂಘದ ಕಚೇರಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಮುಖ್ಯಸ್ಥರು ಅಗಲಿದ ಅರಸ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.


ಈ ವೇಳೆ ಸಂಘಟನೆ ಜಿಲ್ಲಾ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್, ಜಿಲ್ಲಾ ಸಂಚಾಲಕ ಕಳ್ಳೀಪುರ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಆಲಗೂಡು ಮಹದೇವ್ರ, ಕಾರ್ಯಾಧ್ಯಕ್ಷ ಬನ್ನೂರು ರಾಮಕೃಷ್ಣ, ತಾಯೂರು ಪ್ರಕಾಶ್, ತಾಲೂಕು ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಓಂಕಾರ ಮೂರ್ತಿ, ಮೂಗೂರು ಮಹದೇವಸ್ವಾಮಿ, ಹನುಮನಾಳು ಜಗದೀಶ್, ಬನ್ನೂರು ರಾಜಣ್ಣ, ವರಲಕ್ಷ್ಮಿ, ಮಹೇಶ್ ಕೆಬ್ಬೇಹುಂಡಿ, ಯರಗನಹಳ್ಳಿ ರಘು, ಕುರುಬೂರು ಶಾಂತರಾಜು, ನಿಲಸೋಗೆ ನಂಜುಂಡಸ್ವಾಮಿ, ಚಾಮನಹಳ್ಳಿ ವೆಂಕಟೇಶ್, ಶಂಕರೇಗೌಡ, ರಾಮೇಗೌಡ, ಯೋಗೇಶ್ ಮತ್ತಿತರಿದ್ದರು.

ಕುಡಿಯಲು ನೀರು ಕೇಳುವ ನೆಪದಲ್ಲಿ
ವೃದ್ಧೆಯ ಸರ ಅಪಹರಣ

ಹುಣಸೂರು, ಡಿ.5– ಕುಡಿಯಲು ನೀರು ಕೇಳುವ ನೆಪದಲ್ಲಿ ವೃದ್ಧೆಯ ಕೈ ಕಾಲು ಕಟ್ಟಿ ಹಾಕಿ 30 ಗ್ರಾಂ ತೂಕದ ಚಿನ್ನದ ಸರ ಅಪಹರಿಸಿರುವ ಘಟನೆ ನಗರದ ಚಿಕ್ಕ ಹುಣಸೂರಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದಿ.ಚಿನ್ನಪ್ಪ ಅವರ ಪತ್ನಿ ಜಯಮ್ಮ(80) ಚಿನ್ನದ ಸರ ಕಳೆದುಕೊಂಡವರು. ಈಕೆ ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಮನೆಗೆ ಬಂದ ಅಪರಿಚಿತ ಮಹಿಳೆ ಕುಡಿಯಲು ನೀರು ಕೇಳಿದ್ದಾರೆ. ನೀರು ತರಲು ಒಳಗೆ ಹೋಗುತ್ತಿದ್ದಂತೆ ಹಿಂದಿನಿಂದ ಬಂದ ಅಪರಿಚಿತ ಮಹಿಳೆ ವೃದ್ಧೆ ಬಾಯಿಗೆ ಬಟ್ಟೆ ತುರುಕಿ, ಕೈಕಾಲು ಕಟ್ಟಿ ಹಾಕಿ 30 ಗ್ರಾಂ ಚಿನ್ನದ ಸರ ಕಸಿದು ಪರಾರಿಯಾಗಿದ್ದಾರೆ. ಅಕ್ಕ–ಪಕ್ಕದವರು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದ್ದು, ವೃದ್ಧೆಯನ್ನು ಸಂತೈಸಿ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

ಕಲ್ಲಟ್ಟಿಯಲ್ಲಿ ಹುಲಿ ಪ್ರತ್ಯಕ್ಷ: ಗ್ರಾಮಸ್ಥರ ಆತಂಕ


ಹುಲಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆರ್‌ಎಫ್‌ಓ ರಶ್ಮಿ, ಸಿಬ್ಬಂದಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಡಿ.5– ತಾಲೂಕಿನ ಕಲ್ಲಟ್ಟಿ ಗ್ರಾಮದಲ್ಲಿ ಕಳೆದ 2 ವರ್ಷಗಳ ಹಿಂದೆ ಹುಲಿ ಬಾಲಕನನ್ನು ಬಲಿ ಪಡೆದ ಸ್ಥಳದಲ್ಲೇ ಮತ್ತೊಮ್ಮೆ ಹುಲಿ ಪ್ರತ್ಯಕ್ಷಗೊಂಡಿರುವುದರಿಂದ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.

ತಾಲೂಕಿನ ಮೇಟಿಕುಪ್ಪೆ ಅರಣ್ಯ ವಲಯ ವ್ಯಾಪ್ತಿಯ ಕಲ್ಲಟ್ಟಿ ಗ್ರಾಮದ ನಿವಾಸಿ ರೈತ ಭೀಮನಾಯ್ಕ ಅವರ ಜಮೀನಿನಲ್ಲಿ ಬುಧವಾರ ರಾತ್ರಿ ಭಾರೀ ಗಾತ್ರದ ಹುಲಿ ಜಮೀನಿನಲ್ಲಿ ಹಂದಿಯನ್ನು ಬೇಟೆಯಾಡಿ ತಿಂದು ಹಾಕಿರುವುದು ಗುರುವಾರ ಬೆಳಕಿಗೆ ಬಂದಿದೆ. ಕಳೆದ 2 ವರ್ಷಗಳ ಹಿಂದೆ ಗ್ರಾಮದ ರೈತ ಕೃಷ್ಣನಾಯಕ ಎಂಬುವರ ಪುತ್ರ ಚರಣ್ ನಾಯಕ (12)ನನ್ನು ಅವರ ಜಮೀನಿನಲ್ಲಿ ಹುಲಿ ದಾಳಿ ಮಾಡಿ ಬಲಿ ಪಡೆದಿತ್ತು. ಮತ್ತೆ ಅದೇ ಜಾಗದಲ್ಲಿ ಭಾರೀ ಗಾತ್ರದ ಹುಲಿ ಕಾಣಿಸಿಕೊಂಡಿರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳಾದ ಮೇಟಿ ಕುಪ್ಪೆ ಆರ್‌ಎಫ್ ರಶ್ಮಿ ಹಾಗೂ ಸಿಬ್ಬಂದಿ, ಹುಲಿ ಹಂದಿ ಬೇಟೆಯಾಡಿರುವ ಸ್ಥಳ ಪರಿಶೀಲಿಸಿ, ಹುಲಿ ಹೆಜ್ಜೆ ಗುರುತು ಜಾಡು ಹಿಡಿದು ತೆರಳಿದ ವೇಳೆ ಹುಲಿ ಮತ್ತೆ ಕಾಡಿಗೆ ತೆರಳಿರುವುದು ಕಂಡು ಬಂದಿದೆ. ನಂತರ ಹುಲಿ ಚಲನ ವಲನ ಗಮನಿಸಲು ಸ್ಥಳದಲ್ಲಿ 5 ಕ್ಯಾಮೆರಾಗಳನ್ನು ಅಳವಡಿಸಿ, ಸಿಬ್ಬಂದಿಯನ್ನು ಗಸ್ತಿಗೆ ನಿಯೋಜಿಸಲಾಗಿದೆ. ಹುಲಿಯ ಚಲನ ವಲನ ಗಮನಿಸಿ ಕಾರ್ಯಾಚರಣೆ ನಡೆಸಲಾಗುವುದು. ಗ್ರಾಮಸ್ಥರು ತಮ್ಮ ಜಮೀನುಗಳಿಗೆ ತೆರಳುವ ಸಂದರ್ಭ ಎಚ್ಚರಿಕೆ ವಹಿಸಿ ಹುಲಿ ಕಂಡು ಬಂದಲ್ಲಿ ಅರಣ್ಯ ಇಲಾಖೆಗೆ ತಿಳಿಸಿ ಎಂದು ಆರ್‌ಎಫ್‌ಓ ರಶ್ಮಿ ತಿಳಿಸಿದ್ದಾರೆ.

ಕಲ್ಲಟ್ಟಿ ಗ್ರಾಮದ ನಿವಾಸಿ, ಭಾರತೀಯ ಕಿಸಾನ್ ಸಂಘದ ತಾಲೂಕು ಅಧ್ಯಕ್ಷ ಕುಮಾರ್ ನಾಯಕ್ ಮಾತನಾಡಿ, ಕಳೆದ 2 ವರ್ಷಗಳ ಹಿಂದೆ ಬಾಲಕನನ್ನು ಬಲಿ ಪಡೆದ ಹುಲಿಯೇ ನಿನ್ನೆ ರಾತ್ರಿ ಕಾಡು ಹಂದಿಯನ್ನು ಬಲಿ ಪಡೆದಿದೆ. ಅರಣ್ಯ ಇಲಾಖೆಯವರು ಬಾಲಕನನ್ನು ಬಲಿ ಪಡೆದ ಹುಲಿಯನ್ನು ಸೆರೆ ಹಿಡಿದಿದ್ದೇವೆ ಎಂದು ಬೇರೆ ಹುಲಿ ಸೆರೆ ಹಿಡಿದು ಗ್ರಾಮಸ್ಥರನ್ನು ಯಾಮಾರಿಸಿದ್ದಾರೆ. ಮುಂದಿನ ದಿನಗಳಲ್ಲಿ ಈ ಹುಲಿ ಸೆರೆ ಹಿಡಿಯದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತರು ಸಂಘಟಿತ ಹೋರಾಟಕ್ಕೆ ಜಾಗೃತರಾಗಿ

ಕಬ್ಬು ಬೆಳಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್


ರಾಜ್ಯ ಕಬ್ಬು ಬೆಳಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್ ಮಾತನಾಡಿದರು

ಸರಗೂರು, ಡಿ.5– ಸಂಘಟಿತ ಹೋರಾಟಕ್ಕಾಗಿ ಗ್ರಾಮೀಣ ರೈತರು ಜಾಗೃತ ರಾಗಬೇಕು ಎಂದು ರಾಜ್ಯ ಕಬ್ಬು ಬೆಳಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳಗಾರರ ಸಂಘದಿಂದ ನಡೆದ ವಿಶ್ವ ರೈತ ದಿನಾಚರಣೆ ಹಾಗೂ ರಾಜ್ಯ ಮಟ್ಟದ ರೈತ ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟ ಇಡೀ ದೇಶದ ರೈತರಿಗೋಸ್ಕರ. ಆದರೆ ಕೆಲವರು ಉತ್ತರ ಭಾರತದ ರಾಜ್ಯಗಳಿಗೆ ಮಾತ್ರ ಎಂದು ರೈತರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ರೈತರು ಕಿವಿಗೊಡಬಾರದು. ದೆಹಲಿಯಲ್ಲಿ ಕಳೆದ ಫೆಬ್ರವರಿಯಿಂದ ಎಂಎಸ್‌ಪಿ ಖಾತ್ರಿ ಕಾನೂನು ಗ್ಯಾರಂಟಿ ಜಾರಿ ಮಾಡಬೇಕು. ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿಯಾಗಬೇಕು ಎಂದು ತೀವ್ರ ಹೋರಾಟ ನಡೆಯುತ್ತಿದೆ. ಕಳೆದ ತಿಂಗಳು 26ರಂದು ಸಂಯುಕ್ತ ಕಿಸಾನ್ ಮೋರ್ಚಾ ಸಂಘಟನೆ ರೈತ ನಾಯಕ ಜಗಜಿತ್ ಸಿಂಗ್ ದಲೇವಾಲಾ ಅವರು ಸಾಯುವವರೆಗೂ ರೈತರಿಗೋಸ್ಕರ ಉಪವಾಸ ಮಾಡುತ್ತೇನೆ ಎಂದು ಘೋಷಿಸಿದಾಗ ಮುಂಜಾನೆ 3 ಗಂಟೆಗೆ ಪೊಲೀಸರು ಅವರನ್ನು ಬಂಧಿಸಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೂ ಉಪವಾಸ ಮುಂದುವರೆಸಿದಾಗ ಸರ್ಕಾರಕ್ಕೆ ಮುಜುಗರ ಉಂಟಾಗಿ ಪ್ರತಿಭಟನಾ ಸ್ಥಳಕ್ಕೆ ಮತ್ತೆ ಕರೆತಂದು ಬಿಟ್ಟರು. ಇದಕ್ಕೆ ಕಾರಣ ಸಂಘಟಿತ ಹೋರಾಟ. ಆದ್ದರಿಂದ ಗ್ರಾಮೀಣ ರೈತರು ಈ ಬಗ್ಗೆ ಜಾಗೃತರಾಗಬೇಕು. ದೆಹಲಿಯಲ್ಲಿ ಹೋರಾಟ ತೀವ್ರಗೊಳ್ಳುತ್ತಿದ್ದು, ಈಗಲೂ ರೈತ ನಾಯಕರು ಉಪವಾಸ ಸತ್ಯಾಗ್ರಹ ಮುಂದುವರೆಸಿದ್ದಾರೆ. ಅವರನ್ನು ಬೆಂಬಲಿಸಿ ರಾಜ್ಯದಿಂದಲೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಡಿ.6ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದೇವೆ. ಆದ್ದರಿಂದ ತಾಲೂಕಿನ ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ಕಬ್ಬು ಬೆಳಗಾರರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್ ಮಾತನಾಡಿ, ಸರ್ಕಾರ ಎಲ್ಲಾ ಜಯಂತಿ ಮಾಡುತ್ತದೆ. ಆದರೆ ದೇಶಕ್ಕೆ ಅನ್ನ ನೀಡುವ ರೈತರ ಹಬ್ಬ ಮಾಡುತ್ತಿಲ್ಲ. ಆದ್ದರಿಂದ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಡಿ.23ರಂದು ಮೈಸೂರಿನಲ್ಲಿ ವಿಶ್ವ ರೈತ ದಿನಾಚರಣೆಯನ್ನು ಆಯೋಜಿಸಲಾಗಿದೆ. ಕಾರ್ಯ ಕ್ರಮದಲ್ಲಿ ಹೆಚ್ಚಿನ ರೈತರು ಭಾಗವಹಿಸಿ ಯಶಸ್ವಿಗೊಳಿಸಬೇಕು. ಅಲ್ಲದೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ರೈತರ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸೋಣ ಎಂದರು.

ಸಭೆಯಲ್ಲಿ ಜಿಲ್ಲಾ ಜಂಟಿ ಕಾರ್ಯದರ್ಶಿ ಕೆಂಡಗಣ್ಣಸ್ವಾಮಿ, ತಾಲೂಕು ಕಾರ್ಯದರ್ಶಿ ಸುರೇಶ್‌ಶೆಟ್ಟಿ, ಅಜಿತ್ ಕುಮಾರ್, ತಾಲೂಕು ಉಪಾಧ್ಯಕ್ಷ ಸುನೀಲ್, ತಾಲೂಕು ಸಂಘಟನಾ ಕಾರ್ಯದರ್ಶಿ ಹೇಮಂತ್ ಕುಮಾರ್, ಮುಖಂಡರಾದ ಮಹದೇವ ಶೆಟ್ಟಿ, ಮರಿಸ್ವಾಮಿ, ಗಂಗಾಧರ್, ಸಿದ್ದನಾಯಕ, ನಾಗಣ್ಣಸ್ವಾಮಿ, ಶಿವಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಡಯಾಲಿಸಿಸ್‌ಗೆ ಒಳಗಾಗುವ ರೋಗಿಗಳಿಗೆ ಆರ್ಥಿಕ ಸಹಾಯ

ಮೈಸೂರು ಜೆಎಸ್‌ಎಸ್ ಆಸ್ಪತ್ರೆ- ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಒಡಂಬಡಿಕೆ

ಮೈಸೂರು, ಡಿ.5(ಎಸ್‌ಬಿಡಿ)– ಡಯಾಲಿಸಿಸ್ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಆರ್ಥಿಕ ಸಹಾಯ ಕಲ್ಪಿಸುವ ಉದ್ದೇಶದೊಂದಿಗೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯೊಂದಿಗೆ ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಒಡಂಬಡಿಕೆ ಮಾಡಿಕೊಂಡಿದೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಜೆಎಸ್‌ಎಸ್–ವಾಕ್‌ಮೇಟ್ ಡಯಾಲಿಸಿಸ್ ಚಿಕಿತ್ಸೆಗೆ ಸಹಾಯ ಕಾರ್ಯಕ್ರಮ'ಕ್ಕೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಈ ವೇಳೆ ಲೂನಾರ್ ಎಕ್ಸ್‌ಪೋರ್ಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿಯನ್ ಜೋಸೆಫ್ ಮಾತನಾಡಿ, ಜೆಎಸ್‌ಎಸ್ ಸಂಸ್ಥೆಯು ಸೇವಾ ಕಾರ್ಯಗಳ ಮೂಲಕ ಜನಮಾನಸದಲ್ಲಿ ಉಳಿದಿದೆ. ಶ್ರೀಗಳ ಪರಿಶ್ರಮ ಹಾಗೂ ದೂರದೃಷ್ಟಿಯಿಂದ ದೇಶ–ವಿದೇಶಗಳಲ್ಲಿ 300ಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮೂಲಕ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೇವೆಯನ್ನು ಸಮಾಜಕ್ಕೆ ನೀಡಲಾಗುತ್ತಿದೆ ಎಂದು ಬಣ್ಣಿಸಿದರು.

ಜೆಎಸ್‌ಎಸ್ ಸಂಸ್ಥೆ ಸಮಾಜಕ್ಕೆ ಅದರಲ್ಲೂ ಬಡವರಿಗೆ ಕಲ್ಪಿಸಿರುವ ಆರೋಗ್ಯ ಸೇವೆಯನ್ನು ಗಮನಿಸಿ ನಮ್ಮ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಜೆಎಸ್‌ಎಸ್ ಆಸ್ಪತ್ರೆಗೆ ಡಯಾಲಿಸಿಸ್ ಚಿಕಿತ್ಸೆಗೆಂದು ಬರುವ ಬಡರೋಗಿಗಳಿಗೆ ಆರ್ಥಿಕ ಸಹಾಯವಾಗಲೆಂದು 10 ಲಕ್ಷ ರೂ. ದೇಣಿಗೆಯನ್ನು ನೀಡುತ್ತಿದ್ದೇವೆ. ಇದರಿಂದ ಡಯಾಲಿಸಿಸ್ ವೆಚ್ಚದಲ್ಲಿ ಸ್ವಲ್ಪ ವಿನಾಯ್ತಿ ದೊರಕಲಿದೆ. ವೈದ್ಯರಾಗಿದ್ದ ನಮ್ಮ ತಂದೆ, ಹಾವು ಕಡಿತಕ್ಕೆ ಒಳಗಾದ ರೈತರು ಹಾಗೂ ಬಡವರಿಗೆ ಉಚಿತ ಚಿಕಿತ್ಸೆ ಹಾಗೂ ಔಷಧಿ ನೀಡುತ್ತಿದ್ದರು. ಅವರ ಪ್ರೇರಣೆಯಿಂದ ನನಗೂ ವೈದ್ಯನಾಗಬೇಕೆಂಬ ಆಸೆಯಿತ್ತಾದರೂ ಪ್ರವೇಶಾವಕಾಶ ಸಿಗದೆ ಇಂಜಿನಿಯರಿಂಗ್ ಶಿಕ್ಷಣ ಪಡೆಯುವಂತಾಯ್ತು ಎಂದು ತಿಳಿಸಿದರು.



ಡಯಾಲಿಸಿಸ್ ಚಿಕಿತ್ಸೆ ಪಡೆಯುವವರಿಗೆ ಆರ್ಥಿಕ ಸಹಾಯ ಕಲ್ಪಿಸಲು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ಒಡಂಬಡಿಕೆ ಮಾಡಿಕೊಂಡವು.

ದಾನಿಗಳು ನೆರವು: ಸುತ್ತೂರು ಶ್ರೀಗಳು ಮಾತನಾಡಿ, ರೋಗಿಗಳ ಅನುಕೂಲಕ್ಕಾಗಿ ಅನೇಕ ಸಂಘ ಸಂಸ್ಥೆಗಳು ಹಾಗೂ ದಾನಿಗಳು ಆಸ್ಪತ್ರೆಗೆ ದೇಣಿಗೆ ನೀಡುತ್ತಿದ್ದಾರೆ. ಡಯಾಲಿಸಿಸ್ ಚಿಕಿತ್ಸೆಗೆ ಬರುವ ಬಡರೋಗಿಗಳ ಚಿಕಿತ್ಸೆಗೆ ಈ ಹಿಂದೆ ಇನ್ಫೋಸಿಸ್‌ನ ಡಾ.ಸುಧಾಮೂರ್ತಿ ಅವರು 10 ಲಕ್ಷ ರೂ. ಹಾಗೂ ಮೈಸೂರು ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾ ದೇವಿ ಒಡೆಯರ್ ಅವರು 5 ಲಕ್ಷ ರೂ.ಗಳನ್ನು ದೇಣಿಗೆ ನೀಡಿದ್ದರು. ಈಗ ವಾಕ್‌ಮೇಟ್ ತಯಾರಿಕೆಯ ಲೂನಾರ್ ಎಕ್ಸ್‌ಪೋರ್ಟ್ಸ್ ಸಂಸ್ಥೆಯಿಂದ 10 ಲಕ್ಷ ರೂ. ನೀಡಿರುವುದು ಸಂತಸದ ಸಂಗತಿ. ಇಂತಹ ಸಮಾಜಮುಖಿ ಕಾರ್ಯ ಮುಂದುವರೆಯಲಿ ಎಂದು ಆಶಿಸಿದರು.

ಪರಿಸರ, ನೀರು ಹಾಗೂ ಆಹಾರ ಕಲುಷಿತಗೊಂಡಿರುವ ಪರಿಣಾಮ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಅಗತ್ಯ ಚಿಕಿತ್ಸೆ ಹಾಗೂ ಔಷಧಿಗಳ ಅಗತ್ಯವಿದೆ. ಪ್ರಸ್ತುತ ವೈದ್ಯಕೀಯ ಕ್ಷೇತ್ರದಲ್ಲಿ ಯಾವುದೂ ಅಸಾಧ್ಯ ಎಂಬುದಿಲ್ಲ. ಆದರೆ ಯಾವುದೇ ಖಾಯಿಲೆ ಬಂದರೂ ಧೈರ್ಯವಾಗಿ ಎದುರಿಸಬೇಕು. ಎಲ್ಲದಕ್ಕೂ ಭಗವಂತನ ಕೃಪೆ ಇದೆ ಎಂಬ ನಂಬಿಕೆಯೊಂದಿಗೆ ಮುನ್ನಡೆಯಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು.

ಬಡವರಿಗೆ ಅನುಕೂಲ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಮಾತನಾಡಿ, ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳು ಡಯಾಲಿಸಿಸ್ ಪಡೆಯಬೇಕು. ಬಡವರಿಗೆ ಈ ಚಿಕಿತ್ಸಾ ವೆಚ್ಚ ಹೊರೆಯಾಗುತ್ತದೆ. ರೋಗಿಗಳೇ ನಮ್ಮ ಬಂಧುಗಳು ಎಂಬ ರಾಜೇಂದ್ರ ಶ್ರೀಗಳ ವಾಣಿಯಂತೆ ಜೆಎಸ್‌ಎಸ್ ಆಸ್ಪತ್ರೆ ಕಡಿಮೆ ದರದಲ್ಲಿ ಡಯಾಲಿಸಿಸ್ ಚಿಕಿತ್ಸೆ ನೀಡುತ್ತಿದೆ ಇದಕ್ಕೆ ಲೂನಾರ್ ಸಂಸ್ಥೆಯು ನೆರವು ನೀಡಿರುವುದರಿಂದ ಇನ್ನೂ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ವೈದ್ಯಕೀಯ ಶಿಕ್ಷಣ ನಿರ್ದೇಶಕ ಆರ್.ಮಹೇಶ್, ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ವಾಕ್‌ಮೇಟ್ ಸಂಸ್ಥೆಯ ಎಸ್.ಕೆ.ಸಂಜಯ್, ಈಪನ್, ಸಿ.ಕುಮಾರಸ್ವಾಮಿ ಹಾಗೂ ಪದಾಧಿಕಾರಿಗಳು, ಜೆಎಸ್‌ಎಸ್ ಆಸ್ಪತ್ರೆಯ ಡಾ.ಮಂಜುನಾಥ್ ಶೆಟ್ಟಿ, ಡಾ.ಅಮೃತ್‌ರಾಜ್ ಗೌಡ, ವೈದ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಸುಬ್ರಹ್ಮಣ್ಯ ಷಷ್ಠಿ ಪೂಜಾ ಮಹೋತ್ಸವ

ಮೈಸೂರು, ಡಿ.5– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದ ಶ್ರೀ ಸುಬ್ರಹ್ಮಣ್ಯಸ್ವಾಮಿ ಸನ್ನಿಧಿಯಲ್ಲಿ ಷಷ್ಠಿ ಪ್ರಯುಕ್ತ ಡಿ. 7 ರಂದು ಬೆಳಗ್ಗೆ 10 ಗಂಟೆಗೆ ವಿಶೇಷ ಪೂಜೆ, ಶ್ರೀ ಸುಬ್ರಹ್ಮಣ್ಯ ಹೋಮ, ಕುಜದೋಷ, ನಾಗದೋಷ ನಿವಾರಣಾ ಹೋಮ, ಕಾಲಸರ್ಪಶಾಂತಿ ಹೋಮ ಹಾಗೂ ಸಂಜೆ ದೀಪಾರಾಧನೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಜಗದೀಶ ಶರ್ಮಾ, ಮೊ 9916617795, 9535413361 ಸಂಪರ್ಕಿಸಬಹುದು.

ಶೇ.50:50ರಡಿ ಮುಡಾ ನಿವೇಶನ ಹಂಚಿಕೆ ಪ್ರಕರಣ

ಅಕ್ರಮವಾಗಿ ಗಳಿಸಿದ ಹಣವನ್ನು ಕುಟುಂಬ ಸದಸ್ಯರ ಹೆಸರಲ್ಲಿ ಹಲವೆಡೆ ಹೂಡಿಕೆ ಮಾಡಿದ ಅಧಿಕಾರಿಗಳು!

ಲೋಕಾಯುಕ್ತ ಪೊಲೀಸರಿಗೆ ಸ್ನೇಹಮಯಿ ಕೃಷ್ಣ ದೂರು

ಮೈಸೂರು, ಡಿ.5(ಆರ್‌ಕೆ)– ಮುಡಾದ ಶೇ. 50:50ರ ಅನುಪಾತದಡಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಮಂಜೂರು ಮಾಡಿ, ಅದರಿಂದ ಬಂದ ಹಣವನ್ನು ಅಧಿಕಾರಿಗಳು ತಮ್ಮ ಕುಟುಂಬಸ್ಥರ ಹೆಸರಲ್ಲಿ ಬೇರೆ ಬೇರೆ ಕಡೆ ಹೂಡಿಕೆ ಮಾಡಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಮೈಸೂರಿನ ಲೋಕಾಯುಕ್ತ ಎಸ್ಪಿ ಕಚೇರಿಗೆ ಇಂದು ದೂರು ನೀಡಿದ್ದಾರೆ.



ಈ ಹಿಂದಿನ ಮುಡಾ ಆಯುಕ್ತ ಡಾ.ಡಿ.ಬಿ.ನಟೇಶ್ ತಮ್ಮ ಪತ್ನಿ ರಶ್ಮಿ ಅವರನ್ನು ನಾಲ್ಕು ಕಂಪನಿಗಳಿಗೆ ಪಾಲುದಾರರನ್ನಾಗಿ ಮಾಡಿ ಕೋಟ್ಯಾಂತರ ರೂ. ಹೂಡಿಕೆ ಮಾಡಿದ್ದಾರೆ. ಸ್ಟೋನ್ ವೆಂಚರ್ಸ್, ಕಾವೇರಿ ಕಂಪನಿ, ವಿಪಸನಾ ಹೆಲ್ತ್ ಕೇರ್, ಅಕಿನೋವಾ ಹೆಲ್ತ್ ಕೇರ್ ಹೀಗೆ ನಾಲ್ಕು ಕಂಪನಿಗಳಲ್ಲಿ ಅವರು ನಿರ್ದೇಶಕಿಯಾಗಿದ್ದಾರೆ. ನಟೇಶ್ ಅವರು ತಮ್ಮ ಪತ್ನಿ ಮೂಲಕ ಈ ಕಂಪನಿಗಳಿಗೆ ಹಣ ಹೂಡಿಕೆ ಮಾಡಿರುವುದಲ್ಲದೆ, ಬೋಗಾದಿಯ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್, ಇಲವಾಲ ಬಳಿ 1 ಎಕರೆ 30 ಗುಂಟೆ ಭೂಮಿ ಖರೀದಿಸಿದ್ದಾರೆ. ಈ ಬಗ್ಗೆ ನನಗೆ ದಾಖಲಾತಿಗಳು ಸಿಕ್ಕಿದ ಹಿನ್ನೆಲೆಯಲ್ಲಿ ನಾನು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿ ತನಿಖೆ ಮಾಡುವಂತೆ ಮನವಿ ಮಾಡಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ಸುದ್ದಿಗಾರರಿಗೆ ತಿಳಿಸಿದರು.

ರಾಜೀವ್ ದಾಖಲೆ ಬಿಡುಗಡೆ ಮಾಡಲಿ: ಈ ಸಂಬಂಧ ತಾವು ಜಾರಿ ನಿರ್ದೇಶನಾಲಯಕ್ಕೂ ದೂರು ಕೊಟ್ಟಿದ್ದೇನೆ. ಅವರು ಕರೆದಾಗ ಅಗತ್ಯ ದಾಖಲಾತಿಗಳೊಂದಿಗೆ ವಿಚಾರಣೆಗೆ ಹಾಜರಾಗುವೆ ಎಂದ ಅವರು, ಲೋಕಾಯುಕ್ತಕ್ಕೆ ಮುಡಾ ಹಗರಣ ತನಿಖೆ ಕುರಿತಂತೆ ಇಡಿ ಅಧಿಕಾರಿಗಳು ಪತ್ರ ಬರೆದಿರುವುದರಿಂದ ನಾನು ಮಾಡಿದ್ದ ಆರೋಪ ಮೇಲ್ನೋಟಕ್ಕೆ ಸಾಬೀತಾದಂತೆ ಕಂಡುಬಂದಿದೆ. ಅಲ್ಲದೆ, ಕಾನೂನುಪ್ರಕಾರ ಸಿಎಂ ಪತ್ನಿ ಪಾರ್ವತಿ ಅವರಿಗೆ ನಿವೇಶನಗಳನ್ನು ನೀಡಿದ್ದೇವೆ ಎಂದು ಹೆಚ್.ವಿ.ರಾಜೀವ್ ಹೇಳಿದ್ದು ಯಾವ ಕಾನೂನಿನ ಅಡಿಯಲ್ಲಿ ಅಥವಾ ಯಾವ ನ್ಯಾಯಾಲಯದ ಆದೇಶದ ಪ್ರಕಾರ ನಿವೇಶನ ನೀಡಿದ್ದೇವೆ ಎಂಬುದನ್ನು ಅವರು ದಾಖಲೆ ಸಮೇತ ಮಾಹಿತಿ ನೀಡಲಿ. ಅದು ಅಕ್ರಮ ಎಂಬುದಕ್ಕೆ ನಾನು ಸಾಕಷ್ಟು ದಾಖಲಾತಿ ಬಿಡುಗಡೆ ಮಾಡಿದ್ದೇನೆ. ರಾಜೀವ್ ಅವರು ಹೇಳಿರುವ ಹೇಳಿಕೆ ಜನರನ್ನು ದಿಕ್ಕು ತಪ್ಪಿಸುವ ಹೇಳಿಕೆ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಮೇಲ್ಮನವಿ: ಪಾರ್ವತಿ ಅವರಿಗೆ ನಿವೇಶನ ನೀಡಲು ಸಿದ್ದರಾಮಯ್ಯ ಅವರ ಪ್ರಭಾವ ಇದೆ ಎಂಬುದಕ್ಕೆ ನಾನು ದಾಖಲೆ ಸಮೇತ ಸಾಕ್ಷಿ ನೀಡಿದ್ದೇನೆ. ಮುಖ್ಯಮಂತ್ರಿಗಳು ಲಿಖಿತವಾಗಿಯೇ ಶಿಫಾರಸು ಮಾಡಬೇಕು ಎಂದೇನಿಲ್ಲ. ಮೌಖಿಕ ಸಾಕ್ಷಿಗಳೂ ಪರಿಗಣನೆ ಆಗುತ್ತವೆ ಎಂದ ಸ್ನೇಹಮಯಿ ಕೃಷ್ಣ, ಉಚ್ಚ ನ್ಯಾಯಾಲಯ ನೀಡಿದ್ದ ಆದೇಶ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಲ್ಮನವಿ ಸಲ್ಲಿಸಿರುವುದು ಸರಿಯಷ್ಟೆ, ಆದರೆ ಅದು ವಜಾ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಅವರ ಮೇಲ್ಮನವಿಯನ್ನು ಪರಿಗಣಿಸಬೇಕಾದ ಯಾವುದೇ ಅಂಶ ಅವರ ಅರ್ಜಿಯಲ್ಲಿ ಇಲ್ಲ ಎಂದರು.

ಮುಖ್ಯಮಂತ್ರಿಗಳ ಪತ್ನಿಗೆ ನಿವೇಶನ ನೀಡಿರುವುದು ಸೇರಿದಂತೆ ಮುಡಾದಲ್ಲಿ ಮಂಜೂರಾಗಿರುವ ನಿವೇಶನಗಳ ತನಿಖೆ ಮಾಡುವಂತೆ ತಾವು ಸಲ್ಲಿಸಿರುವ ಅರ್ಜಿ ಡಿಸೆಂಬರ್ 10ರಂದು ವಿಚಾರಣೆಗೆ ಬರಲಿದ್ದು, ನ್ಯಾಯಾಲಯವು ಈ ಪ್ರಕರಣವನ್ನು ಸಿಬಿಐಗೆ ನೀಡುವ ಸಾಧ್ಯತೆ ಇದೆ. ಅದಕ್ಕೆ ಬೇಕಾಗಿರುವ ಸಾಕ್ಷ್ಯಾಧಾರಗಳು, ದಾಖಲಾತಿಗಳು ನನ್ನ ಬಳಿ ಇವೆ. ಅವುಗಳ ಆಧಾರದ ಮೇಲೆ ನ್ಯಾಯಾಲಯವು ಸಿಬಿಐಗೆ ವಹಿಸುವ ಸಾಧ್ಯತೆ ಹೆಚ್ಚಾಗಿದೆ ಎಂದೂ ಇದೇ ವೇಳೆ ತಿಳಿಸಿದರು.

ಡಿ.ಉಮಾಪತಿಯವರಿಗೆ ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ

ಬೆಂಗಳೂರು, ಡಿ.5– ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಸಕ್ತ ವರ್ಷದಿಂದ ಪ್ರಾರಂಭಿಸಿರುವ 'ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ' ಪ್ರಶಸ್ತಿಗೆ ಹಿರಿಯ ಪತ್ರಕರ್ತರಾದ ಡಿ.ಉಮಾಪತಿ ಅವರನ್ನು ಆಯ್ಕೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಇಲಾಖೆಯ ಆಯುಕ್ತರಾದ ಹೇಮಂತ್ ಎಂ.ನಿಂಬಾಳ್ಕರ್ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಪತ್ರಿಕೋದ್ಯಮದಲ್ಲಿ ಸಾಮಾಜಿಕ ನ್ಯಾಯ ಕುರಿತು ವರದಿ ,ವಿಶೇಷ ಲೇಖನಗಳ ಪ್ರಕಟಣೆಯನ್ನು ಗುರುತಿಸಿ, ಗೌರವಿಸುವ ಉದ್ದೇಶದಿಂದ ಮುಖ್ಯಮಂತ್ರಿಯವರು 2024ರ ಆಯವ್ಯಯದಲ್ಲಿ ಹಿರಿಯ ಪತ್ರಕರ್ತ ವಡ್ಡರ್ಸೆ ರಘುರಾಮಶೆಟ್ಟಿ ಅವರ ಹೆಸರಿನಲ್ಲಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ ಘೋಷಿಸಿದ್ದರು. ನ್ಯಾ.ಅಶೋಕ ಹಿಂಚಿಗೇರಿ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಪ್ರಶಸ್ತಿ ಆಯ್ಕೆ ಸಮಿತಿಯು ಒಮ್ಮತದಿಂದ ಹಿರಿಯ ಪತ್ರಕರ್ತ ಡಿ. ಉಮಾಪತಿಯವರನ್ನು ವಡ್ಡರ್ಸೆ ರಘುರಾಮಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆ ಮಾಡಿತ್ತು ಪ್ರಶಸ್ತಿಯು 2 ಲಕ್ಷ ರೂ.ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಅಭಿನಂದನೆ



ಹಾಸನದಲ್ಲಿ ಗುರುವಾರ ನಡೆದ ಜನಕಲ್ಯಾಣ ಸ್ವಾಭಿಮಾನಿ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶೋಷಿತ ಸಮಾಜಗಳು ಬೆಂಬಲಿಸಿ ಅಭಿನಂದಿಸಿದವು. ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಎಸ್.ಯೋಗೇಶ್ ಉಪ್ಪಾರ್, ಜಿಲ್ಲಾ ವಿಶ್ವಕರ್ಮ ಬಡಗಿಗಳ ಸಂಘದ ಅಧ್ಯಕ್ಷ ಮೊಗಣ್ಣಾಚಾರ್, ಲೋಕೇಶ್ ಕುಮಾರ್ ಮಾದಾಪುರ, ಸಿದ್ದು ಕೆಸರೆ, ಶಿಂಶ ದಿನೇಶ್, ಮೈಸೂರು ಜಿಲ್ಲಾ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಶಿವಪ್ಪ ಕೋಟೆ ಅವರುಗಳು ಉಪಸ್ಥಿತರಿದ್ದರು.

ತಂಬಾಕು ಉತ್ಪನ್ನ ಮಾರಾಟ ಪರವಾನಗಿಗೆ ಅರ್ಜಿ ಆಹ್ವಾನ

ಮೈಸೂರು, ಡಿ.5–ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ವ್ಯಾಪಾರಿಗಳು ಕಡ್ಡಾಯವಾಗಿ ಪ್ರತ್ಯೇಕವಾಗಿ ಪರವಾನಗಿ ಪಡೆಯಬೇಕಾಗಿದ್ದು, ಪುರಸಭೆಯಿಂದ ಅರ್ಜಿ ನಮೂನೆಯನ್ನು ಪಡೆದು ಆಧಾರ್ ಕಾರ್ಡ್ ನಕಲು, ಬಾಡಿಗೆ ಕರಾರು ಪ್ರತಿ, ಉದ್ದಿಮೆ ಪರವಾನಗಿ ಹಾಗೂ ಅರ್ಜಿದಾರರ ಭಾವಚಿತ್ರ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಡಿಸೆಂಬರ್ 10 ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಶುಲ್ಕ ರೂ.500/– ಆಗಿದ್ದು 5 ವರ್ಷ ಚಾಲ್ತಿಯಲ್ಲಿರುತ್ತದೆ ಎಂದು ಬನ್ನೂರು ಪುರಸಭೆಯ ಮುಖ್ಯ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿಂದ ಹಾಸನ ಕಾಂಗ್ರೆಸ್ ಸಮಾವೇಶಕ್ಕೆ 1300ಕ್ಕೂ ಅಧಿಕ ಬಸ್

- ನಗರ ಸಾರಿಗೆಯ 287, ಗ್ರಾಮಾಂತರ ವಿಭಾಗದಿಂದ 350 ಬಸ್
- ಬಸ್ ಸೌಕರ್ಯವಿಲ್ಲದೆ ವಿದ್ಯಾರ್ಥಿಗಳು, ನೌಕರರು, ಜನಸಾಮಾನ್ಯರ ಪರದಾಟ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಬಸ್‌ಗಾಗಿ ಕಾಯುತ್ತಿರುವ ಪ್ರಯಾಣಿಕರು, ವಿದ್ಯಾರ್ಥಿಗಳು.

ಮೈಸೂರು,ಡಿ.5(ಎಂಟಿವೈ)– ಹಾಸನದ ಅರಸೀಕೆರೆ ರಸ್ತೆಯ ಎಸ್.ಎಂ. ಕೃಷ್ಣ ನಗರದಲ್ಲಿ ನಡೆದ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 637 ಬಸ್ ಸೇರಿದಂತೆ ಮೈಸೂರು ಜಿಲ್ಲೆಯಿಂದಲೇ 1300ಕ್ಕೂ ಹೆಚ್ಚು ಬಸ್ ವ್ಯವಸ್ಥೆ ಮಾಡಿದ್ದರಿಂದ ಮೈಸೂರಲ್ಲಿ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಸಮರ್ಪಕ ಬಸ್ ವ್ಯವಸ್ಥೆಯಿಲ್ಲದೆ ಪರದಾಡಿದರು.

ರಾಜಕೀಯ ಸಮಾವೇಶಗಳಿಗೆ ಸಾರಿಗೆ ಸಂಸ್ಥೆ ಈ ಹಿಂದಿನಿಂದಲೂ ಬಸ್‌ಗಳ ವ್ಯವಸ್ಥೆ ಕಲ್ಪಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಹಾಸನದಲ್ಲಿ ನಡೆದ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶಕ್ಕಾಗಿ ಮೈಸೂರು ನಗರ ಸಾರಿಗೆ ವಿಭಾಗದಿಂದ 287, ಗ್ರಾಮಾಂತರ ವಿಭಾಗದಿಂದ 350 ಬಸ್ ನೀಡಿತ್ತು. ಇದರೊಂದಿಗೆ ಖಾಸಗಿ ಬಸ್‌ಗಳು ಸೇರಿದಂತೆ ಮೈಸೂರು ಜಿಲ್ಲೆಯಿಂದ ಕಾರ್ಯಕರ್ತರನ್ನು ಸಮಾವೇಶಕ್ಕೆ ಕರೆದೊಯ್ಯಲು 1300ಕ್ಕೂ ಹೆಚ್ಚು ಬಸ್ ವ್ಯವಸ್ಥೆ ಮಾಡಿದ್ದರಿಂದ ಮೈಸೂರಲ್ಲಿ ಬಸ್‌ಗಳಿಲ್ಲದೆ ಪ್ರಯಾಣಿಕರು ತೊಂದರೆಗೀಡಾದರು.

ಸಾರಿಗೆ ಸಂಸ್ಥೆಯ ಎರಡೂ ಘಟಕಗಳಿಂದ ಬಹುತೇಕ ಬಸ್‌ಗಳು ಕಾಂಗ್ರೆಸ್ ಸಮಾವೇಶಕ್ಕೆ ತೆರಳಿದ್ದರಿಂದ ಮೈಸೂರು ನಗರ ಸೇರಿದಂತೆ ಗ್ರಾಮಾಂತರ ಪ್ರದೇಶಗಳಿಗೆ ಸಂಚರಿಸುತ್ತಿದ್ದ ಬಸ್‌ಗಳಿಲ್ಲದೆ ಪ್ರಯಾಣಿಕರು ಪರದಾಡಿದರು. ಅದರಲ್ಲೂ ಸಾರಿಗೆ ಬಸ್‌ಗಳನ್ನೇ ಅವಲಂಬಿಸಿದ್ದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಸಂಘಟಿತ ವಲಯಗಳ ಕಾರ್ಮಿಕರು, ನೌಕರರು, ಜನಸಾಮಾನ್ಯರು ಬಸ್‌ಗಾಗಿ ಗಂಟೆಗಟ್ಟಲೇ ರಸ್ತೆ ಬದಿ ಕಾದು ಬಸವಳಿದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಮಾವೇಶಕ್ಕೆ ಸಾರಿಗೆ ಬಸ್‌ಗಳೊಂದಿಗೆ ಹೆಚ್ಚಿನ ಸಂಖ್ಯೆಯ ಖಾಸಗಿ ಬಸ್‌ಗಳು ತೆರಳಿದ್ದರಿಂದ ಮೈಸೂರು, ತಿ.ನರಸೀಪುರ, ಕೊಳ್ಳೇಗಾಲ, ಚಾಮರಾಜನಗರ, ಯಳಂದೂರು ಸೇರಿದಂತೆ ವಿವಿಧೆಡೆ ಸಂಚರಿಸುತ್ತಿದ್ದ ಖಾಸಗಿ ಬಸ್‌ಗಳೂ ಇಲ್ಲದೆ ಗ್ರಾಮೀಣ ಪ್ರದೇಶದ ಪ್ರಯಾಣಿಕರಿಗೆ ತೀವ್ರ ತೊಂದರೆಯುಂಟಾಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಕಾಲದಲ್ಲಿ ತರಗತಿಗೆ ಹಾಜರಾಗಲು ಸಾಧ್ಯವಾಗದೆ ಗೈರು ಹಾಜರಾದರೆ, ಖಾಸಗಿ ವಲಯದ ಕಾರ್ಮಿಕರು ಹಿಡಿಶಾಪ ಹಾಕಿ ಮನೆಗೆ ವಾಪಸ್ಸಾದರು.

ತಂಗುದಾಣಗಳಲ್ಲಿ ಕಾದು ಕುಳಿತ ಪ್ರಯಾಣಿಕರು: ಜಿಲ್ಲೆಯ ವಿವಿಧ ತಾಲೂಕು ಹಾಗೂ ಮೈಸೂರು ತಾಲೂಕಿನ ವಿವಿಧ ಗ್ರಾಮಗಳಿಂದ ಪ್ರತಿದಿನ ನಗರಕ್ಕೆ ಬರುವ ಪ್ರಯಾಣಿಕರು ಎಂದಿನಂತೆ ಇಂದು ಬಸ್‌ಗಾಗಿ ಬಸ್‌ನಿಲ್ದಾಣ, ತಂಗುದಾಣಗಳಲ್ಲಿ ಕಾಯುತ್ತಾ ನಿಂತಿದ್ದ ದೃಶ್ಯ ಕಂಡು ಬಂದಿತು. ಆದರೆ, ಸಂಚರಿಸಿದ ಕೆಲವೇ ಕೆಲವು ಬಸ್‌ಗಳು ರಶ್ ಆಗಿದ್ದು, ನಿಲ್ಲಿಸದೇ ಹೋಗುತ್ತಿದ್ದುದ್ದರಿಂದ ಪ್ರಯಾಣಿಕರು ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದರು.

ಪ್ರಯಾಣಿಕರಿಗೆ ತೊಂದರೆಯಾಗದಂತೆ ಕ್ರಮ

"ಗ್ರಾಮಾಂತರ ವಿಭಾಗದಿಂದ 350 ಬಸ್‌ಗಳನ್ನು ಸಮಾವೇಶಕ್ಕೆ ಪಡೆದಿದ್ದಾರೆ. ಉಳಿದ ಬಸ್‌ಗಳನ್ನು ಪ್ರಯಾಣಿಕರ ಸೇವೆಗೆ ಬಳಸಿಕೊಳ್ಳಲಾಗಿದೆ. ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ಸೇರಿದಂತೆ ತಾಲೂಕು ಕೇಂದ್ರಗಳಲ್ಲಿ 40ಕ್ಕೂ ಹೆಚ್ಚು ಬಸ್‌ಗಳನ್ನು ಸ್ಥಳೀಯ ಗ್ರಾಮೀಣ ಪ್ರದೇಶಗಳಿಂದ ವ್ಯವಸ್ಥೆ ಮಾಡಲಾಗಿದೆ. ಮೈಸೂರು–ಬೆಂಗಳೂರು ನಡುವೆ ಬೆಂಗಳೂರು ವಿಭಾಗದ ಹೆಚ್ಚುವರಿ ಬಸ್‌ಗಳ ಸಂಚಾರವಿದ್ದು, ಪ್ರಯಾಣಿಕರಿಗೆ ದೊಡ್ಡ ಮಟ್ಟದ ಸಮಸ್ಯೆ ಆಗದಂತೆ ವ್ಯವಸ್ಥೆ ಮಾಡಲಾಗಿದೆ. ಬೇರೆ ಬೇರೆ ವಿಭಾಗಗಳ ಬಸ್‌ಗಳ ಸಂಚಾರ ಹೆಚ್ಚಾಗಿರುವುದರಿಂದ ಸಮಸ್ಯೆ ಉಲ್ಬಣವಾಗಿಲ್ಲ.

–ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಗ್ರಾಮಾಂತರ ಸಾರಿಗೆ ವಿಭಾಗ

ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಚಾಲನೆ

"ನಗರ ವಿಭಾಗದಿಂದ 575 ಬಸ್‌ಗಳಲ್ಲಿ 287 ಬಸ್‌ಗಳನ್ನು ಸಮಾವೇಶಕ್ಕೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರಿಗೆ ಆಗುವ ತೊಂದರೆ ಸರಿಪಡಿಸಲು ಇಂದು ಶಿಫ್ಟ್ ಬದಲಾವಣೆಗೆ ಬಸ್‌ಗಳನ್ನು ಡಿಪೋಗೆ ತರದೇ, ಬಸ್ ನಿಲ್ದಾಣದಲ್ಲಿಯೇ ಚಾಲಕ, ನಿರ್ವಾಹಕರು ಪಾಳಿ ಬದಲಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಸಂಜೆ 6 ಗಂಟೆಗೆ ಮುಗಿಯುತ್ತಿದ್ದ ಜನರಲ್ ಶಿಫ್ಟ್ ಬಸ್‌ಗಳ ಸಂಚಾರವನ್ನು ರಾತ್ರಿ 9 ಗಂಟೆವರೆಗೂ ಮುಂದುವರೆಸಲಾಗಿದ್ದು, ಬಸ್ ನಿಲ್ದಾಣದಲ್ಲಿ ಅಧಿಕಾರಿಗಳಿದ್ದು, ಯಾವ ಮಾರ್ಗದಲ್ಲಿ ಹೆಚ್ಚಿನ ಪ್ರಯಾಣಿಕರಿದ್ದಾರೆ ಎಂದು ಗಮನಿಸಿ, ಕಳುಹಿಸಲಿದ್ದಾರೆ.

–ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ನಗರ ಸಾರಿಗೆ ವಿಭಾಗ

ಮಹಿಳಾ ನಾಟಕೋತ್ಸವಕ್ಕೆ ತೆರೆ

ರಂಗಭೂಮಿಯಲ್ಲಿ ಮಹಿಳಾ ಪ್ರಾತಿನಿಧ್ಯ ಈಗಲೂ ಕಡಿಮೆ

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು



ಮಹಿಳಾ ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ಭರತನಾಟ್ಯ ಮತ್ತು ರಂಗಭೂಮಿ ಕಲಾವಿದರಾದ ಡಾ.ವಿದುಷಿ ಭುವನೇಶ್ವರಿ, ಡಾ.ವಿದುಷಿ ಶಾಂಭವಿ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.5(ಪಿಎಂ)– ರಂಗಭೂಮಿಯಲ್ಲಿ ಮಹಿಳಾ ಪ್ರಾತಿನಿಧ್ಯ ಈಗಲೂ ಕಡಿಮೆಯೇ ಇದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಂಚಲನ ಮೈಸೂರು ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಮಹಿಳಾ ನಾಟಕೋತ್ಸವ 2024–25ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ರಂಗ ಚಟುವಟಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ನಾಟಕಗಳಿಗೆ ಒತ್ತು ನೀಡುವ ಮೂಲಕ ಸಂಚಲನ ಮೈಸೂರು ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದೆ. ಪ್ರತಿಯೊಂದು ಕುಟುಂಬದ ಬಹುಪಾಲು ಭಾಗ ಮಕ್ಕಳು. ಪ್ರತಿ ಕುಟುಂಬವು ಮಕ್ಕಳ ಕೇಂದ್ರೀತವಾಗಿ ನಡೆಯುತ್ತಿರುತ್ತವೆ. ಒಟ್ಟು ರಂಗಭೂಮಿಯಲ್ಲಿ ಮಕ್ಕಳು ಮತ್ತು ಮಹಿಳಾ ಪ್ರಾತಿನಿಧ್ಯ ಗಮನಿಸಿದರೆ ಕಡಿಮೆಯೇ ಇದ್ದು, ಪುರುಷ ಪ್ರಧಾನವೇ ಹೆಚ್ಚಿದೆ ಎಂದರು.

ಬಹುತೇಕ ನಾಟಕಗಳು ಪುರುಷ ಕೇಂದ್ರವಾಗಿಯೇ ನಡೆಯುತ್ತಿದ್ದು, ಕಥೆ ಮುನ್ನಡೆಯುವುದಕ್ಕೆ ಪೂರಕವಾಗಿ ಮಹಿಳಾ ಪಾತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ಸೀಮಿತಗೊಳಿಸಲಾಗಿದೆ ಯಾವುದೇ ಒಂದು ಕುಟುಂಬದಲ್ಲಿ ಮಹಿಳೆಗೆ ಸಿಗಬೇಕಾದ ಪ್ರಾತಿನಿಧ್ಯ ಈಗಲೂ ಕಡಿಮೆಯೇ ಇದೆ. ಇಡೀ ಕುಟುಂಬವೇ ಅವರಿಂದಲೇ ನಡೆಯುತ್ತಿದ್ದರೂ ಯಜಮಾನ ಎಂಬ ಸ್ಥಾನವು ಪುರುಷನಿಗೆ ದಕ್ಕುತ್ತಿದೆ. ಇದು ನಮ್ಮ ದೇಶದಲ್ಲಿ ಮೊದಲಿನಿಂದಲೂ ನಡೆದು ಬಂದಿದೆ ಎಂದು ತಿಳಿಸಿದರು.

ಇದೇ ವೇಳೆ ಭರತನಾಟ್ಯ ಮತ್ತು ರಂಗಭೂಮಿ ಕಲಾವಿದರಾದ ಡಾ.ವಿದುಷಿ ಭುವನೇಶ್ವರಿ, ಡಾ.ವಿದುಷಿ ಶಾಂಭವಿ ಸ್ವಾಮಿ ಅವರಿಗೆ ರಂಗ ಗೌರವ ಶೀರ್ಷಿಕೆಯಡಿ ಸನ್ಮಾನಿಸಲಾಯಿತು. ಡಿ.2ರ ಸೋಮವಾರದಿಂದ ಗುರುವಾರದವರೆಗೆ ನಾಲ್ಕು ನಾಟಕಗಳು ಪ್ರದರ್ಶನ ಕಂಡವು. ಸಮಾರೋಪ ಸಮಾರಂಭದಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ನಾಟಕ ಲೇಖಕ ಪ್ರಸನ್ನ ಕುಮಾರ್ ಕೆರಗೋಡು, ಸಮಾಜ ಸೇವಕ ಸೈಯದ್ ಅಲ್ಲಾಹ್ ಬಕಾಶ್, ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು, ನಿರ್ದೇಶಕ ಪ್ರವೀಣ್ ಕುಮಾರ್ ಮತ್ತಿತರರು ಹಾಜರಿದ್ದರು.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಡಿ.5– ಮೈಸೂರಿನ ಕುವೆಂಪುನಗರದ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಡಿ. 8 ರಂದು ಸಂಜೆ 6.15ಕ್ಕೆ ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಡಿ.9ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿತ್ವ ವಿಕಾಸದ ಬಗ್ಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9448458050, 8618762110 ಸಂಪರ್ಕಿಸಬಹುದು.

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂಖ್ಯೆ:ಮೈನಪ್ರಾನಯೋಶಾ:ಭೂಉಬ:ನಯೋ-1/35/2024-25, ದಿನಾಂಕ: 02.12.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮದರಗಳ್ಳಿ ಗ್ರಾಮದ ಸ.ನಂ.5/1ರಲ್ಲಿ 05ಎಕರೆ 37ಗುಂಟೆ, 5/2ರಲ್ಲಿ 01ಎಕರೆ 15 ಗುಂಟೆ, 6ರಲ್ಲಿ 04ಎಕರೆ 13ಗುಂಟೆ, 7/1ರಲ್ಲಿ 04ಎಕರೆ 19ಗುಂಟೆ, 7/2ರಲ್ಲಿ 03ಎಕರೆ 36ಗುಂಟೆ, 8/1ರಲ್ಲಿ 04ಎಕರೆ 16ಗುಂಟೆ, 8/2ರಲ್ಲಿ 04ಎಕರೆ 10ಗುಂಟೆ ಹಾಗೂ 9/2ರಲ್ಲಿ 03ಎಕರೆ 38ಗುಂಟೆ ಒಟ್ಟು 32ಎಕರೆ 24ಗುಂಟೆ** ವಿಸ್ತೀರ್ಣದ ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ** ಮಾಡುವಂತೆ ಹೆಚ್. ನಾಗೇಂದ್ರ ರಾವಣಕರ್, ಚಂದ್ರಮತಿ ಎನ್ ಕೋಂ ನಾಗರಾಜ್ ಮತ್ತು ಶ್ರೀಮತಿ ವಿಮಲ ಇವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ **ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005** ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/RO/899/2024-25

ಪುರಸಭಾ ಕಾರ್ಯಾಲಯ, ಸಕಲೇಶಪುರ ಹಾಸನ ಜಿಲ್ಲೆ–573134

TOWN MUNICIPAL COUNCIL, SAKLESHPUR, HASSAN DISTRICT

ದೂರವಾಣಿ ಸಂಖ್ಯೆ: 08173–244042 email: itstaff_ulb_sakleshpur@yahoo.com

Website: www.sakaleshpurtown.gov.in

ನಂ/ಮುನಿಸಿ/ಜೆ.ಇ/ಪಿಆರ್/ /2024–25 ದಿನಾಂಕ 04–12–2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆಡಬ್ಲ್ಯೂ–1/2 ನಿಯಮದಂತೆ ಇ–ಪೋರ್ಟಲ್ ಮೂಲಕ ಐಂಟವಾರು ಮರು ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.in ನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.1)ಇಂಡೆಂಟ್ ನಂ:DMA/2024-25/OW/WORK_INDENT 27753/CALL-3 ಅಂದಾಜು ಮೊತ್ತ (ಲಕ್ಷಗಳಲ್ಲಿ): 1.75 2)DMA/2024-25/OW/WORK_INDENT25673/CALL-3 ಅಂದಾಜು ಮೊತ್ತ (ಲಕ್ಷಗಳಲ್ಲಿ): 35.26 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13–12–2024 ಸಂಜೆ 5.30 ಗಂಟೆಗೆ ಸೂಚನೆ:– ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಅಧ್ಯಕ್ಷರು, ಪುರಸಭೆ, ಸಕಲೇಶಪುರ | ಸಹಿ/–ಉಪಾಧ್ಯಕ್ಷರು, ಪುರಸಭೆ, ಸಕಲೇಶಪುರ | ಸಹಿ/–ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/727/ಕೆಎಸ್‌ಎಂಸಿಎ/2024–25

16ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ

ಸದಾ ನಿಮ್ಮ ನೆನಪಿನಲ್ಲಿರುವ ಪತಿ ಚನ್ನನಾಯಕ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

IN THE COURT OF THE HON'BLE III ADDITIONAL DISTRICT AND SESSIONS JUDGE, AT MYSURU.

In the matter of:
R.A No.: 110 of 2024.

Smt. GEETHA.
D/o Sri. Siddegowda, Aged about 50 years., R/at D. No. 2, Behind Shanimahatma Temple, Gokulam, 3rd Stage, Mysuru, Karnataka-570002

Versus

Sri. SHREYAS & OTHERS Mr. SOLAMAN.
S/o Narayana.Major in age. Residing at D. No. 1133/B, 13th Cross, 3rd Stage, Gokulam, Mysuru, Karnataka-570002. RESPONDENT No.8

PAPER PUBLICATION

It is hereby notified to you, the Respondent No. 8 in the above case, that the Appellant has preferred the above Appeal against you before the Hon'ble III Additional District and Sessions Judge, at Mysuru challenging the judgment and decree dated 16th April, 2024 passed by the Learned Additional Small Causes, at Mysuru in O.S. No. 112/2014. The said case now stands posted to 20/12/2024 for your personal appearance at 11 am. If you do not appear on the said date as that time, you will be placed ex- parte and further proceedings will be proceeded with, in your absence.

Given under my hand and seal

By the order of the court
Sd/- Chief Administrative Officer
District and Session Court, Mysuru

Sd/- Advocate for the Plaintiff
Place: Mysore
Date: 27.11.2024

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ IND1138	ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಗೋಡೆ ಜಾಹಿರಾತು ಮಾಡುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (7411654265) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,